ಸಂಪುಟ: 06 ಸಂಚಿಕೆ: 103 ಪುಟಗಳು: 08 ಶುಕ್ರವಾರ 26 ಜೂನ್ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಎಲ್ಲವೂ ನಾನೇ ಅನ್ನುವುದಾಗಲೀ, ನಾನು ಏನೂ ಅಲ್ಲ ಅನ್ನುವುದಾಗಲೀ ಸಲ್ಲ. ಏನನ್ನಾದರೂ ಮಾಡಬಲ್ಲೆ ಎಂಬ ವಿಶ್ವಾಸವಿರಲಿ ಸಾಕು!

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಬದನೆಕಾಯಿ ಮಾರಾಟ ಮಾಡಿ ಬಿಡದಿ ಬಳಿ ಕುಮಾರಣ್ಣ ಜಮೀನು ತಗೊಂಡ್ರಾ, ಪ್ರದೀಪ್ ಈಶ್ವರ್ ವ್ಯಂಗ್ಯ

• ಉದಯವಾಹಿನಿ,ಬೆಂಗಳೂರು

ಭಾಷಣದಲ್ಲಿ ಮಾತ್ರ ಆದರ್ಶ, ಕೃತಿಯಲ್ಲಿ ಮಾತ್ರ ಕಬಳಿಕೆ ಎಂದು ಆರೋಪಿಸಿದ ಜೆಡಿಎಸ್ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದ್ದು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆದಿದ್ದಾರೆ. ಅನಿತಕ್ಕ (ಅನಿತಾ ಕುಮಾರಸ್ವಾಮಿ) ಅವರಿಗೆ ಬಿಡದಿಯಲ್ಲಿ 32 ಎಕ್ರೆ ಎಲ್ಲಿಂದ ಬಂತು ಬಿಡದಿ ಬಳಿ ನೂರಾರು ಎಕ್ರೆ ಹೇಗೆ ಬಂತು? ಇದನ್ನೆಲ್ಲ ರಾಮನಗರದಲ್ಲಿ ಬದನೆಕಾಯಿ ಮಾರಿ ಪಡೆದಿದ್ದಾ? ಎಂದು ಸಾಲು ಸಾಲು ಪ್ರಶ್ನೆ ಕೇಳಿದ್ದಾರೆ. ನಾನು ಅವತ್ತೇ ಬಿಜೆಪಿ ಮತ್ತು ಜೆಡಿಎಸ್‌ಗೆ ಸವಾಲು ಹಾಕಿದ್ದೆ. ನನ್ನಿಂದ ಏನಾದರೂ ಕಾನೂನು ಬಾಹಿರ ಚಟುವಟಿಕೆ ನಡೆದಿದ್ದಯಾ, ಕಾನೂನು ಬಾಹಿರವಾಗಿ ನಾನು ಏನನ್ನಾದರೂ ಹೊಂದಿದ್ದೇನ ಎನ್ನುವುದನ್ನು ಪರಿಶೀಲಿಸುವಂತೆ ಹೇಳಿದ್ದೆ. ನಿಮ್ಮ ಐಟಿಯನ್ನು ಕಳುಹಿಸಿ ಎಂದಿದ್ದೆ. ಇಡಿ ಬಂದು ಪರಿಶೀಲಿಸಲಿ ಎಂದು ತಿಳಿಸಿದ್ದೆ ಎಂಬುದಾಗಿ ಹೇಳಿದ್ದಾರೆ. ಧಮ್ ಇದ್ರೆ ಸರ್ಕಾರ ನನ್ನ ಮನೆಗೆ ಐಟಿ, ಇಡಿಯನ್ನು ಕಳುಹಿಸಲಿ. ನಿಯಮದ ಪ್ರಕಾರ ತೆರಿಗೆ ಕಟ್ಟುತ್ತಿದ್ದೇನೆ.

## ಮಂತ್ರಿ ಪಟ್ಟ: ಲಾಬಿಗೆ ಹೈ ತಡೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸಚಿವಾಕಾಂಕ್ಷಿಗಳಿಂದ ಒತ್ತಡ ಹೆಚ್ಚಾಗುತ್ತಿದ್ದಂತೆ ಸಂಪುಟ ವಿಸ್ತರಣೆ ವಿಷಯದಲ್ಲಿ ಅವಸರ ಬೇಡ ಎನ್ನುವ ಸ್ಪಷ್ಟ ಸಂದೇಶವನ್ನು ಪಕ್ಷದ ಹೈಕಮಾಂಡ್ ರಾಜ್ಯ ನಾಯಕರಿಗೆ ರವಾನಿಸಿದೆ. ಈ ಹಿಂದೆ ಜೂನ್ ಅಂತ್ಯಕ್ಕೆ ಸಂಪುಟ ವಿಸ್ತರಣೆಯಾಗಲಿದೆ ಎಂದು ಹೇಳಲಾಗಿತ್ತು. ರಾಹುಲ್ ಗಾಂಧಿ ಸದ್ಯ ಲಭ್ಯರಿಲ್ಲ. ಡಿ.ಕೆ.ಶಿ ಕುಮಾರ್, ಬಿ.ಕೆ.ಹರಿಪ್ರಸಾದ್ ಹಾಗೂ ಸಿದ್ದರಾಮಯ್ಯ ಮೂವರು ದೆಹಲಿಗೆ ತೆರಳುವ ಲೆಕ್ಕಾಚಾರದಲ್ಲಿಲ್ಲ.

ಇನ್ನೊಂದು ವಾರದ ರಾಜ್ಯದಲ್ಲಿಯೇ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರಿಂದ, ರಾಜ್ಯ ನಾಯಕರ ದೆಹಲಿ ಪ್ರವಾಸ ಈ ತಿಂಗಳಲ್ಲಿ ಆಗುವುದು ಅನುಮಾನ.

ರಾಹುಲ್ ಗಾಂಧಿ ವಿದೇಶದಿಂದ ಜೂ.28ಕ್ಕೆ ದೆಹಲಿಗೆ ಮರಳಲಿದ್ದಾರೆ. ಅನಂತರವೇ ಈ ಮೂವರು ನಾಯಕರನ್ನು ದೆಹಲಿಗೆ ಕರೆಸಿಕೊಂಡು, ಚರ್ಚಿಸುವ ಸಾಧ್ಯತೆಯಿದೆ.

ಜುಲೈನ ಮೂರನೇ ವಾರದಲ್ಲಿ ನಡೆಯುವ ಮಳೆಗಾಲದ ಅಧಿವೇಶನದ ವೇಳೆಗೆ ಸಂಪುಟ ವಿಸ್ತರಣೆಯಾಗುವುದು ನಿಶ್ಚಿತ ಎನ್ನಲಾಗಿದೆ.' ಸಂಪುಟ ಆಕಾಂಕ್ಷಿಗಳು ಸ್ಥಳೀಯ ಮಟ್ಟದಲ್ಲಿ, ಬೆಂಗಳೂರಿನಲ್ಲಿ ಹಾಗೂ ದೆಹಲಿ ಮಟ್ಟದಲ್ಲಿ ಶಕ್ತಿ ಪ್ರದರ್ಶನವನ್ನು ಪದೇಪದೇ ಮಾಡುತ್ತಿರುವುದು ಪಕ್ಷದ ವರ್ಚಸ್ಸನ್ನು ಹಾಳು ಮಾಡುವುದರೊಂದಿಗೆ ಪ್ರತಿಪಕ್ಷಗಳಿಗೆ ಆಹಾರವಾಗುತ್ತಿದೆ.

ಆದ್ದರಿಂದ ಈ ಬಲಪ್ರದರ್ಶನಗಳಿಗೆ ತಡೆ ಹಾಕುವಂತೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.ನಾಯಕರ ಭೇಟಿಗೆ ಪ್ರಯತ್ನ ಮಾಡುವುದರಿಂದ ರಾಜ್ಯದಲ್ಲಿ ಕೆಟ್ಟ ಸಂದೇಶ ರವಾನೆಯಾಗುತ್ತದೆ.

## ವಾರ್ತಾ ಇಲಾಖೆ ಆಯುಕ್ತರಾಗಿ ಅನುಚೇತ್ ಅಧಿಕಾರ ಸ್ವೀಕಾರ

• ಉದಯವಾಹಿನಿ,ಬೆಂಗಳೂರು

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನೂತನ ಆಯುಕ್ತರಾಗಿ ಐಪಿಎಸ್ ಅಧಿಕಾರಿ ಎಂ.ಎನ್ ಅನುಚೇತ್ ಅವರು ಇಂದು ಅಧಿಕಾರ ಸ್ವೀಕರಿಸಿದರು. ಇದುವರೆಗೂ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಎಡಿಜಿಪಿ ಹೇಮಂತ್ ನಿಂಬಾಳ್ಕರ್ ಅವರು ಅನುಚೇತ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಮೂಲತಃ ಕೋಲಾರ ಜಿಲ್ಲೆಯವರಾದ ಅನುಚೇತ್ ಅವರು ಬೆಂಗಳೂರಿನ ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ 2006ರಲ್ಲಿ ಎಲೆಕ್ಟ್ರಾನಿ ಇಂಜಿನಿಯರಿಂಗ್ ಪದವಿ ಮುಗಿಸಿರುವ ಇವರು ತಾಂತ್ರಿಕ ಹಿನ್ನೆಲೆಯನ್ನು ಹೊಂದಿದ್ದಾರೆ. ಬಳಿಕ ನಾಗರಿಕ ಸೇವೆಗೆ ಸೇರುವ ಆಕಾಂಕ್ಷೆಯೊಂದಿಗೆ ಶ್ರಮಿಸಿ, 2008ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಯಶಸ್ಸು ಸಾಧಿಸಿದರು. ತರುವಾಯ 2009ರ ಬ್ಯಾಚ್‌ನ ಕರ್ನಾಟಕ ವೃಂದದ ಐಪಿಎಸ್ ಅಧಿಕಾರಿಯಾಗಿ ಇವರು ಆಯ್ಕೆಯಾದರು.

ಪೊಲೀಸ್ ಇಲಾಖೆಯಲ್ಲಿ ತಂತ್ರಜ್ಞಾನ ಆಧಾರಿತ ಪೊಲೀಸ್ ವ್ಯವಸ್ಥೆ ಹಾಗೂ ಸಮರ್ಥ ಆಡಳಿತಕ್ಕಾಗಿ ಅನುಚೇತ್ ಅವರು ಹೆಸರಾಗಿದ್ದಾರೆ. ಈ ಹಿಂದೆ ಇವರು ಕೈಗೊಂಡ ಅತ್ಯುತ್ತಮ ತನಿಖಾ ಕಾರ್ಯಗಳನ್ನು ಗುರುತಿಸಿ ಕೇಂದ್ರ ಸರ್ಕಾರವು ಇವರಿಗೆ ಪ್ರತಿಷ್ಠಿತ ಕೇಂದ್ರ ಗೃಹ ಸಚಿವರ ತನಿಖೆಗಾಗಿ ಅತ್ಯುತ್ತಮ ಪದಕ ನೀಡಿ ಗೌರವಿಸಿದೆ. 2011ರಲ್ಲಿ ಪುತ್ತೂರಿನ ಸಹಾಯಕ ಪೊಲೀಸ್ ಅಧೀಕ್ಷಕರಾಗಿ ತಮ ವೃತ್ತಿಜೀವನ ಆರಂಭಿಸಿದ ಇವರು, ಆ ಬಳಿಕ ಸಿಐಡಿ ವಿಭಾಗದ ಹಾಗೂ ಚಿತ್ರದುರ್ಗದ ಎಸ್‌ಪಿ ಆಗಿ ಮತ್ತು ಬೆಂಗಳೂರು ನಗರದ ಪಶ್ಚಿಮ ಹಾಗೂ ಕೇಂದ್ರ ವಿಭಾಗದ ಡಿಸಿಪಿ ಆಗಿ ಪ್ರಮುಖ ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ.

## ಜು.29ರಿಂದ ಸೇವಾಸಿಂಧು ಪೋರ್ಟಲ್ ಮೂಲಕ ವಿದ್ಯಾರ್ಥಿ ಬಸ್ ಪಾಸ್ ವಿತರಣೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು, 2026-27ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿ ಬಸ್ ಪಾಸ್‌ಗಳನ್ನು ಸರ್ಕಾರದ ಇಡಿಸಿಎಸ್ ಇಲಾಖೆಯ ಸೇವಾಸಿಂಧು ಪೋರ್ಟಲ್ ಮೂಲಕ ಇದೇ 29 ರಿಂದ ವಿತರಿಸಲಾಗುತ್ತಿದೆ.

ಸರ್ಕಾರವು ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಪ್ರಯಾಣಿಸುವ ರಾಜ್ಯದ ಶಾಲಾ ಕಾಲೇಜುಗಳಲ್ಲಿನ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸಲು ಹಾಗೂ ಈಗಾಗಲೇ ಶುಲ್ಕ ಪಾವತಿಸಿಕೊಂಡು ವಿತರಿಸಿರುವ, ವಿದ್ಯಾರ್ಥಿ ಬಸ್ ಪಾಸ್‌ನ ಮೊತ್ತವನ್ನು ಪಾವತಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಇದೇ 29 ರಿಂದ ಸೇವಾಸಿಂಧು ಪೋರ್ಟಲ್ ಮೂಲಕ ಶುಲ್ಕ ಪಾವತಿಸಿ, ಬಸ್‌ಪಾಸ್‌ಗಳನ್ನು ಪಡೆದಿರುವ ವಿದ್ಯಾರ್ಥಿಗಳು ಪಾಸಿನ ಶುಲ್ಕ ಮರುಪಾವತಿ ಪಡೆಯಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸಲು ಕೋರಲಾಗಿದೆ.




# ತ್ರಿವಳಿ ರಾಜ್ಯಗಳ ಒಡನಾಡಿ ತುಂಗಭದ್ರಾ ಜೀವನಾಡಿ

• ಉದಯವಾಹಿನಿ, ಬೆಂಗಳೂರು

ತುಂಗಭದ್ರಾ ಅಣೆಕಟ್ಟೆಯ ನೂತನ ಕ್ರೆಸ್ಟ್ ಗೇಟ್‌ಗಳ ಲೋಕಾರ್ಪಣೆ ಗುರುವಾರ ನಡೆಯಿತು. ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಹಾಗೂ ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಈ ಲೋಕಾರ್ಪಣೆ ನಡೆಯಿತು. ಅಣೆಕಟ್ಟೆಯ 18ನೇ ಗೇಟ್ ಸಮೀಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪೂಜೆ ಸಲ್ಲಿಸಿ 18ನೇ ಗೇಟ್‌ಗೆ ಚಾಲನೆ ನೀಡುವ ಮೂಲಕ ಲೋಕಾರ್ಪಣೆ ಮಾಡಿದರು.

ಸಿ.ಆರ್.ಪಾಟೀಲ್ ಅವರು 17ನೇ ಗೇಟ್ ಸ್ವಿಚ್ ಅದುಮಿ ಗೇಟ್‌ಗೆ ಚಾಲನೆ ನೀಡಿದರೆ, ಅಂಧ್ರ ಪ್ರದೇಶದ ಸಿಎಂ ಎನ್. ಚಂದ್ರಬಾಬು ನಾಯ್ಡು 19ನೇ ಗೇಟ್ ಉದ್ಘಾಟಿಸಿದರು ಹಾಗೂ ತೆಲಂಗಾಣದ ಸಿಎಂ ಎ.ರೇವಂತ್ ರೆಡ್ಡಿ 20ನೇ ಗೇಟ್ ಉದ್ಘಾಟಿಸಿದರು. ಒಂದೂಕಾಲು ಗಂಟೆ ವಿಳಂಬವಾಗಿ ಉದ್ಘಾಟನೆ ನಡೆಯಿತು. ಕೇಂದ್ರ ಸಚಿವರು ಮತ್ತು ಮೂವರೂ ಸಿಎಂಗಳು ಕೈ ಎತ್ತಿ ಒಗ್ಗಟ್ಟು ಪ್ರದರ್ಶಿಸಿದರು ಹಾಗೂ ಮುಂದೆಯೂ ಜತೆಯಾಗಿ ತುಂಗಭದ್ರಾ ಜಲಾಶಯ ವಿಚಾರದಲ್ಲಿ ಮುನ್ನಡೆಯುವ ಸಂದೇಶ ರವಾನಿಸಿದರು.

ಉದ್ಘಾಟನೆಗೆ ಸಮಾರಂಭದಲ್ಲಿ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಆರಾಧ್ಯ ದೈವ ಶ್ರೀ ಗಂಗಾಧರ ಅಜ್ಜಯ್ಯ ಸ್ವಾಮಿ ಅವರ ಫೋಟೋ ಇರಿಸಲಾಗಿದೆ. ಗೇಟ್ ಲೋಕಾರ್ಪಣೆ ಮಾಡುವ ಮುನ್ನ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ತಮ್ಮ ಪರಮ ಪೂಜ್ಯ, ಆರಾಧ್ಯ ದೈವವಾದ ಗಂಗಾಧರ ಅಜ್ಜಯ್ಯ ಸ್ವಾಮಿಯವರ ಫೋಟೊಗೆ ವಿಶೇಷ ಪೂಜೆ ಹಾಗೂ ನಮನಗಳನ್ನು ಸಲ್ಲಿಸಿದ್ದಾರೆ. ಜಲಾಶಯದ ಗೇಟ್ ದುರಸ್ತಿ ಕಾರ್ಯವು ಯಾವುದೇ ವಿಘ್ನವಿಲ್ಲದೆ ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ಈ ಧಾರ್ಮಿಕ ವಿಧಿವಿಧಾನಕ್ಕೆ ಪ್ರಾಮುಖ್ಯತೆ ನೀಡಲಾಗಿದೆ. ಕೇವಲ ಲೋಕಾರ್ಪಣಾ ಸ್ಥಳ ಮಾತ್ರವಲ್ಲದೆ, ಕೊಪ್ಪಳದ ಮುನಿರಾಬಾದ್‌ನಲ್ಲಿ ಆಯೋಜಿಸಲಾಗಿರುವ ಬೃಹತ್ ಸಮಾವೇಶದ ಮುಖ್ಯ ವೇದಿಕೆಯ ಮೇಲೂ ಗಂಗಾಧರ ಸ್ವಾಮಿಯವರ ಭಾವಚಿತ್ರವನ್ನು ಪ್ರತಿಷ್ಠಾಪಿಸಲಾಗಿದೆ.

ಮೂರು ರಾಜ್ಯಗಳ ಕೋಟ್ಯಂತರ ರೈತರ ಜೀವನಾಡಿಯಾಗಿರುವ, ತುಂಗಭದ್ರಾ ಜಲಾಶಯದಲ್ಲಿ ಹಬ್ಬದ ವಾತಾವರಣ ಮನೆಮಾಡಿದೆ. ಇಡೀ ಡ್ಯಾಂ ಆವರಣ ವಧುವಿನಂತೆ ಕಂಗೊಳಿಸುತ್ತಿದೆ. ಐತಿಹಾಸಿಕ ಜಲಾಶಯದ ಪ್ರವೇಶ ದ್ವಾರವನ್ನು ಸಾಂಪ್ರದಾಯಿಕ ತಳಿರು ತೋರಣಗಳು ಹಾಗೂ ಆಕರ್ಷಕ ಹೂವುಗಳಿಂದ ಶೃಂಗರಿಸಲಾಗಿದೆ.

**ಗಣ್ಯಾತಿಗಣ್ಯರ ದಂಡು:** ದಕ್ಷಿಣ ಭಾರತದ ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲು ಕೇಂದ್ರ ಜಲಶಕ್ತಿ ಸಚಿವರು ಹಾಗೂ ಜಲಾಶಯದ ನೀರನ್ನು ಹಂಚಿಕೊಳ್ಳುವ ಮೂರು ರಾಜ್ಯಗಳಾದ ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದ ಮುಖ್ಯಮಂತ್ರಿಗಳು ಆಗಮಿಸಿದ್ದಾರೆ. ವಿವಿಐಪಿಗಳ ಭೇಟಿಯ ಹಿನ್ನೆಲೆಯಲ್ಲಿ ಇಡೀ ವಿಜಯನಗರ ಜಿಲ್ಲಾಡಳಿತ, ನೀರಾವರಿ ಇಲಾಖೆ ಹಾಗೂ ಟಿ.ಬಿ.ಡ್ಯಾಂ ಆಡಳಿತ ಮಂಡಳಿ ಸಂಪೂರ್ಣ ಅಲರ್ಟ್ ಆಗಿದ್ದು,

**1** ರಾಜ್ಯಗಳ ಕೋಟ್ಯಂತರ ರೈತರ ಜೀವನಾಡಿಯಾಗಿರುವ, ತುಂಗಭದ್ರಾ ಜಲಾಶಯ

**2** ತುಂಗಭದ್ರಾ ಜಲಾಶಯಕ್ಕೆ ಮೊದಲ ಬಾರಿ ಎಲ್ಲಾ 33 ನೂತನ ಕ್ರಸ್ಟ್‌ಗೇಟ್ ಅಳವಡಿಕೆ

**3** ಜಲಾಶಯದ ಸುರಕ್ಷತಾ ವ್ಯವಸ್ಥೆಯಲ್ಲಿ ಹೈಟೆಕ್ ಹೆಜ್ಜೆ ಇಟ್ಟಿದೆ.



### ಸುರಕ್ಷತೆಯೇ ಸರ್ವೋಚ್ಚ ಆದ್ಯತೆ

ಈ ಹಿಂದೆ ಜಲಾಶಯದ ಕಾಂಕ್ರೀಟ್ ಗೋಡೆಗಳು ಅಥವಾ ಗೇಟ್ ಪಿಲ್ಲರ್‌ಗಳು ನೀರಿನ ಒತ್ತಡಕ್ಕೆ ವಾಲುತ್ತಿವೆಯೇ ಎಂಬುದನ್ನು ಪರೀಕ್ಷಿಸಲು ಸಾಂಪ್ರದಾಯಿಕ ಪ್ಲಂಬ್ ಲೈನ್ ವ್ಯವಸ್ಥೆಯನ್ನು ಬಳಸಲಾಗುತ್ತಿತ್ತು. ಅಣೆಕಟ್ಟಿನ ಸುರಕ್ಷತೆಯಲ್ಲಿ ಅತ್ಯಂತ ನಿರ್ಣಾಯಕವಾಗಿರುವ ಮೇಲ್ಮುಖ ಒತ್ತಡ ಮತ್ತು ಸೋರಿಕೆ ನೀರು ಅಂಶಗಳನ್ನು ಈ ಹೊಸ ತಂತ್ರಜ್ಞಾನದೊಂದಿಗೆ ಜೋಡಿಸಲಾಗಿದೆ. ವಿಜಯನಗರ, ಬಳ್ಳಾರಿ, ಕೊಪ್ಪಳ ಸೇರಿ ನೆರೆಯ ಆಂಧ್ರಪ್ರದೇಶದ ಲಕ್ಷಾಂತರ ರೈತ ಕುಟುಂಬಗಳ ಪಾಲಿಗೆ ಜೀವನಾಡಿಯಾಗಿರುವ ತುಂಗಭದ್ರಾ ಜಲಾಶಯದ ಸುರಕ್ಷತೆಯೇ ಈಗ ಸರ್ವೋಚ್ಚ ಆದ್ಯತೆಯಾಗಿದೆ.

### ಕ್ರಸ್ಟ್ ಗೇಟ್‌ಗಳ ವೀಕ್ಷಣೆ, ತಜ್ಞರಿಂದ ಮಾಹಿತಿ

ಗೇಟ್ ಲೋಕಾರ್ಪಣೆ ಮಾಡಿದ ನಂತರ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣದ ತ್ರಿವಳಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರು ಗೇಟ್‌ಗಳ ಕಾರ್ಯಕ್ಷಮತೆಯನ್ನು ಹತ್ತಿರದಿಂದ ವೀಕ್ಷಿಸಿದರು. ಬಳಿಕ ಟಿಬಿ ಡ್ಯಾಂನ ಉನ್ನತಾಧಿಕಾರಿಗಳ ತಂಡವು ಗಣ್ಯರಿಗೆ ಕ್ರಸ್ಟ್ ಗೇಟ್‌ಗಳ ತಾಂತ್ರಿಕ ಕಾರ್ಯವೈಖರಿ ಮತ್ತು ನೀರು ಸರಬರಾಜಿನ ನಿರ್ವಹಣೆಯ ಬಗ್ಗೆ ಸಮಗ್ರ ಮಾಹಿತಿ ನೀಡಿತು.

ಗೇಟ್ ತುರ್ತು ಅಳವಡಿಕೆ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ನೀರಾವರಿ ತಜ್ಞ ಕನ್ನಯ್ಯ ನಾಯ್ಡು ಅವರು, ನೂತನ ಗೇಟ್‌ಗಳ ಸುಧಾರಿತ ವಿನ್ಯಾಸ, ಅಳವಡಿಕೆಯ ಸವಾಲುಗಳು ಹಾಗೂ ಗೇಟ್‌ಗಳ ಅತ್ಯುನ್ನತ ಗುಣಮಟ್ಟದ ಕುರಿತು ಮೂರೂ ರಾಜ್ಯಗಳ ಸಿಎಂಗಳಿಗೆ ಸಂಪೂರ್ಣ ತಾಂತ್ರಿಕ ವಿವರಣೆಯನ್ನು ಪ್ರತ್ಯೇಕವಾಗಿ ಮನವರಿಕೆ ಮಾಡಿಕೊಟ್ಟರು. ಸ್ಥಳೀಯ ಮತ್ತು ಮೂರು ರಾಜ್ಯಗಳ ಸಚಿವರು, ಸಂಸದರು, ಶಾಸಕರು ಇದ್ದರು.

### ಒಂದೆಡೆ ಸಂತಸ, ಇನ್ನೊಂದೆಡೆ ಪರದಾಟ

ಕ್ರಸ್ಟ್ ಗೇಟ್ ಲೋಕಾರ್ಪಣೆ ಕಾರ್ಯಕ್ರಮಕ್ಕಾಗಿ ಹಂಪಿಯ ವಿಠಲ ದೇವಸ್ಥಾನದ ಆವರಣದಲ್ಲಿ ಸಂಚರಿಸುವ ಬ್ಯಾಟರಿ ಚಾಲಿತ ವಾಹನಗಳನ್ನು ಸ್ಥಳಾಂತರಗೊಳಿಸಿರುವುದರಿಂದ ಹಂಪಿ ಸ್ಮಾರಕಗಳ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರು ತೊಂದರೆ ಅನುಭವಿಸುವಂತಾಯಿತು. ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಹೊರಡಿಸಿರುವ ಸಾರ್ವಜನಿಕ ಪ್ರಕಟಣೆಯ ಪ್ರಕಾರ ಜೂ.24, 25ರಂದು ನಡೆಯಲಿರುವ ಸರಕಾರಿ ಕಾರ್ಯಕ್ರಮಕ್ಕೆ ಈ ವಾಹನಗಳನ್ನು ನಿಯೋಜಿಸಲಾಗಿದೆ. ಆದರೆ, ವಾಹನ ಸೇವೆಯಲ್ಲಿ ವ್ಯತ್ಯಯದ ಕುರಿತು 24ನೇ ತಾರೀಕಿನಿಂದ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಿದ್ದರೂ, 23ರಂದೇ ವಾಹನಗಳನ್ನು ಸ್ಥಳಾಂತರಿಸಲಾಗಿತ್ತು. ವಿಠಲ ದೇವಸ್ಥಾನದ ಆವರಣದಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಕಾರ್ಯಾಚರಿಸುತ್ತಿದ್ದ 10 ಬ್ಯಾಟರಿ ಚಾಲಿತ ವಾಹನಗಳನ್ನು ಟಿಬಿ ಡ್ಯಾಂ ಆವರಣದಲ್ಲಿ ತಂದು ನಿಲ್ಲಿಸಲಾಗಿದೆ. ಇದರಿಂದಾಗಿ ದೂರದ ಊರುಗಳಿಂದ ಬಂದಿರುವ ಪ್ರವಾಸಿಗರು, ವೃದ್ಧರು ಮತ್ತು ಮಕ್ಕಳು ಸುಡುಬಿಸಿಲಿನಲ್ಲಿ ದೇವಸ್ಥಾನದವರೆಗೆ ನಡೆದು ಹೋಗಬೇಕಾದ ಅನಿವಾರ್ಯತೆ ಎದುರಾಯಿತು.

### ತಂತ್ರಜ್ಞಾನದ ಕಾರ್ಯ ವಿಧಾನ

ಜಲಾಶಯದ ಸುರಕ್ಷತೆಯನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯಲು ಅತ್ಯಾಧುನಿಕ ವೈರ್‌ಲೆಸ್ ಸೆನ್ಸರ್‌ಗಳನ್ನು ಕ್ರಸ್ಟ್‌ಗೇಟ್‌ಗಳ ಪ್ರಮುಖ ಭಾಗಗಳಲ್ಲಿ ಅಳವಡಿಸಲಾಗಿದೆ. 10 ಕಡೆ ಅಳವಡಿಸಿರುವ ಈ ತ್ರಿಅಕ್ಷೀಯ ಓರೆ ಸಂವೇದಕಗಳು ಕ್ರಸ್ಟ್ ಗೇಟ್‌ಗಳ ರಚನೆಯಲ್ಲಿ ಉಂಟಾಗುವ ಅತ್ಯಂತ ಸೂಕ್ಷ್ಮವಾದ ಚಲನೆ, ವಾಲಿಕೆ ಅಥವಾ ಓರೆಯನ್ನು ಎಕ್ಸ್, ವೈ ಮತ್ತು ಜೆಡ್ ಎಂಬ ಮೂರು ಆಯಾಮಗಳಲ್ಲಿ (3ಡಿ) ಅತ್ಯಂತ ನಿಖರವಾಗಿ ಪತ್ತೆ ಮಾಡುತ್ತದೆ.

ನೀರಿನ ಭಾರೀ ಒತ್ತಡದ ಸಂದರ್ಭದಲ್ಲಿ ಕ್ರಸ್ಟ್‌ಗೇಟ್‌ಗಳು ಮಿಲಿಮೀಟರ್‌ನಷ್ಟು ಅಲುಗಾಡಿದರೂ ಈ ತಂತ್ರಜ್ಞಾನ ತಕ್ಷಣ ಗ್ರಹಿಸುತ್ತದೆ. ಕ್ರಸ್ಟ್‌ಗೇಟ್ ಪಕ್ಕದ ಕಲ್ಲಿನ ಗೋಡೆಗೆ ಅಳವಡಿಸಲಾಗಿರುವ ಈ ರಿಪೀಟರ್ ಸಾಧನವು, ಸೆನ್ಸರ್‌ಗಳು ಕಳುಹಿಸುವ ಪ್ರತಿಯೊಂದು ತಾಂತ್ರಿಕ ದತ್ತಾಂಶವನ್ನು ವೈರ್‌ಲೆಸ್ ಆಂಟೆನಾ ಮೂಲಕ ಸ್ವೀಕರಿಸಿ, ಜಲಾಶಯದ ಮುಖ್ಯ ನಿಯಂತ್ರಣ ಕೊಠಡಿಗೆ ರವಾನಿಸುತ್ತದೆ.

## ಜುಲೈ 1ರಿಂದ ಬೆಂಗಳೂರಲ್ಲಿ ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನ : ಕೃಷ್ಣ ಭೈರೇಗೌಡ

• ಉದಯವಾಹಿನಿ, ಬೆಂಗಳೂರು

ನಗರದ ಪಾದಚಾರಿ ಮಾರ್ಗಗಳನ್ನು ಸಾರ್ವಜನಿಕರ ಸುರಕ್ಷಿತ ಸಂಚಾರಕ್ಕೆ ಮುಕ್ತಗೊಳಿಸುವ ಉದ್ದೇಶದಿಂದ ಜುಲೈ 1ರಿಂದ ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನ ಆರಂಭಿಸಲಾಗುವುದು ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿಗಳ ಕುರಿತು ನಡೆದ ಸಭೆಯ ಬಳಿಕ ಮಾತನಾಡಿದ ಅವರು, ಜಿಬಿಎ ವ್ಯಾಪ್ತಿಯ ಆರ್ಟೀರಿಯಲ್ ಹಾಗೂ ಸಬ್-ಆರ್ಟೀರಿಯಲ್ ರಸ್ತೆಗಳ ಸುಮಾರು 2,000 ಕಿ.ಮೀ ವ್ಯಾಪ್ತಿಯಲ್ಲಿ ಪಾದಚಾರಿಗಳ ಸಂಚಾರಕ್ಕೆ ಅಡ್ಡಿಯಾಗಿರುವ ಎಲ್ಲಾ ಅಡೆತಡೆಗಳನ್ನು ತೆರವುಗೊಳಿಸಲು ವಿಶೇಷ ಅಭಿಯಾನ ಕೈಗೊಳ್ಳಲಾಗುತ್ತಿದೆ ಎಂದರು. ಅಂಗಡಿ ಮಾಲೀಕರು ತಮ್ಮ ನಾಮಫಲಕ, ವಸ್ತುಗಳು ಹಾಗೂ ಇತರೆ ಸಾಮಗ್ರಿಗಳಿಂದ ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡಿದ್ದರೆ, ಜುಲೈ ರವರೆಗೆ ಸ್ವಯಂಪ್ರೇರಿತವಾಗಿ ತೆರವುಗೊಳಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ಬಳಿಕ ಪಾಲಿಕೆಯಿಂದಲೇ ತೆರವುಗೊಳಿಸಿ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದರು. ನಗರದಲ್ಲಿ ಪ್ರತಿ ವರ್ಷ ರಸ್ತೆ ಅಪಘಾತಗಳಲ್ಲಿ ಸುಮಾರು 1,000 ಮಂದಿ ಸಾವನ್ನಪ್ಪುತ್ತಿದ್ದು, ಅವರಲ್ಲಿ ಶೇ.30ರಷ್ಟು ಪಾದಚಾರಿಗಳೇ ಆಗಿದ್ದಾರೆ. ಸುರಕ್ಷಿತ ಪಾದಚಾರಿ ಮಾರ್ಗಗಳ ನಿರ್ಮಾಣದಿಂದ ಈ ಪ್ರಮಾಣವನ್ನು ಕಡಿಮೆ ಮಾಡಲು ಸಾಧ್ಯ ಎಂದು ಸಚಿವರು ಹೇಳಿದರು. ಪಾದಚಾರಿ ಮಾರ್ಗಗಳಲ್ಲಿ ವಾಹನ ನಿಲುಗಡೆಗೂ ಕಟ್ಟುನಿಟ್ಟಿನ ನಿರ್ಬಂಧ ಹೇರಲಾಗಿದ್ದು, ನಿಯಮ ಉಲ್ಲಂಘಿಸುವ ವಾಹನಗಳನ್ನು ಟೋಯಿಂಗ್ ಮೂಲಕ ತೆರವುಗೊಳಿಸಲಾಗುವುದು. ರಸ್ತೆಗಳಲ್ಲಿ ಹಾಗೂ ಪಾದಚಾರಿ ಮಾರ್ಗಗಳ ಮೇಲೆ ತಳ್ಳುಗಾಡಿ ವ್ಯಾಪಾರಕ್ಕೂ ಜುಲೈ 1ರಿಂದ ಅವಕಾಶ ಇರುವುದಿಲ್ಲ.



## ಸರ್ಕಾರದ ಕೈಗೊಂಬೆಯಾದ ರಾಜ್ಯ ಚುನಾವಣಾ ಆಯೋಗ: ಛಲವಾದಿ ನಾರಾಯಣಸ್ವಾಮಿ ಆರೋಪ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಕಾಂಗ್ರೆಸ್ ಸರ್ಕಾರದ ಕೈಗೊಂಬೆಯಾಗಿ ರಾಜ್ಯ ಚುನಾವಣಾ ಆಯೋಗವು ಬೆಂಗಳೂರಿನ 27 ವಾರ್ಡ್‌ಗಳಲ್ಲಿ ಎಸ್‌ಐಆರ್ ನಡೆಸುತ್ತಿದೆ. ಇದು ಕಾನೂನು ಬಾಹಿರ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಆರೋಪಿಸಿದ್ದಾರೆ. ರಾಜ್ಯದ ಚುನಾವಣಾ ಆಯೋಗದ ಕಚೇರಿಗೆ ಭೇಟಿ ನೀಡಿ ದೂರು ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈಗಾಗಲೇ ಭಾರತ ಚುನಾವಣಾ ಆಯೋಗವು ವಿಶೇಷ ಮತಪಟ್ಟಿ ಪರಿಷ್ಕರಣೆ (ಎಸ್‌ಐಆರ್) ನಡೆಸುತ್ತಿದೆ.

ಆದರೆ ಇದಕ್ಕೆ ಸಮಾನಾಂತರವಾಗಿ ರಾಜ್ಯ ಚುನಾವಣಾ ಆಯೋಗವು ಎಸ್‌ಐಆರ್ ನಡೆಸುತ್ತಿದೆ. ಇದು ತಪ್ಪು. ಈ ಬಗ್ಗೆ ರಾಜ್ಯ ಚುನಾವಣಾ ಆಯುಕ್ತ ಅನ್ಬುಕುಮಾರ್ ಅವರಿಗೆ ಮನವಿ ಸಲ್ಲಿಸಿರುವುದಾಗಿ ಹೇಳಿದರು.

ಅನಧಿಕೃತವಾಗಿ ಈ ರೀತಿ ಎಸ್‌ಐಆರ್ ನಡೆಸುವುದು ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆ.

ಒಬ್ಬರ ಹೆಸರು ಬೇರೆ ಬೇರೆ ಕ್ಷೇತ್ರಗಳಲ್ಲಿ ಹೆಸರು ಇದ್ದರೆ ಅದನ್ನು ಎಸ್‌ಐಆರ್‌ನಲ್ಲಿ ತೆಗೆಯಲಾಗುತ್ತದೆ. ಇಲ್ಲಿ ಪಕ್ಷಗಳ ಪ್ರಶ್ನೆ ಬರುವುದಿಲ್ಲ, ವ್ಯಕ್ತಿ ಮುಖ್ಯವಾಗುವುದಿಲ್ಲ. ಒಬ್ಬರ ಹೆಸರು ಒಂದೇ ಕಡೆ ಇರಬೇಕು ಎಂಬುದೇ ಇದರ ಪ್ರಮುಖ ಉದ್ದೇಶ ಎಂದು ವಿವರಿಸಿದರು. ಕೇಂದ್ರ ಚುನಾವಣಾ ಆಯೋಗವು ಕಾನೂನು ಪ್ರಕಾರ ಎಸ್‌ಐಆರ್ ನಡೆಸುತ್ತಿದೆ. ಆದರೆ ತಮಗೆ ಬೇಕಾದವರ ಹೆಸರು ಉಳಿಸಲು ಹೀಗೆ ಎಸ್‌ಐಆರ್ ನಡೆಸಲಾಗುತ್ತಿದೆ ಎಂದು ದೂರಲಾಗುತ್ತಿದೆ.

ಇದು ತಪ್ಪು. ಕೇಂದ್ರ ಚುನಾವಣಾ ಆಯೋಗದ ಅನುಮತಿ ಇಲ್ಲದೆ ಮತ್ತೊಂದು ಎಸ್‌ಐಆರ್ ಅನ್ನು ರಾಜ್ಯ ಚುನಾವಣಾ ಆಯೋಗ ಮಾಡುವಂತಿಲ್ಲ. ಆದರೆ ಇಲ್ಲಿ ಕಾಂಗ್ರೆಸ್ ಸರ್ಕಾರ ಮಾಡಿಸುತ್ತಿದೆ. ತಕ್ಷಣ ಇದನ್ನು ಕೈಬಿಡಬೇಕು ಎಂದು



## ಕೆಎಚ್ ಮುನಿಯಪ್ಪರವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಟಿ ಕೃಷ್ಣಪ್ಪ ಒತ್ತಾಯ

ವರದಿ.ಬಾಣಾವರ ಉಮೇಶ್

• ಉದಯವಾಹಿನಿ, ಬೆಂಗಳೂರು



ಕಾಂಗ್ರೆಸ್ ಪಕ್ಷದಲ್ಲಿ ಹಾಗೂ ಮುಖ್ಯಮಂತ್ರಿ ಡಿಕೆ ಶಿವಕುಮಾರ್‌ರವರ ಸಂಪುಟದಲ್ಲಿ ಹಿರಿಯ ಸಚಿವರು ಆಹಾರ ಇಲಾಖೆಯ ಸಚಿವರು ಆಗಿರುವ ಕೆಎಚ್ ಮುನಿಯಪ್ಪ ರವರನ್ನು ಸಚಿವ ಸಂಪುಟ ವಿಸ್ತರಣೆ ಸಮಯದಲ್ಲಿ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಕರ್ನಾಟಕ ರಾಜ್ಯ ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಹಾಗೂ ರಾಷ್ಟ್ರೀಯ ಕಾರ್ಯಾಧ್ಯಕ್ಷ ಟಿ ಕೃಷ್ಣಪ್ಪ ಒತ್ತಾಯಿಸಿದ್ದಾರೆ.

ಇಂದು ಬೆಂಗಳೂರಿನಲ್ಲಿ ಉದಯವಾಹಿನಿ ಪತ್ರಿಕೆಯೊಂದಿಗೆ ಮಾತನಾಡಿದ ಅವರು ಕೆಎಚ್ ಮುನಿಯಪ್ಪ ರವರು ಏಳು ಬಾರಿ ಲೋಕಸಭಾ ಸದಸ್ಯರಾಗಿ ಹಾಗೂ ಕೇಂದ್ರ ಸಚಿವರು ಆಗಿ ಇದುವರೆಗೆ ಉತ್ತಮವಾಗಿ ಸೇವೆ ಸಲ್ಲಿಸಿದ್ದಾರೆ ಇದುವರೆಗೆ ಬಡವರು ದೀನದಲಿತರು ಹಾಗೂ ಧ್ವನಿ ಇಲ್ಲದೆ ಬದುಕುತ್ತಿರುವ ನಾಗರೀಕ ಸಮಾಜವನ್ನು ಮೇಲೆತ್ತುವಂತಹ ಕೆಲಸವನ್ನು ಮಾಡಿದ್ದಾರೆ .

ಈ ಬಾರಿ ದೇವನಹಳ್ಳಿ ಕ್ಷೇತ್ರದಿಂದ ಶಾಸಕರಾಗಿ ಕರ್ನಾಟಕ ಸರ್ಕಾರದ ಸಚಿವ ಸಂಪುಟದಲ್ಲಿ ಎರಡನೇ ಬಾರಿ ಆಹಾರ ಸಚಿವರಾಗಿ ರಾಜ್ಯದ ನಾಲ್ಕುವರೆ ಕೋಟಿ ಬಡವರ್ಗದ ಜನರಿಗೆ ಉತ್ತಮವಾಗಿ ಆಹಾರ ಪದಾರ್ಥಗಳು ಸರ್ಕಾರದ ಅನ್ನಭಾಗ್ಯ ಯೋಜನೆಯಯಲ್ಲಿ ತಲುಪಿಸುವ ನಿಟ್ಟಿನಲ್ಲಿ ತಮ್ಮ ಆಹಾರ ಇಲಾಖೆಯ ಜವಾಬ್ದಾರಿಗಳನ್ನು ಸಮರ್ಥವಾಗಿ ಇದುವರೆಗೂ ನಿಭಾಯಿಸಿಕೊಂಡು ಬಂದಿರುತ್ತಾರೆ .

ಆದ್ದರಿಂದ ಹಿರಿಯರು ಮತ್ತು ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಕಳಂಕವನ್ನು ತೆಗೆದುಕೊಳ್ಳದ ರೀತಿಯಲ್ಲಿ ಸಮರ್ಥವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕೆಎಚ್ ಮುನಿಯಪ್ಪರವರಿಗೆ ಉಪಮುಖ್ಯಮಂತ್ರಿ ಸ್ಥಾನವನ್ನು ನೀಡಬೇಕೆಂದು ರಾಜ್ಯದ 20,000ಕ್ಕೂ ಹೆಚ್ಚು ಪಡಿತರ ವಿತರಕರ ಪರವಾಗಿ ಸರ್ಕಾರವನ್ನು ಹಾಗೂ ಮುಖ್ಯಮಂತ್ರಿ ಡಿಕೆ ಶಿವಕುಮಾರ್‌ರವರಿಗೆ ಮನವಿ ಮಾಡುತ್ತಿದ್ದೆ ಎಂದು ಕೃಷ್ಣಪ್ಪ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದರು.

**ಸಿಎಂ ಡಿಕೆಶಿಗೆ ಮನವಿ**



## ಭೀಕರ ಅವಳಿ ಭೂಕಂಪನಕ್ಕೆ 40 ಸಾವು

• ಉದಯವಾಹಿನಿ, ಕಾರಕಾಸ್

ಲ್ಯಾಟಿನ್ ಅಮೆರಿಕದ ಪ್ರಮುಖ ದೇಶವಾದ ವೆನೆಜುವೆಲಾದಲ್ಲಿ ಸಂಭವಿಸಿದ ಇತಿಹಾಸದಲ್ಲೇ ಅತ್ಯಂತ ಭೀಕರ ಅವಳಿ ಭೂಕಂಪಕ್ಕೆ ಇಡೀ ದೇಶವೇ ನಲುಗಿಹೋಗಿದೆ. ಕೇವಲ 39 ಸೆಕೆಂಡುಗಳ ಅಂತರದಲ್ಲಿ ಸಂಭವಿಸಿದ 7.2 ಮತ್ತು 7.5 ತೀವ್ರತೆಯ ಈ ಪ್ರಬಲ ಭೂಕಂಪಗಳು ರಾಜಧಾನಿ ಕಾರಕಾಸ್ ಸೇರಿದಂತೆ ಹಲವು ಪ್ರಮುಖ ನಗರಗಳನ್ನು ಸಂಪೂರ್ಣವಾಗಿ ಧ್ವಂಸಗೊಳಿಸಿವೆ.

ಇತ್ತೀಚಿನ ವರದಿಗಳ ಪ್ರಕಾರ, ಕನಿಷ್ಠ 40 ಜನರು ಸಾವನ್ನಪ್ಪಿದ್ದಾರೆ ಮತ್ತು 700ಕ್ಕೂ ಹೆಚ್ಚು ಮಂದಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ. ಆದರೆ, ಅವಶೇಷಗಳ ಅಡಿಯಲ್ಲಿ ಸಾವಿರಾರು ಜನರು ಸಿಲುಕಿರುವ ಆತಂಕವಿದ್ದು, ಸಾವಿನ ಸಂಖ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚಾಗುವ ಸಾಧ್ಯತೆಯಿದೆ. ಸ್ಥಳೀಯ ಕಾಲಮಾನ ಸಂಜೆ 6:04 ರ ಸುಮಾರಿಗೆ ಉತ್ತರ-ಕೇಂದ್ರ ವೆನೆಜುವೆಲಾದ ಯಾರಾಕುಯ್ ಪ್ರಾಂತ್ಯದ ವೆರೋಸ್ ಮುನ್ಸಿಪಾಲಿಟಿಯನ್ನು ಕೇಂದ್ರವಾಗಿಟ್ಟುಕೊಂಡು ಮೊದಲ ಭೂಕಂಪನ (ತೀವ್ರತೆ 7.2) ಸಂಭವಿಸಿತು.

ಇದರ ಬೆನ್ನಲ್ಲೇ ಕೇವಲ 39 ಸೆಕೆಂಡುಗಳ ಅಂತರದಲ್ಲಿ ಮತ್ತೊಂದು ಭೀಕರ ಭೂಕಂಪನ (ತೀವ್ರತೆ 7.5) ಇಡೀ ದೇಶವನ್ನು ಬೆಚ್ಚಿಬೀಳಿಸಿತು.



ಈ ಅವಳಿ ಕಂಪನಗಳು ಎಷ್ಟು ಪ್ರಬಲವಾಗಿದ್ದವೆಂದರೆ, ನೆರೆದೇಶಗಳಾದ ಕೊಲಂಬಿಯಾ, ಬ್ರೆಜಿಲ್ ಹಾಗೂ ಕೆರಿಬಿಯನ್ ದ್ವೀಪಗಳಾದ ಅರುಬಾ, ಬೊನೈರ್ ಮತ್ತು ಡೊಮಿನಿಕನ್ ರಿಪಬ್ಲಿಕ್‌ವರೆಗೂ ಭೂಮಿ ನಡುಗಿದೆ. ಜೂನ್ 24 ವೆನೆಜುವೆಲಾದಲ್ಲಿ 'ಬ್ಯಾಟಲ್ ಆಫ್ ಕರಾಬೊಬೊ' ಸರಣೆಯ ರಾಷ್ಟ್ರೀಯ ರಜಾ ದಿನವಾಗಿದ್ದರಿಂದ ಬಹುತೇಕ ಜನರು ಕಚೇರಿಗಳ ಬದಲಿಗೆ ಮನೆಗಳಲ್ಲೇ ಇದ್ದರು.

ವಸತಿ ಸಮುಚ್ಚಯಗಳು ಕುಸಿದಾಗ ಭಾರಿ ಪ್ರಮಾಣದ ಜನರು ಸಿಲುಕಿಕೊಳ್ಳಲು ಕಾರಣವಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 111.68 ₹/L ಡೀಸೆಲ್ : 99.56₹/L ಬಂಗಾರ: ₹ 14,133/Gram 24ct ₹12,955/Gram 22ct ಬೆಳ್ಳಿ: ₹235.00/Gram

# ಬೆಂಕೋ.ಶ್ರೀ ಜೀವನ ಸಾಧನೆಯ ಹಾದಿ ಅನಾವರಣ; ನೊಣವಿನಕೆರೆ ಶ್ರೀಗಳ ಆಶೀರ್ವಚನ

• **ಉದಯವಾಹಿನಿ, ಬೆಂಗಳೂರು**

ನಿರ್ಮಾಪಕ ಬಿ.ಕೆ. ಶ್ರೀನಿವಾಸ್ ಅವರ ಸಿನಿಮಾ, ವ್ಯಾಪಾರ, ಹೋರಾಟ ಮತ್ತು ಅಜೇಯ ಮನೋಬಲದ ಬದುಕಿನ ಪಯಣವನ್ನು ದಾಖಲಿಸಿರುವ 'ಬಿ.ಕೆ. ಶ್ರೀನಿವಾಸ ಒಂದು ಅಸಾಮಾನ್ಯ ಜೀವನಯಾನ' ಪುಸ್ತಕದ ಬಿಡುಗಡೆ ಸಮಾರಂಭ ನಗರದ ಗಾಂಧಿ ಭವನದಲ್ಲಿ ನಡೆಯಿತು.

ನೊಣವಿನಕೆರೆ ಕಾಡು ಸಿದ್ದೇಶ್ವರ ಮಠದ ಶ್ರೀ ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಮಹಾಸ್ವಾಮಿಗಳು ಪುಸ್ತಕವನ್ನು ಲೋಕಾರ್ಪಣೆ ಮಾಡಿ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷರಾದ ಕೆ.ವಿ. ಚಂದ್ರಶೇಖರ್ ಹಾಗೂ ಸಾ.ರಾ. ಗೋವಿಂದು, ಪತ್ರಕರ್ತ ಜೋಗಿ, ಬಿಗ್


ಉದಯವಾಹಿನಿ ಚಿತ್ರ

ಬಾಸ್ ಖ್ಯಾತಿಯ ಜಾಹ್ನವಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಬೆಂ.ಕೋ.ಶ್ರೀ ನಾನು ಕಡುಬಡ ಕುಟುಂಬದಲ್ಲಿ ಜನಿಸಿದವನು. ಗುಡಿಸಲಿನಲ್ಲಿ ಬೆಳೆದ ನಾನು ಒಂಬತ್ತನೇ ತರಗತಿವರೆಗೆ ಮಾತ್ರ ಶಿಕ್ಷಣ ಪಡೆದಿದ್ದೇನೆ. ಸಿನಿಮಾ ಮೇಲಿನ ಅಪಾರ ಆಸಕ್ತಿ ನನ್ನನ್ನು ಈ ಕ್ಷೇತ್ರದತ್ತ ಸೆಳೆಯಿತು. ಗಳಿಸಿದುದರಲ್ಲಿ ಕೆಲವು ಕಳೆದುಕೊಂಡಿದ್ದರೂ ಬದುಕಿನ ಹೋರಾಟವನ್ನು ಎಂದಿಗೂ ಕೈಬಿಡಲಿಲ್ಲ. ನೊಣವಿನಕೆರೆ ಕಾಡು ಸಿದ್ದೇಶ್ವರ ಮಠದ ಶ್ರೀಗಳ ಆಶೀರ್ವಾದ ನನ್ನ ಬದುಕಿಗೆ ಹೊಸ ದಿಕ್ಕು ನೀಡಿದೆ'' ಎಂದು ತಮ್ಮ ಜೀವನ ಪಯಣವನ್ನು ಹಂಚಿಕೊಂಡರು. ಸಾ.ರಾ. ಗೋವಿಂದು ಮಾತನಾಡಿ ಚಿತ್ರರಂಗದಿಂದ ನಿರೀಕ್ಷಿತ ಬೆಂಬಲ ಸಿಗದಿದ್ದರೂ ಅವರು ತಮ್ಮ ನೋವನ್ನು ಎಂದಿಗೂ ಹೊರಹಾಕಲಿಲ್ಲ. ಹೋರಾಟದ ಮೂಲಕವೇ ತಮ್ಮದೇ ಆದ ಸ್ಥಾನವನ್ನು ನಿರ್ಮಿಸಿಕೊಂಡರು'' ಎಂದು ಸ್ಮರಿಸಿದರು.ನಟಿ ಜಾಹ್ನವಿ ಮಾತನಾಡಿ, ''ಬೆಂ.ಕೋ.ಶ್ರೀ ಅವರ ಬದುಕು ಯುವಜನತೆಗೆ ಸ್ಫೂರ್ತಿದಾಯಕ. ಸೀಮಿತ ಶಿಕ್ಷಣ ಹೊಂದಿದ್ದರೂ ತಮ್ಮ ಜೀವನಾನುಭವಗಳನ್ನು ಪುಸ್ತಕ ರೂಪದಲ್ಲಿ ದಾಖಲಿಸಿ ಎಲ್ಲರಿಗೂ ತಲುಪಿಸಿರುವುದು ಅವರ ಸಾಧನೆಯ ಮತ್ತೊಂದು ಮುಖ'' ಎಂದು ಅಭಿಪ್ರಾಯಪಟ್ಟರು.

> ''ಬೆಂ.ಕೋ.ಶ್ರೀ ಅವರ ಜೀವನವೇ ಒಂದು ಪ್ರೇರಣೆಯ ಕಥೆ. ಉತ್ತಮ ಸಿನಿಮಾಗಳ ನಿರ್ಮಾಣ ಅವರ ಆಸಕ್ತಿಯಷ್ಟೇ ಅಲ್ಲ, ಬದುಕಿನ ಧ್ಯೇಯವಾಗಿತ್ತು. ಚಿತ್ರರಂಗದಲ್ಲಿ ಅವರು ಮಾಡಿದ ಸಾಧನೆ ಗಮನಾರ್ಹ'. ಪತ್ರಕರ್ತ ಜೋಗಿ

## ಊಂಜಲ್ ಸಂಗೀತೋತ್ಸವ

• **ಉದಯವಾಹಿನಿ,ಬೆಂಗಳೂರು**


ಉದಯವಾಹಿನಿ ಚಿತ್ರ

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ವಯ್ಯಾಲಿಕಾವಲಿನ 16ನೇ ಅಡ್ಡರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನ(ಟಿಟಿಡಿ)ದಲ್ಲಿ ಜೂನ್ 27, ಶನಿವಾರ ಸಂಜೆ 6-00ಕ್ಕೆ ಭಟ್ ಸಹೋದರಿಯರಾದ ಕು|| ಅನ್ವಿತಾ ಸಾವಿತ್ರಿ ಭಟ್ ಮತ್ತು ಕು|| ಅನುಷಾ ಸಾವಿತ್ರಿ ಭಟ್ ಇವರಿಂದ ಊಂಜಲ್ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಇವರ ಗಾಯನಕ್ಕೆ ಪಿಟೀಲು ವಾದನದಲ್ಲಿ ಕು|| ಅಮೃತವರ್ಷಿಣಿ ಮತ್ತು ಮೃದಂಗ ವಾದನದಲ್ಲಿ ಶ್ರೀ ಲೋಕಪ್ರಿಯ ಗುರುಮೂರ್ತಿ ಸಾಥ್ ನೀಡಲಿದ್ದಾರೆ ಎಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ. ಪಿ. ಭುಜಂಗರಾವ್ ತಿಳಿಸಿದ್ದಾರೆ.

## ಸಮತೋಲನ ಆಹಾರದ ಪಾಠದಲ್ಲಿ ಮೊಟ್ಟೆ ಮಾಂಸಾಹಾರದ ಉಲ್ಲೇಖವಿಲ್ಲ: ಸ್ಥಳೀಯ ಸಂಸ್ಕೃತಿಗೆ ಆದ್ಯತೆಯಿಲ್ಲ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ಆರನೇ ತರಗತಿಗಾಗಿ ಬಿಡುಗಡೆ ಮಾಡಿರುವ ಕನ್ನಡ ಪಠ್ಯಪುಸ್ತಕಕ್ಕೆ ಮಾಜಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ರಾಜ್ಯದೊಂದಿಗೆ ಯಾವುದೇ ಚರ್ಚೆ ನಡೆಸದೇ ಪುಸ್ತಕ ಬಿಡುಗಡೆ ಮಾಡಲಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಈ ಸಂಬಂಧ ಪ್ರತಿಕ್ರಿಯಿಸಿರುವ ಮಾಜಿ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಬಿಜೆಪಿ ಸರ್ಕಾರವು ಮಕ್ಕಳ ಮನಸ್ಸಿನಲ್ಲಿ ಸೈದ್ಧಾಂತಿಕ ವಿಚಾರಗಳನ್ನು ಹೇರಿಕೆ ಮಾಡಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರವು ಅವಧಿಯಲ್ಲಿಯೂ ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಅನೇಕ ತಪ್ಪುಗಳು ಕಂಡುಬಂದಿದ್ದವು ಎಂದು ಮಧು ಬಂಗಾರಪ್ಪ ನೆನಪಿಸಿಕೊಂಡಿದ್ದಾರೆ. ಈ ಪುಸ್ತಕಕ್ಕೆ ''ಕೃಷ್ಣ' ಎಂದು ಹೆಸರಿಡಲಾಗಿದೆ. ಕನ್ನಡದ ವೈಚಾರಿಕ ಪರಂಪರೆ, ಸ್ಥಳೀಯ ಸಂಸ್ಕೃತಿ ಹಾಗೂ ಪ್ರಾದೇಶಿಕ ಜೀವನ ಶೈಲಿಗೆ ಪುಸ್ತಕದಲ್ಲಿ ಆದ್ಯತೆ ನೀಡಿಲ್ಲ ಎಂದು ಮಧು ಬಂಗಾರಪ್ಪ ಹೇಳಿದ್ದಾರೆ.ಸಮತೋಲನ ಆಹಾರದ ಪಾಠದಲ್ಲಿ ಮೊಟ್ಟೆ, ಮೀನು ಮತ್ತು ಮಾಂಸಾಹಾರದ ಕುರಿತು ಯಾವುದೇ ಉಲ್ಲೇಖವಿಲ್ಲ.

ಕೇವಲ ಸಸ್ಯಾಹಾರಕ್ಕೆ ಮಾತ್ರ ಪ್ರಾಮುಖ್ಯತೆ ನೀಡಲಾಗಿದೆ. ಇದು ಸಮತೋಲಿತ ನಿರೂಪಣೆ ಅಲ್ಲ ಎಂದು ಮಧು ಬಂಗಾರಪ್ಪ ಅಭಿಪ್ರಾಯಪಟ್ಟಿದ್ದಾರೆ. ಮಕ್ಕಳ ಶಿಕ್ಷಣವು ಯಾವಾಗಲೂ ಅವರ ಹಿತಾಸಕ್ತಿಗೆ ಪೂರಕವಾಗಿರಬೇಕು ಎಂದು ತಿಳಿಸಿದ್ದಾರೆ.

## ಗ್ಯಾರಂಟಿ ಸಮಿತಿ' ಎಂದರೆ ಕಾಂಗ್ರೆಸ್‌ನ ಅತೃಪ್ತ ನಾಯಕರು-ಕಾರ್ಯಕರ್ತರನ್ನು ಸಾಕುವ 'ಗಂಜಿ ಕೇಂದ್ರವೇ

• **ಉದಯವಾಹಿನಿ, ಬೆಂಗಳೂರು**



ಗ್ರಾಮ ಪಂಚಾಯಿತಿ ಮಟ್ಟದಲ್ಲೂ 'ಗ್ಯಾರಂಟಿ ಸಮಿತಿ'ಗಳನ್ನು ರಚಿಸುವ ಮೂಲಕ ಕಾಂಗ್ರೆಸ್ ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡಲು ಹೊರಟಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದ್ದಾರೆ. 'ಗ್ಯಾರಂಟಿ ಸಮಿತಿ ಎಂದರೆ ಸಾರ್ವಜನಿಕರ ತೆರಿಗೆ ಹಣದಲ್ಲಿ ಕಾಂಗ್ರೆಸ್‌ನ ಅತೃಪ್ತ ನಾಯಕರು ಮತ್ತು ಕಾರ್ಯಕರ್ತರನ್ನು ಸಾಕುವ 'ಗಂಜಿ ಕೇಂದ್ರವೇ' ಎಂದು ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಪ್ರಶ್ನಿಸಿದ್ದಾರೆ.'ಹಣವಿಲ್ಲದೆ ಅಭಿವೃದ್ಧಿ ಕಾರ್ಯಗಳು ನಿಂತಿವೆ. ಸರ್ಕಾರಿ ಶಾಲೆಗಳ ಮಕ್ಕಳು ಪಠ್ಯ ಪುಸ್ತಕ, ಸಮವಸ್ತ್ರಕ್ಕಾಗಿ ಕಾಯುತ್ತಿದ್ದಾರೆ. ಕುಸಿಯುತ್ತಿರುವ ಕೊಠಡಿಗಳ ದುರಸ್ತಿಗೆ, ಮೊಟ್ಟೆಗೂ ದುಡ್ಡಿಲ್ಲದ ದುಸ್ಥಿತಿ ಇದೆ.

ರಾಗಿ ಬೆಳೆದ ರೈತರು ಬೆಂಬಲ ಬೆಲೆ ಬಾಕಿಗಾಗಿ ಕಚೇರಿಗಳಿಗೆ ಅಲೆಯುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸಾರ್ವಜನಿಕರ ಹಣವನ್ನು ಪಕ್ಷದ ನಿರುದ್ಯೋಗಿ ಕಾರ್ಯಕರ್ತರಿಗೆ, ಅತೃಪ್ತ ನಾಯಕರಿಗೆ ಉದ್ಯೋಗ ನೀಡಲು ಬಳಸಿಕೊಳ್ಳುತ್ತಿರುವುದು ನಾಚಿಕೆಗೇಡು' ಎಂದಿದ್ದಾರೆ.

ಕಾಂಗ್ರೆಸ್ ಸರ್ಕಾರಕ್ಕೆ ಕಿಂಚಿತ್ತಾದರೂ ನಾಚಿಕೆ, ಮಾನ, ಮರ್ಯಾದೆ ಇದ್ದರೆ, ಈಗಿರುವ ನಾಲಾಯಕ್ ಗ್ಯಾರಂಟಿ ಸಮಿತಿಗಳನ್ನು ತಕ್ಷಣವೇ ವಿಸರ್ಜನೆ ಮಾಡಿ, ಈವರೆಗೂ ಕೊಟ್ಟಿರುವ ಸಂಬಳ ಮತ್ತು ಸವಲತ್ತುಗಳನ್ನು ವಾಪಸ್ ಪಡೆಯಬೇಕು' ಎಂದು ಒತ್ತಾಯಿಸಿದ್ದಾರೆ.

## ಜೂ.28ಕ್ಕೆ ಪಲ್ಸ್‌ಪೋಲಿಯೋಗೆ ಸಿಎಂ ಚಾಲನೆ

• **ಉದಯವಾಹಿನಿ, ಬೆಂಗಳೂರು**

ರಾಷ್ಟ್ರೀಯ ಲಸಿಕಾ ದಿನವಾದ ಜೂನ್ 28 ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ಹೇಳಿದರು.

ಬೆಂಗಳೂರಿನಲ್ಲಿಂದು ಸುದ್ದಿಗೋಷ್ಠಿಯಲ್ಲಿ ಜೂನ್ 28 ಲಸಿಕಾ ದಿನದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ದೇಶದಲ್ಲಿ ಪೋಲಿಯೋ ಮುಕ್ತ ವಾತಾವರಣ ನಿರ್ಮಾಣವಾಗಿದೆ. ದೇಶವನ್ನು ಪೋಲೀಯೊ ಮುಕ್ತ ಎಂಬ ಚರ್ಚೆ ಇತ್ತು. ಪ್ರಸ್ತುತ್ತು ಗ್ರಾಮೀಣ ಹಾಗೂ ಗುಡ್ಡುಗಾಡು ಪ್ರದೇಶ ಸೇರಿದಂತೆ ಇತರೆಡೆ ಪಲ್ಸ್ ಪೋಲೀಯೋ ಕಾರ್ಯಕ್ರಮದ ಮೂಲಕ ದೇಶವನ್ನು ಪೋಲೀಯೋ ಮುಕ್ತ ರಾಷ್ಟ್ರ ಮಾಡಲಾಗಿದೆ ಎಂದರು.ಜೂ. 28 ರಂದು ನಡೆಯಿವ ಪಲ್ಸ್ ಪೋಲೀಯೋ ಕಾರ್ಯಕ್ರಮದಲ್ಲಿ ಸುಮಾರು 64 ಲಕ್ಷ ಮಕ್ಕಳಿಗೆ ಪೋಲೀಯೋ ಹನಿ ಹಾಕುವ ಗುರಿ ಇಟ್ಟುಕೊಂಡಿದ್ದೇವೆ. ಇದಕ್ಕಾಗಿ ಸುಮಾರು 36 ಸಾವಿರ ಬೂತ್‌ಗಳನ್ನು ಸ್ಥಾಪನೆ ಮಾಡಲಾಗಿದೆ. 988 ಸಂಚಾರಿ ತಂಡಗಳು ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಭಾಗಿಯಾಗಲಿವೆ ಎಂದರು. ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಸುಮಾರು 1 ಲಕ್ಷ 14 ಸಾವಿರ ಲಸಿಕಾ ಕಾರ್ಯಕರ್ತರು ಕೆಲಸ ಮಾಡಲಿದ್ದಾರೆ. 7197 ಮೇಲ್ವಿಚಾರಕರು ಇದ್ದಾರೆ. ಪಲ್ಸ್ ಪೋಲೀಯೋ ಬೂತ್ ಗೆ ಆಪ್‌ನ್ನು ಪ್ಲೇಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಸ್ಥಳವನ್ನು ನೋಡಿಕೊಂಡು ಸಮೀಪದ ಪೋಲೀಯೋ ಬೂತ್‌ನಲ್ಲಿ ಮಕ್ಕಳಿಗೆ ಪೋಲೀಯೋ ಹನಿ ಹಾಕಿಸಬಹುದು ಎಂದರು.

# ರಾಜ್ಯದ ಸಚಿವರಿಗೆ ಜಿಲ್ಲಾ ಉಸ್ತುವಾರಿ ಹಂಚಿಕೆ ಮಾಡಿ ಸಿಎಂ ಆದೇಶ!

## ಅರ್ಹ ಫಲಾನುಭವಿಗಳಿಗೆ ಮನೆ ನಿರ್ಮಾಣ ಮತ್ತು ನಿವೇಶನ ಹಂಚಿಕೆಗೆ ಮೊದಲ ಆದ್ಯತೆ ನೀಡಬೇಕು.

• **ಉದಯವಾಹಿನಿ,ಬೆಂಗಳೂರು**


ರಾಜ್ಯದ ಕೊಳಗೇರಿಗಳ ಪುನರ್‌ಅಭಿವೃದ್ಧಿಗೆ ಮುಂಬೈ ಮಾದರಿಯನ್ನು ಅಳವಡಿಸಿಕೊಳ್ಳುವ ಕುರಿತು ಅಧ್ಯಯನ ನಡೆಸಿ, ಸಮಗ್ರ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಜೊತೆಗೆ ಗ್ರಾಮೀಣ ವಸತಿ ನಿರ್ಮಾಣ ಹಾಗೂ ನಿವೇಶನ ಹಂಚಿಕೆ ಪ್ರಗತಿ ನಿಧಾನವಾಗಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ವಸತಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮುಂಬೈನ ಕೊಳಗೇರಿ ಪುನರ್ ಅಭಿವೃದ್ಧಿ ಮಾದರಿಯನ್ನು ಅಧಿಕಾರಿಗಳು ಅಧ್ಯಯನ ಮಾಡಬೇಕು. ಅಲ್ಲದೆ, ಮುಂಬೈಯಲ್ಲಿ ನೀಡಲಾಗುತ್ತಿರುವ ಮನೆಗಳಿಗಿಂತ ಹೆಚ್ಚಿನ ವಿಸ್ತೀರ್ಣದ ಮನೆಗಳನ್ನು ನಿರ್ಮಿಸುವ ಸಾಧ್ಯತೆಗಳ ಕುರಿತು ವರದಿ ಸಿದ್ಧಪಡಿಸಿ ಮುಂದಿನ ಸಚಿವ ಸಂಪುಟ ಸಭೆಗೆ ಸಲ್ಲಿಸಬೇಕು ಎಂದು ಸೂಚಿಸಿದರು.

''ಪ್ರತಿ ಬಡ ಕುಟುಂಬಕ್ಕೂ ಸ್ವಂತ ಸೂರು ಸಿಗಬೇಕು. ಅರ್ಹ ಫಲಾನುಭವಿಗಳಿಗೆ ಮನೆ ನಿರ್ಮಾಣ ಮತ್ತು ನಿವೇಶನ ಹಂಚಿಕೆಗೆ ಮೊದಲ ಆದ್ಯತೆ ನೀಡಬೇಕು ಎಂದು ಹೇಳಿದರು.

ವಸತಿ ಹಂಚಿಕೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಹರಾಜು ಪದ್ಧತಿಯನ್ನು ರದ್ದುಗೊಳಿಸಿ, ಅದರ ಬದಲಿಗೆ ಪಾರದರ್ಶಕ ಸಾರ್ವಜನಿಕ ಲಾಟರಿ ವ್ಯವಸ್ಥೆ ಜಾರಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಹರಾಜು ಪದ್ಧತಿಯಿಂದ ನಿಜವಾದ ಅರ್ಹ ಫಲಾನುಭವಿಗಳಿಗೆ ಮನೆಗಳು ಸಿಗುತ್ತಿವೆಯೇ ಅಥವಾ ಹಣವಿರುವವರಿಗೆ ಮಾತ್ರ


ಉದಯವಾಹಿನಿ ಚಿತ್ರ

ಸಿಗುತ್ತಿವೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದ್ದರಿಂದ ಪಾರದರ್ಶಕ ಲಾಟರಿ ವ್ಯವಸ್ಥೆ ಉತ್ತಮ ಎಂದು ಅಭಿಪ್ರಾಯಪಟ್ಟರು. ಬಳಿಕ ಕರ್ನಾಟಕ ಗೃಹ ಮಂಡಳಿಯ ಯೋಜನೆಗಳ ಪ್ರಗತಿ ಪರಿಶೀಲಿಸಿದ ಅವರು, ಒಟ್ಟು 568 ಯೋಜನೆಗಳಿಗೆ ಅನುಮೋದನೆ ದೊರೆತಿದ್ದು, ಅವುಗಳಲ್ಲಿ 280 ಯೋಜನೆಗಳು ಪೂರ್ಣಗೊಂಡಿವೆ. ಉಳಿದ 288 ಯೋಜನೆಗಳು ವಿವಿಧ ಕಾರಣಗಳಿಂದ ಬಾಕಿ ಉಳಿದಿವೆ ಎಂದು ಮಾಹಿತಿ ಪಡೆದರು.

ಬಾಕಿ ಉಳಿದ ಯೋಜನೆಗಳ ಅನುಷ್ಠಾನಕ್ಕೆ ಅಡ್ಡಿಯಾಗಿರುವ ತಾಂತ್ರಿಕ ಸಮಸ್ಯೆಗಳನ್ನು ಶೀಘ್ರ ಪರಿಹರಿಸಿ, ಯಾವುದೇ ದುರುಪಯೋಗವಾಗದಂತೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇದಲ್ಲದೆ, ಶಿವರಾಮ ಕಾರಂತ ಬಡಾವಣೆಯಲ್ಲಿ ರಾಜೀವ್ ಗಾಂಧಿ ವಸತಿ ಯೋಜನೆಯಡಿ ಮನೆ ನಿರ್ಮಾಣದ ಹೊಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸುವಂತೆ ಸೂಚಿಸಿದರು. ಅಲ್ಲದೆ, ಫಲಾನುಭವಿಗಳ ಪಟ್ಟಿಯನ್ನು ಶೀಘ್ರವಾಗಿ ಪಡೆಯಲು ಶಾಸಕರೊಂದಿಗೆ ಚರ್ಚಿಸುವುದಾಗಿ ಮುಖ್ಯಮಂತ್ರಿ ತಿಳಿಸಿದರು.

### ತ್ವರಿತಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ

ಬಹಳ ವರ್ಷಗಳ ಹಿಂದೆ ಮುಂಗಡ ಹಣ ಪಾವತಿಸಿ ಮನೆಗಾಗಿ ಅರ್ಜಿ ಸಲ್ಲಿಸಿರುವ ಅನೇಕ ಮಂದಿ ಇನ್ನೂ ಮನೆಗಾಗಿ ಕಾಯುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು, ಬಾಕಿ ಉಳಿದ ಹಂಚಿಕೆ ಪ್ರಕ್ರಿಯೆಯನ್ನು ತ್ವರಿತಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

> ''ಸ್ವಂತ ಮನೆ ಎಂಬುದು ಪ್ರತಿಯೊಬ್ಬ ಬಡ ಹಾಗೂ ಮಧ್ಯಮ ವರ್ಗದ ಕುಟುಂಬದ ಕನಸು. ಅರ್ಜಿದಾರರನ್ನು ಅನಿರ್ದಿಷ್ಟವಾಗಿ ಕಾಯಿಸುವುದು ಸರಿಯಲ್ಲ. ಮನೆಗಳ ಹಂಚಿಕೆ ಪ್ರಕ್ರಿಯೆಯನ್ನು ಸಾಧ್ಯವಾದಷ್ಟು ಬೇಗ ಪೂರ್ಣಗೊಳಿಸಬೇಕು' ಎಂದು ಹೇಳಿದರು.- ಸಿಎಂ ಡಿಕೆ.ಶಿವಕುಮಾರ್

> ಯಾವುದೇ ವಸತಿ ಯೋಜನೆಯನ್ನು ಆರಂಭಿಸುವ ಮೊದಲು ಸಮರ್ಪಕ ಯೋಜನೆ ರೂಪಿಸಬೇಕು. ಬೇಡಿಕೆಯೇ ಇಲ್ಲದ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಬಾರದು, ಮನೆಗಳ ಜೊತೆಗೆ ಮೂಲಸೌಕರ್ಯ ಮತ್ತು ಸಂಪರ್ಕ ವ್ಯವಸ್ಥೆಗಳ ಅಭಿವೃದ್ಧಿಗೂ ಆದ್ಯತೆ ನೀಡಬೇಕು ಎಂದು ಸೂಚಿಸಿದರು.-ಸಿಎಂ ಡಿಕೆ. ಶಿವಕುಮಾರ್



# ವೈಶಾಕ್ ಆತ್ಮಹತ್ಯೆ ಕೇಸ್‌ಗೆ ಬಿಗ್ ಟ್ವಿಸ್ಟ್: ನಟಿ ಕೃಷಿ ತಾಪಂಡ ಜತೆ ಅಕ್ರಮ ಸಂಬಂಧ; ಪೊಲೀಸರಿಗೆ ಪತ್ನಿ ದೂರು

• **ಉದಯವಾಹಿನಿ, ಬೆಂಗಳೂರು**

ನಟಿ ಕೃಷಿ ತಾಪಂಡ ಅವರು ವಾಸವಿರುವ ಆರ್.ಆರ್. ನಗರದ ಎಲಿಗೇಟ್ ಅಪಾರ್ಟ್‌ಮೆಂಟ್‌ನ ಬೆಡ್‌ರೂಮ್‌ನಲ್ಲಿ ಅವರ ಗೆಳೆಯ ಹಾಗೂ ಉದ್ಯಮಿ ವೈಶಾಕ್ ಅವರು ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದು, ಹಲವು ಅನುಮಾನಗಳಿಗೆ ಕಾರಣವಾಗಿದೆ.

ವೈಶಾಕ್ ಅವರಿಗೆ ಹೆಂಡತಿ ಮತ್ತು ಮಕ್ಕಳಿದ್ರೂ, ನಟಿ ತಾಪಂಡ ಮನೆಯಲ್ಲೇ ಯಾಕಿದ್ದರು ಎನ್ನುವ ಪ್ರಶ್ನೆ ಮೂಡಿದ್ದು, ನಟಿಗೆ ಸಾಯೋದಾಗಿ ಮೆಸೇಜ್ ಮಾಡಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಇದೀಗ ವೈಶಾಕ್ ಅವರ ಪತ್ನಿ ಪೊಲೀಸರಿಗೆ ದೂರು ನೀಡಿದ್ದು, ನಟಿ ಜೊತೆ ಪತಿಯ ಅಕ್ರಮ ಸಂಬಂಧದ ಬಗ್ಗೆ ಉಲ್ಲೇಖಿಸಿದ್ದಾರೆ. ವೈಶಾಕ್ ಅವರು ಪತ್ನಿಯೊಂದಿಗಿನ



ವೈಮನಸ್ಸಿನಿಂದಾಗಿ ಆಗಾಗ್ಗ ನಟಿ ಕೃಷಿ ತಾಪಂಡ ಅವರ ಮನೆಗೆ ಬಂದು ಇರುತ್ತಿದ್ದರು. ನಿನ್ನೆ ಕೂಡ ಇದೇ ಕಾರಣಕ್ಕೆ ಕೃಷಿ ತಾಪಂಡ ಅವರ ಮನೆಗೆ ಬಂದಿದ್ದ ವೈಶಾಕ್, ಅಲ್ಲಿಯೇ ಆತ್ಮಹತ್ಯೆಗೆ ಶರಣಾಗಿದ್ದಾರೆ ಅನ್ನೋ ಮಾಹಿತಿ ಲಭ್ಯವಾಗಿದೆ. ವೈಶಾಕ್ ಅವರಿಗೆ 15 ವರ್ಷಗಳ ಹಿಂದೆಯೇ ಮದುವೆ ಆಗಿದ್ದು, ಅವರಿಗೆ 14 ವರ್ಷದ ಮಗನಿದ್ದಾನೆ. ವೈಶಾಕ್ ಅವರು ಕಾರು ಆಟೋ ಮೊಬೈಲ್ ಹಾಗೂ ಗ್ಯಾರೇಜ್ ಇಟ್ಟುಕೊಂಡಿದ್ದು, ನಟಿ ಕೃಷಿ ತಾಪಂಡ ಅವರ ಮಾಜಿ ಬಾಯ್ ಫ್ರೆಂಡ್ ಎವಿಆರ್ ಗ್ರೂಪ್ ಮಾಲೀಕ ಅರವಿಂದ್ ರೆಡ್ಡಿಗೆ ಬೆದರಿಕೆ ಹಾಕಿರುವ ಆರೋಪದಲ್ಲಿ ಬಂಧನಕ್ಕೀಡಾಗಿದ್ದರು.

ಅರವಿಂದ್ ರೆಡ್ಡಿಗೆ ಬೆದರಿಕೆ ಹಾಕಿದ ವಿಚಾರಕ್ಕೆ ವೈಶಾಕ್ ಹಾಗೂ ಪತ್ನಿ ಮಧ್ಯೆ ಆಗಾಗ್ಗ ಜಗಳ ಆಗುತ್ತಿತ್ತು ಎನ್ನಲಾಗಿದೆ. ಪತ್ನಿ ಜೊತೆ ಜಗಳ ಆದಾಗ ಕೃಷಿ ತಾಪಂಡ ಮನೆಗೆ ಬಂದು ಹೋಗ್ತಿದ್ದ ವೈಶಾಕ್, ನಿನ್ನೆ ರಾತ್ರಿ ಕೂಡ ಕೃಷಿ ತಪಂಡಾ ಮನೆಗೆ ಬಂದಿದ್ದರು. ಆದರೆ ಬೆಳಗ್ಗೆ ಅಷ್ಟರಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಪತಿಯ ಮರಣದ ಸುದ್ದಿ ತಿಳಿಯುತ್ತಿದ್ದಂತೆ ಪತ್ನಿ ಮೇಘನಾ ಅವರು ಆರ್ ಆರ್ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ನನ್ನ ಹಾಗೂ ನನ್ನ ಪತಿ ಮಧ್ಯೆ ಸಾಕಷ್ಟು ವಿರಸ ಇತ್ತು. ನಮ್ಮಿಬ್ಬರ ಮಧ್ಯೆ ಆಗಾಗ ಜಗಳ ನಡೆಯುತ್ತಲೆ ಇತ್ತು.

ಕೇವಲ ಮೆಸೇಜ್ ಮೂಲಕ 14 ವರ್ಷದ ಮಗನ ಬಗ್ಗೆ ವಿಚಾರಿಸುತ್ತಿದ್ದರು. ಆದ್ರೆ ನನ್ನ ಬಗ್ಗೆ ಏನೂ ಕೇಳುತ್ತಿರಲಿಲ್ಲ ಎಂದು ಪತ್ನಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಸಾವಿಗೆ ನಿಜವಾದ ಕಾರಣ ಪತ್ತೆಹಚ್ಚಲು ತನಿಖೆ ಆರಂಭಿಸಿದ್ದಾರೆ.

## ಸೂಪರ್ ಎಲ್ ನೀನೋ ಪರಿಣಾಮ ಎದುರಿಸಲು ಸಜ್ಜಾಗಿ

• **ಉದಯವಾಹಿನಿ, ಮಹದೇವಪುರ**



ರಾಜ್ಯದಲ್ಲಿ ಸಂಭವನೀಯ ಪ್ರಕೃತಿ ವಿಕೋಪಗಳು ಹಾಗೂ ಸೂಪರ್ ಎಲ್ ನೀನೋ ಪರಿಣಾಮದಿಂದ ಉಂಟಾಗಬಹುದಾದ ಬರ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ, ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಹಿರಿಯ ಅಧಿಕಾರಿಗಳೊಂದಿಗೆ ಸಭೆ:** ಇಂದು ವಿಧಾನಸೌಧದಲ್ಲಿ ಪ್ರಕೃತಿ ವಿಕೋಪ ನಿರ್ವಹಣೆ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಈವರೆಗೆ ಕೈಗೊಂಡಿರುವ ಅಗತ್ಯ ಕ್ರಮಗಳ ಕುರಿತು ಮಾಹಿತಿ ಪಡೆದು, ಮಳೆ ಕೊರತೆ, ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಸಮಸ್ಯೆ ಸೇರಿದಂತೆ ವಿವಿಧ ವಿಚಾರಗಳ ಕುರಿತು ಸಮಗ್ರವಾಗಿ ಚರ್ಚಿಸಿದರು.

ಜಾಗತಿಕ ಹವಾಮಾನ ವೈಪರೀತ್ಯದ ಭಾಗವಾಗಿ ಸೂಪರ್ ಎಲ್ ನೀನೋ ಪರಿಣಾಮದಿಂದ ರಾಜ್ಯದಲ್ಲಿ ಉಂಟಾಗಬಹುದಾದ ಸಂಭವನೀಯ ಪರಿಣಾಮಗಳು, ಮಳೆಯ ಕೊರತೆಯಿಂದ ಜನರು ಎದುರಿಸಬಹುದಾದ ಸಮಸ್ಯೆಗಳು ಹಾಗೂ ರಾಜ್ಯದ ಕೆಲವು ಪ್ರದೇಶಗಳಲ್ಲಿ ಬರ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆಗಳ ಕುರಿತು ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿದರು.

**ಜಿಲ್ಲಾವಾರು ಕಾರ್ಯಯೋಜನೆ ಸಿದ್ಧಪಡಿಸುವಂತೆ ಸೂಚನೆ:** ಸಂಭವನೀಯ ಬರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಲಭ್ಯತೆ, ಜಾನುವಾರುಗಳಿಗೆ ಮೇವು, ಕೃಷಿ ಚಟುವಟಿಕೆಗಳ ನಿರ್ವಹಣೆ ಹಾಗೂ ನೀರಿನ ಸಂರಕ್ಷಣೆಗೆ ಸಂಬಂಧಿಸಿದಂತೆ ಜಿಲ್ಲಾವಾರು ಕಾರ್ಯಯೋಜನೆಗಳನ್ನು ಸಿದ್ಧಪಡಿಸಬೇಕು. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಪಂಚಾಯತ್ ಸಿಇಒಗಳಿಗೆ ಅಗತ್ಯ ಸೂಚನೆಗಳನ್ನು ನೀಡಬೇಕು ಎಂದು ತಿಳಿಸಿದರು. ಜಲಾಶಯಗಳ ನೀರಿನ ಮಟ್ಟ, ಅಂತರ್ಜಲ ಪರಿಸ್ಥಿತಿ ಹಾಗೂ ನೀರಿನ ಬಳಕೆಯ ಮೇಲ್ವಿಚಾರಣೆಯನ್ನು ನಿರಂತರವಾಗಿ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಯಾವುದೇ ರೀತಿಯ ಪ್ರಕೃತಿ ವಿಕೋಪ ಅಥವಾ ಬರ ಪರಿಸ್ಥಿತಿ ಎದುರಾದರೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸಂಬಂಧಿತ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

**ಕೊಳವೆ ಬಾವಿ ಕೊರೆಸಲು ತ್ವರಿತ ಅನುಮತಿ ನೀಡಲು ಆದೇಶ:** ಕುಡಿಯುವ ನೀರಿಗಾಗಿ ಕೊಳವೆ ಬಾವಿ ಕೊರೆಸಲು ಅನುಮತಿಯನ್ನು ತ್ವರಿತಗತಿಯಲ್ಲಿ ನೀಡಬೇಕು.

ಈ ವಿಚಾರದಲ್ಲಿ ಯಾವುದೇ ರೀತಿಯ ವಿಳಂಬವಾಗಬಾರದು. ಅಗತ್ಯವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು ಎಂದರು.

122 ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 139 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

# ಬೆಂಗಳೂರು ವಾಹನ ಸವಾರರೇ ಎಚ್ಚರ; ವಾಹನ ನಿಲ್ಲಿಸಿದರೆ ಜಪ್ತಿ, ಹರಾಜು, ಜುಲೈ 1ರಿಂದ ಕಠಿಣ ನಿಯಮ ಜಾರಿ..!

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನಲ್ಲಿ ಸಂಭವಿಸುವ ರಸ್ತೆ ಅಪಘಾತಗಳಲ್ಲಿ ಸಾವನ್ನಪ್ಪುವವರಲ್ಲಿ ಶೇ.30ರಷ್ಟು ಮಂದಿ ಪಾದಚಾರಿಗಳೇ ಆಗಿದ್ದು, ಸುರಕ್ಷಿತ ಫುಟ್‌ಪಾತ್ ನಿರ್ಮಾಣದ ಮೂಲಕ ಇಂತಹ ಸಾವುಗಳನ್ನು ತಡೆಯಬಹುದು ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಜುಲೈ 1ರಿಂದ ನಗರದಲ್ಲಿ 'ಸೇಫ್ ಫುಟ್‌ಪಾತ್ ಕ್ಯಾಂಪೇನ್' ಆರಂಭಿಸಲಾಗುತ್ತಿದ್ದು, ಸುಮಾರು 70 ಕೋಟಿ ರೂ. ವೆಚ್ಚದಲ್ಲಿ ಫುಟ್‌ಪಾತ್‌ಗಳ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.

ಫುಟ್‌ಪಾತ್‌ಗಳ ಸ್ಥಿತಿ ಮತ್ತು ಅತಿಕ್ರಮಣ ಕುರಿತು ನಡೆದ ಪರಿಶೀಲನಾ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ಐದು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ಸುಮಾರು 2,000 ಕಿಲೋಮೀಟರ್ ಉದ್ದದ ಫುಟ್‌ಪಾತ್‌ಗಳನ್ನು ದುರಸ್ತಿಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಫುಟ್‌ಪಾತ್‌ಗಳ ಮೇಲೆ ಅಳವಡಿಸಿರುವ ಹಾಳಾದ ಸ್ಲ್ಯಾಬ್‌ಗಳು, ಕರ್ಬ್ ಸ್ಟೋನ್‌ಗಳು, ಎತ್ತರ-ತಗ್ಗು ವ್ಯತ್ಯಾಸಗಳು ಸೇರಿದಂತೆ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಯಾಗಿರುವ ಸಮಸ್ಯೆಗಳನ್ನು ಶೀಘ್ರವಾಗಿ ಸರಿಪಡಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ನಗರದ ಸುಮಾರು 1.5 ಕೋಟಿ ಜನರ ಆಸ್ತಿಯಾಗಿರುವ ಫುಟ್‌ಪಾತ್‌ಗಳನ್ನು ಅಂಗಡಿ ಮಾಲೀಕರು ಅತಿಕ್ರಮಿಸಬಾರದು. ''ಸುರಕ್ಷಿತ ಫುಟ್‌ಪಾತ್ ನಿರ್ಮಾಣವು ನಗರದ ಜನರ ಬಹುಕಾಲದ ಬೇಡಿಕೆಯಾಗಿದ್ದು, ಸುಪ್ರೀಂ ಕೋರ್ಟ್ ಆದೇಶವನ್ನು ಎಲ್ಲರೂ ಗೌರವಿಸಿ ಅತಿಕ್ರಮಣ ತೆರವು ಕಾರ್ಯಕ್ಕೆ ಸಹಕರಿಸಬೇಕು ಎಂದು ತಿಳಿಸಿದರು. ಸುರಕ್ಷಿತ ಫುಟ್‌ಪಾತ್ ನಿರ್ಮಾಣವು ನಗರದ ಜನರ

ಪಾದಚಾರಿ ಮಾರ್ಗದಲ್ಲಿ ನಡೆಯುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದ್ದು, ಅದನ್ನು ಜಾರಿಗೊಳಿಸುವಂತೆ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ.

**ಅತಿಕ್ರಮಣ ತೆರವುಗೊಳಿಸಲು ಅವಕಾಶ**

ನಗರದ ಹಲವೆಡೆ ಅಂಗಡಿಗಳ ಸರಕುಗಳು, ಜಾಹೀರಾತು ಫಲಕಗಳು ಮತ್ತು ಇತರ ವಸ್ತುಗಳನ್ನು ಫುಟ್‌ಪಾತ್ ಮೇಲೆ ಇಡುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಜುಲೈ 1ರವರೆಗೆ ಸ್ವಯಂಪ್ರೇರಿತವಾಗಿ ಅತಿಕ್ರಮಣ ತೆರವುಗೊಳಿಸಲು ಅವಕಾಶ ನೀಡಲಾಗಿದೆ.

## ಗ್ರಾ.ಪಂ. ಸೌಲಭ್ಯ ಸದ್ಬಳಕೆಗೆ ಶಾಸಕಿ ಮಂಜುಳಾ ಕರೆ

• **ಉದಯವಾಹಿನಿ, ಕೆ.ಆರ್.ಪುರ**

ಕೆ.ಆರ್.ಪುರ,- ಗ್ರಾಮ ಪಂಚಾಯತಿಯಿಂದ ಸಿಗುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ಶಾಸಕಿ ಮಂಜುಳಾ ಲಿಂಬಾವಳಿ ಅವರು ಹೇಳಿದರು.

ಮಹದೇವಪುರ ಕ್ಷೇತ್ರದ ಬಿದರಹಳ್ಳಿಯಲ್ಲಿ ಬಿದರಹಳ್ಳಿ ಗ್ರಾಮ ಪಂಚಾಯತಿ ವತಿಯಿಂದ ಹಮ್ಮಿಕೊಂಡಿದ್ದ 2026-27ನೇ ಸಾಲಿನ ಮೊದಲನೇ ಗ್ರಾಮ ಸಭೆ ಹಾಗೂ ಅಂಗನವಾಡಿ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಬಿದರಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಹೆಚ್ಚಿನದಾಗಿ ಹಳ್ಳಿಗಳ ಜೊತೆಗೆ ಹೊಸ ಬಡಾವಣೆಗಳು ಹೆಚ್ಚಿನ ಪ್ರಮಾಣದಲ್ಲಿದ್ದು ಕೂಲಿ ಕಾರ್ಮಿಕರು ಹೆಚ್ಚಿದ್ದಾರೆ. ಸರ್ಕಾರದ ಸವಲತ್ತುಗಳನ್ನು ಬಡವರಿಗೆ ತಲುಪಲು ಅಧಿಕಾರಿಗಳು ಶ್ರಮವಹಿಸಬೇಕು ಎಂದರು. ತಾಲ್ಲೂಕು ಪಂಚಾಯತ ಇಒ ಮಂಜುನಾಥ್, ಬಿದರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು, ಕಸದ ಸಮಸ್ಯೆ, ಶಾಲೆಗಳಿಗೆ ಮೂಲಸೌಕರ್ಯ ಒದಗಿಸುವ ಕೆಲಸ ಮಾಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪುಟ್ಟ ಮಕ್ಕಳಿಗೆ ಅನ್ನಪ್ರಾಶನ ಮಾಡಲಾಯಿತು.

# ಬಿಜೆಪಿಯವರ ಆಂತರಿಕ ಬೆಳವಣಿಗೆ, ಅಲ್ಲೋಲ ಕಲ್ಲೋಲಕ್ಕೆ ಶೋಭಾ ಕರಂದ್ಲಾಜೆ ಕಾರಣ: ಎಸ್.ಟಿ.ಸೋಮಶೇಖರ್

• **ಉದಯವಾಹಿನಿ, ಬೆಂಗಳೂರು**

ಬಿಜೆಪಿಯವರ ಆಂತರಿಕ ಬೆಳವಣಿಗೆ, ಅಲ್ಲೋಲ ಕಲ್ಲೋಲಕ್ಕೆ ಶೋಭಾ ಕರಂದ್ಲಾಜೆ ಕಾರಣನೇ ವಿನಹ ಬೇರೆ ಯಾವ ಶಾಸಕರು ಅಲ್ಲ ಎಂದು ಬಿಜೆಪಿ ಉಚ್ಚಾಟಿತ ಶಾಸಕ ಎಸ್.ಟಿ.ಸೋಮಶೇಖರ್ ಆರೋಪಿಸಿದ್ದಾರೆ.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಅಡ್ಡ ಮತದಾನ ಮಾಡಿದ ಎಸ್.ಟಿ.ಸೋಮಶೇಖರ್, ಶಿವರಾಮ್ ಹೆಬ್ಬಾರ್ ರಾಜೀನಾಮೆ ಕೊಟ್ಟು ಹೋಗಲಿ ಎಂಬ ಶೋಭಾ ಕರಂದ್ಲಾಜೆ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಶೋಭಾ ಕರಂದ್ಲಾಜೆಗೆ ವಿಜಯೇಂದ್ರ, ಕಂಡರೆ ಅಸೂಯೆ. ವಿಜಯೇಂದ್ರ ಅಧ್ಯಕ್ಷ ಆಗಿರೋದನ್ನು ಅವರಿಗೆ ಸಹಿಸಲು ಆಗುತ್ತಿಲ್ಲ. ಆರ್.ಅಶೋಕ್ ವಿರೋಧ ಪಕ್ಷ ನಾಯಕ ಆಗಿರೋದೂ ಅಸೂಯೆ. ಈ ಇಬ್ಬರಿಗೂ ಹೇಗಾದರೂ ಮಾಡಿ ಕೆಟ್ಟ ಹೆಸರು ತರಬೇಕೆಂದು ಹೊರಟಿದ್ದಾರೆ. ಈ ಇಬ್ಬರನ್ನೂ ರಾಜಕೀಯದಿಂದ ಮುಗಿಸಿದ್ರೆ, ನಾನು ರಾಜಕೀಯದಲ್ಲಿ ಮೇಲೆ ಬರಬಹುದೆಂಬ ಮನಸ್ಥಿತಿ ಇದೆ ಎಂದು ಟೀಕಿಸಿದರು.

63 ಜನ ಶಾಸಕರನ್ನು ಧರ್ಮಸ್ಥಳಕ್ಕೆ ಕರೆದುಕೊಂಡು ಹೋಗುವ ಅವಶ್ಯಕತೆ ಇಲ್ಲ. ಮೊದಲು ಶೋಭಾ ಕರಂದ್ಲಾಜೆ ಅವರನ್ನು ಕರೆದುಕೊಂಡು ಹೋಗಿ ಆಣೆ ಪ್ರಮಾಣ ಮಾಡಿಸಿದ್ರೆ, ಎಲ್ಲಾ ವಿಷಯಗಳು ಹೊರಗೆ ಬರುತ್ತವೆ. ಬಿಜೆಪಿಯವರು

### ಆರ್.ಅಶೋಕ್, ವಿಜಯೇಂದ್ರ ಇಬ್ಬರೇ ಧರ್ಮಸ್ಥಳಕ್ಕೆ ಹೋದರೆ ಸಾಕು:


ಉದಯವಾಹಿನಿ ಚಿತ್ರ

ನಮ್ಮನ್ನು ಉಚ್ಚಾಟನೆ ಮಾಡಿದ್ದಾರೆ. ನಮ್ಮ ಬಗ್ಗೆ ಮಾತನಾಡುವ ನೈತಿಕತೆ ಏನಿದೆ?. ಕೇಂದ್ರ ಸಚಿವೆಯಾಗಿ ಒಂದು ಕ್ಷೇತ್ರ ಅಭಿವೃದ್ಧಿ ಮಾಡಲು ಆಗಿಲ್ಲ. ಆರ್ ಅಶೋಕ್, ವಿಜಯೇಂದ್ರ ಅವರನ್ನು ಪದಚ್ಯುತಿಗೊಳಿಸಿ ಅವಮಾನ ಮಾಡಬೇಕೆಂಬುದೇ ಶೋಭಾ ಉದ್ದೇಶ. ಆದ್ದರಿಂದ ಮೊದಲು ಧರ್ಮಸ್ಥಳಕ್ಕೆ ಕರೆದುಕೊಂಡು ಹೋಗಿ ಪ್ರಮಾಣ ಮಾಡಿಸಿದ್ರೆ, ಅವರ ನಿಜ ಬಣ್ಣ ಬಯಲಾಗುತ್ತದೆ ಎಂದರು. ನಮಗೆ ಕಾಂಗ್ರೆಸ್ ಸರ್ಕಾರ ಕ್ಷೇತ್ರ ಅನುದಾನ ಕೊಟ್ಟಿದೆ. ನಾವು ಅವರಿಗೆ ಮತ ಹಾಕಿದ್ದೇವೆ. ನಾವು ಓಪನ್ ಆಗಿಯೇ ಮತ ಹಾಕಿದ್ದೇವೆ ಅಂತ ಹೇಳಿದ್ದೇವೆ. ಇವರ ತಾಕತ್ತಿಗೆ ಅಡ್ಡ ಮತ ಹಾಕಿದವರು ಯಾರು ಅಂತ ಕಂಡು ಹಿಡಿಯಲಿ. ನನ್ನ ಕೆಣಕೋದು ಬೇಡ. ಕೆಣಕಿದರೆ ನಾವೂ ತಕ್ಕ ಉತ್ತರ ಕೊಡ್ತೇವೆ ಎಂದು ವಾಗ್ದಾಳಿ ನಡೆಸಿದರು. ಬಿಜೆಪಿಯಲ್ಲಿ ಅಡ್ಡ ಮತದಾನ ವಿಚಾರವಾಗಿ ಮಾತನಾಡಿ, ಆರ್.ಅಶೋಕ್ ಅವರು ವಿಜಯೇಂದ್ರ ಕಡೆಯ ಅಭ್ಯರ್ಥಿ ಸೋಲಿಸಬೇಕು ಅಂತ, ವಿಜಯೇಂದ್ರ ಅವರು ಅಶೋಕ್ ಕಡೆಯ ಅಭ್ಯರ್ಥಿ ಸೋಲಿಸಬೇಕು ಅಂತ ಅಡ್ಡ ಮತದಾನ ಮಾಡಿಸಿರಬೇಕು. ಅವರು ಇಬ್ಬರು ಮೊದಲು ಧರ್ಮಸ್ಥಳಕ್ಕೆ ಹೋಗಿ ಪ್ರಮಾಣ ಮಾಡಿದರೆ ಸಾಕು, ಬೇರೆ ಯಾರೂ ಪ್ರಮಾಣ ಮಾಡೋದು ಬೇಕಾಗಿಲ್ಲ ಎಂದು ಟಾಂಗ್ ನೀಡಿದರು.

**ಕಾಂಗ್ರೆಸ್ ಸೇರ್ಪಡೆ ಬಗ್ಗೆ ಯಾವ ತೀರ್ಮಾನ ತಗೊಂಡಿಲ್ಲ**

ಕಾಂಗ್ರೆಸ್ ಸೇರ್ಪಡೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, 2028ಕ್ಕೆ ಚುನಾವಣೆ ಇರೋದು. ಈಗ ಸದ್ಯಕ್ಕೆ ಯಾವ ತೀರ್ಮಾನವನ್ನೂ ತಗೊಂಡಿಲ್ಲ. ಇನ್ನೂ ಎರಡು ವರ್ಷ ಇದೆ ಚುನಾವಣೆಗೆ. ಮುಂದೆ ತೀರ್ಮಾನ ಮಾಡ್ತೇವೆ, ಕ್ಷೇತ್ರದಲ್ಲಿ ಕಾರ್ಯಕರ್ತರ ಸಭೆ ಮಾಡಿ ತೀರ್ಮಾನ ಮಾಡ್ತೇವೆ ಎಂದು ತಿಳಿಸಿದರು.

ಬಿಜೆಪಿಯಿ ಈ ಹಿಂದೆ ಶಾಸಕರನ್ನು ಖರೀದಿಸಿದೆ ಎಂಬ ಈಶ್ವರಪ್ಪ ಹೇಳಿಕೆ ವಿಚಾರವಾಗಿ ಮಾತನಾಡಿ, ಕೆ.ಎಸ್.ಈಶ್ವರಪ್ಪ ಅವರಿಗೆ ನಾಲಿಗೆ ಸರಿಯಿಲ್ಲ. ನಾಲಿಗೆ ಬಿಗಿ ಹಿಡಿದು ಮಾತಾಡಲಿ. ಅವರು ನಾಲಿಗೆ ಬಿಗಿ ಹಿಡಿದು ಮಾತಾಡಿದರೆ, ನಾವೂ ಕೂಡಾ ಅವರ ವಯಸ್ಸಿಗೆ ಗೌರವ ಕೊಡ್ತೇವೆ. ಅವರು ನಮ್ಮಿಂದ ಸಚಿವರು ಆದವರು. ನಂತರ ಸಚಿವ ಸ್ಥಾನ ಅವರ ತಪ್ಪಿಂದ ಕಳ್ಕೊಂಡ್ರು, ಎಂದು ತಿರುಗೇಟು ನೀಡಿದರು.

# ನಕಲಿ ವೈದ್ಯನ ಮನೆ ಮೇಲೆ ತಾಲೂಕು ಆರೋಗ್ಯ ಅಧಿಕಾರಿಗಳ ತಂಡದಿಂದ ದಿಢೀರ್ ದಾಳಿ

• ಉದಯವಾಹಿನಿ, ಚಿಂತಾಮಣಿ

ತಾಲ್ಲೂಕಿನ ಮುಂಗಾನಹಳ್ಳಿ ಹೋಬಳಿಯ ಬಟ್ಲಹಳ್ಳಿ ಗ್ರಾಮದಲ್ಲಿ ಯಾವುದೇ ಕಾನೂನುಬದ್ಧ ವೈದ್ಯಕೀಯ ವಿದ್ಯಾರ್ಹತೆ ಇಲ್ಲದೆ ಸಾರ್ವಜನಿಕರಿಗೆ ಚಿಕಿತ್ಸೆ ನೀಡುತ್ತಿದ್ದ ಹಾಗೂ ಗರ್ಭಿಣಿಯರಿಗೆ ಕಾನೂನು ಬಾಹಿರವಾಗಿ ಅಬಾರ್ಷನ್ ಮಾತ್ರೆಗಳನ್ನು ವಿತರಿಸುತ್ತಿದ್ದ ಬಿ. ನಾರಾಯಣ್ ರೆಡ್ಡಿ(54)ಎಂಬ ನಕಲಿ ವೈದ್ಯನ ನಿವಾಸದ ಮೇಲೆ ಅಧಿಕಾರಿಗಳ ತಂಡ ಇಂದು ದಿಢೀರ್ ದಾಳಿ ನಡೆಸಿದೆ.

ಇತ್ತೀಚೆಗೆ ಮಹಿಳೆಯೊಬ್ಬರಿಗೆ ಅಬಾರ್ಷನ್ ಆಗಲು ಈ ನಾರಾಯಣ್ ರೆಡ್ಡಿ ಮಾತ್ರೆಗಳನ್ನು ನೀಡಿದ್ದ ಎನ್ನಲಾಗಿದೆ. ಇದರಿಂದಾಗಿ ತೀವ್ರ ಅಸ್ವಸ್ಥಗೊಂಡ ಸದರಿ ಗರ್ಭಿಣಿ ಮಹಿಳೆಯು ಚಿಂತಾಮಣಿಯ


ಉದಯವಾಹಿನಿ ಚಿತ್ರ

ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ದಾಖಲಾಗಿದ್ದರು. ಈ ಬಗ್ಗೆ ನಿಖರ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಅಧಿಕಾರಿಗಳು ಕಾರ್ಯಾಚರಣೆಗೆ ಇಳಿದಿದ್ದಾರೆ.

ತಾಲ್ಲೂಕು ಆರೋಗ್ಯ ಅಧಿಕಾರಿಗಳಾದ ಡಾ. ಎಂ.ಎಸ್. ರಾಮಚಂದ್ರರೆಡ್ಡಿ ನೇತೃತ್ವದಲ್ಲಿ ಜಂಟಿ ದಾಳಿ ನಡೆಸಲಾಯಿತು.ಈ ತಂಡದಲ್ಲಿ ಬಟ್ಲಹಳ್ಳಿ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳಾದ ಡಾ.ರಾಜೇಶ್ ಕುಮಾರ್, ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿಯ ಹಿರಿಯ ಆರೋಗ್ಯ ನಿರೀಕ್ಷಕರಾದ ಶ್ರೀನಿವಾಸ ರೆಡ್ಡಿ, ತಾಲ್ಲೂಕು ಎಪಿಡೆಮಿಯಾಲಜಿಸ್ಟ್ ಪ್ರಶಾಂತ್, ಬಟ್ಲಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿಯಾದ ಶೀಲಾಹಾಗೂ ಸಮುದಾಯ ಆರೋಗ್ಯ ಕೇಂದ್ರದ ಫಾರ್ಮಸಿ ಅಧಿಕಾರಿ ಶ್ರಾವಣಿ ಪಾಲ್ಗೊಂಡಿದ್ದರು.

ಅಧಿಕಾರಿಗಳ ತಂಡ ಬಟ್ಲಹಳ್ಳಿ ಗ್ರಾಮದಲ್ಲಿರುವ ನಾರಾಯಣ್ ರೆಡ್ಡಿ ಅವರ ನಿವಾಸಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ,ನಕಲಿ ವೈದ್ಯರೆಂದು ನಾಮಫಲಕ ಹಾಕಿಕೊಂಡಿದ್ದ ಬಿ. ನಾರಾಯಣ್ ರೆಡ್ಡಿ ಮನೆಯಲ್ಲಿ ಇರಲಿಲ್ಲ.

ಆದರೆ ಅವರ ಪತ್ನಿ ವಿಜಯಲಕ್ಷ್ಮಿ ಅವರು ಮನೆಯಲ್ಲಿದ್ದರು. ಅವರ ಸಮ್ಮುಖದಲ್ಲೇ ಇಡೀ ಮನೆಯನ್ನು ತಪಾಸಣೆ ನಡೆಸಿದಾಗ, ರೋಗಿಗಳಿಗೆ ಬಳಸಲಾಗುತ್ತಿದ್ದ ಅನೇಕ ಸೂಜಿಗಳು ಸಿರಿಂಜ್ ವಿವಿಧ ಮಾತ್ರೆಗಳು ಹಾಗೂ ಗ್ಲುಕೋಸ್ ಬಾಟಲಿಗಳು ಪತ್ತೆಯಾಗಿವೆ.

## ಜೂ.27ಕ್ಕೆ ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತಿ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಒಕ್ಕಲಿಗರ ಸಂಘ, ಚಿಕ್ಕಬಳ್ಳಾಪುರ ಇವರ ಸಂಯುಕ್ತಾಶ್ರಯದಲ್ಲಿ ನಾಡಪ್ರಭು ಶ್ರೀಕೆಂಪೇಗೌಡರ ಜಯಂತಿಯನ್ನು ಜೂ.27ರಂದು ಬೆಳಗ್ಗೆ 11.30 ಗಂಟೆಗೆ ನಗರದ ಕನ್ನಡ ಭವನದಲ್ಲಿ ಆಯೋಜಿಸಲಾಗಿದೆ. ಮೆರವಣಿಗೆ ಕಾರ್ಯಕ್ರಮವು ಬೆಳಿಗ್ಗೆ 10 ಗಂಟೆಗೆ

ಶ್ರೀಕೆಂಪೇಗೌಡರವರ ಪಲ್ಲಕ್ಕಿ ಹಾಗೂ ಜಾನಪದ ಕಲಾ ತಂಡಗಳೊಂದಿಗೆ ವಾಪಸಂದ್ರ ಶ್ರೀರಂಗನಾಥಸ್ವಾಮಿ ದೇವಾಲಯ ಮುಂಭಾಗದಿಂದ ಕನ್ನಡ ಭವನದವರೆಗೆ ಮೆರವಣಿಗೆ ನಡೆಯಲಿದೆ. ಆದಿಚುಂಚನಗಿರಿ ಶ್ರೀಕ್ಷೇತ್ರ, ಚಿಕ್ಕಬಳ್ಳಾಪುರ ಶಾಖಾ ಮಠದ ಶ್ರೀ ಶ್ರೀ ಶ್ರೀ ಮಂಗಳನಾಥ ಸ್ವಾಮೀಜಿ ಯವರ ದಿವ್ಯ ಸಾನಿದ್ಯದಲ್ಲಿ ನೆರವೇರಲಿದೆ. ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಪ್ರದೀಪ್ ಈಶ್ವರ್ ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದ ಡಾ. ಕೆ. ಸುಧಾಕರ್, ಕೋಲಾರ ಲೋಕಸಭಾ ಕ್ಷೇತ್ರದ ಸಂಸದ ಎಂ. ಮಲ್ಲೇಶ್ ಬಾಬು, ಕರ್ನಾಟಕ ರಾಜ್ಯ ಬೀಜ ನಿಗಮ ಅಧ್ಯಕ್ಷ ಆಂಜಿನಪ್ಪ, ಬಿ.ಎನ್. ರವಿಕುಮಾರ್, ಕೆ. ಹೆಚ್. ಪುಟ್ಟಸ್ವಾಮಿಗೌಡ ವಿಧಾನ ಪರಿಷತ್ ಶಾಸಕರುಗಳಾದ ಚಿದಾನಂದ ಎಂ ಗೌಡ, ಎಂ.ಎಲ್. ಅನಿಲ್ ಕುಮಾರ್, ಡಿ.ಟಿ. ಶ್ರೀನಿವಾಸ್, ಡಾ.ಹೆಚ್.ನರಸಿಂಹಯ್ಯ ವಿಜ್ಞಾನ ಶೈಕ್ಷಣಿಕ ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಹೆಚ್. ಶಿವಶಂಕರ್ ರೆಡ್ಡಿ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಎನ್. ಕೇಶವ ರೆಡ್ಡಿ, ಜಿಲ್ಲಾ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎನ್. ರಮೇಶ್ ಭಾಗವಹಿಸಲಿದ್ದಾರೆ.

# ಕಸದ ರಾಶಿಯ ತಾಣವಾದ ಜೋಡಿ ಕೃಷ್ಣಾಪುರ ಗ್ರಾಮ

• ಉದಯವಾಹಿನಿ, ವೇಮಗಲ್

ವಿಜಯನಗರ ಸಾಮ್ರಾಜ್ಯದ ಅತ್ಯುನ್ನತ ದೊರೆ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಜನ್ಮತಾಳಿದ 'ಕೃಷ್ಣಾಪುರ' ಗ್ರಾಮವು ಬ್ರಿಟಿಷರ ಕಂದಾಯ ದಾಖಲೆಗಳಲ್ಲಿ 'ಜೋಡಿ ಕೃಷ್ಣಾಪುರ' ಎಂದು ನಮೂದಾಗಿದ್ದು, ಇದೀಗ ಅದೇ ಹೆಸರಿನಲ್ಲಿ ಈ ಗ್ರಾಮವನ್ನು ಗುರುತಿಸಲಾಗುತ್ತದೆ. ಜೋಡಿ ಕೃಷ್ಣಾಪುರ ಗ್ರಾಮದಲ್ಲಿ ಹತ್ತಾರು ಸಮಸ್ಯೆಗಳು ತಲೆದೋರಿವೆ. ಗ್ರಾಮದಲ್ಲಿನ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೆ ನಿಂತಲ್ಲೇ ನಿಂತಿದ್ದು, ಸೊಳ್ಳೆಗಳ ಆವಾಸ ಸ್ಥಾನವಾಗಿ ಮಾರ್ಪಟ್ಟಿದೆ. ಇನ್ನು ಗ್ರಾಮದ ಎಲ್ಲಿ ನೋಡಿದರೂ, ಕಸದ ರಾಶಿ ಕಣ್ಣಿಗೆ ರಾಚುತ್ತದೆ. ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಗಿದ್ದ ಗ್ರಾಮ, ಕಸದ ಕೊಂಪೆಯಾಗಿ ಮಾರ್ಪಟ್ಟಿದೆ ಎಂದು ಗ್ರಾಮಸ್ಥರು ಬೇಸರ ವ್ಯಕ್ತಪಡಿಸುತ್ತಾರೆ.

ಕೋಲಾರ ತಾಲ್ಲೂಕಿನ ನರಸಾಪುರ ಹೋಬಳಿಯ ಬೆಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಜೋಡಿ ಕೃಷ್ಣಾಪುರ ಗ್ರಾಮವು ಪ್ರಸ್ತುತ ನರಸಾಪುರ ಕೈಗಾರಿಕಾ ಪ್ರದೇಶದ ಹೃದಯ ಭಾಗವೇ ಆಗಿದೆ. ದೇಶ-ವಿದೇಶಗಳ ನೂರಾರು ಬೃಹತ್ ಕೈಗಾರಿಕೆಗಳು ಈ ಗ್ರಾಮದ ವ್ಯಾಪ್ತಿಯಲ್ಲೇ ತಲೆ ಎತ್ತಿವೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕೈಗಾರಿಕಾ ವಲಯವನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡಿದ್ದರೂ, ಗ್ರಾಮದಲ್ಲಿ ಸ್ವಚ್ಛತೆ ಎಂಬುದು ಮರೀಚಿಕೆಯಾಗಿದೆ.

ಕಸ ಸಂಗ್ರಹಿಸುವ ವ್ಯವಸ್ಥಿತ ಪ್ರಕ್ರಿಯೆ ಇಲ್ಲದ ಕಾರಣ ಸ್ಥಳೀಯ ನಿವಾಸಿಗಳು, ಅಂಗಡಿ ಮಾಲೀಕರು, ಬೇಕರಿ ಮಾಲೀಕರು ಎಲ್ಲೆಂದರಲ್ಲಿ ಕಸ ವಿಲೇವಾರಿ ಮಾಡಿದ್ದಾರೆ. ಗ್ರಾಮದ ಮುಖ್ಯ ರಸ್ತೆ ಚರಂಡಿಗಳಲ್ಲಿ ಪ್ಲಾಸ್ಟಿಕ್ ಕಸದ ರಾಶಿ ತುಂಬಿ ತುಳುಕುತ್ತಿದೆ.

## ಗ್ರಾಮಸ್ಥರ ಬೇಸರ



ಉದಯವಾಹಿನಿ ಚಿತ್ರ

"ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಗ್ರಾಮವನ್ನು ಸ್ವಚ್ಛ ಮಾಡಬೇಕು. ಈ ಸಂಬಂಧ ಹಲವು ಬಾರಿ ಮನವಿ ಮಾಡಲಾಗಿದೆ. 2-3 ದಿನಗಳಲ್ಲಿ ಈ ಕುರಿತು ಅವರೊಂದಿಗೆ ಚರ್ಚಿಸುತ್ತೇವೆ. ಸಂಪರಾಜು, ಪಿಡಿಒ, ಬೆಳ್ಳೂರು ಗ್ರಾ. ಪಂ

### ಸ್ವಚ್ಛತೆಗೆ ಸಿಎಸ್ಆರ್ ಬಳಕೆಯಾಗಲಿ

ಈ ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಹುರಾಷ್ಟ್ರೀಯ ಕಂಪನಿಗಳು ತಮ್ಮಲ್ಲಿನ ಸಿಎಸ್ಆರ್ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ) ನಿಧಿಯನ್ನು ಗ್ರಾಮದ ಸ್ವಚ್ಛತೆಗೆ ಮೀಸಲಿಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸುತ್ತಾರೆ.

ಜೋಡಿ ಕೃಷ್ಣಾಪುರ ಗ್ರಾಮದ ವ್ಯಾಪ್ತಿಯಲ್ಲಿನ ಹಲವು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕಂಪನಿಗಳು ಪ್ರತಿ ವರ್ಷ ಕೋಟ್ಯಂತರ ರೂ.ಯನ್ನು ಸಿಎಸ್ಆರ್ ನಿಧಿಗೆ ಮೀಸಲಿಡುತ್ತವೆ. ಆದರೆ, ಈ ಸಂಸ್ಥೆಗಳು ತಮ್ಮ ಸುತ್ತಮುತ್ತಲಿನ ಪರಿಸರ ಸುಧಾರಣೆಗಾಗಿ ಈ ನಿಧಿ ಬಳಕೆ ಮಾಡದೆ, ದೂರದ ಊರುಗಳಲ್ಲಿ ಸಿಎಸ್ಆರ್ ನಿಧಿ ಬಳಕೆ ಮಾಡುತ್ತಿವೆ ಎಂದು ಸ್ಥಳೀಯರು ದೂರಿದರು.

### ಹೆಚ್ಚಿದ ಸೊಳ್ಳೆ ಕಾಟ

ಚರಂಡಿ ದುರ್ನಾತ ಮತ್ತು ಕೊಳಚೆ ನೀರು ಹರಿಯದ ನಿಂತಲ್ಲೇ ನಿಂತ ಕಾರಣ ಗ್ರಾಮದಲ್ಲಿ ಸೊಳ್ಳೆ ಕಾಟ ಹೆಚ್ಚಿದೆ. ಸೊಳ್ಳೆ ಬತ್ತಿ ಹಚ್ಚಿದರೂ ಮತ್ತು ಲಿಕ್ವಿಡ್ ಹಾಕಿದರೂ ಸೊಳ್ಳೆಗಳು ನಿಯಂತ್ರಣಕ್ಕೆ ಬರುತ್ತಿಲ್ಲ. ಆದರೆ, ನಮ್ಮ ಕಷ್ಟ ಮಾತ್ರ ಯಾರಿಗೂ ಕಾಣುತ್ತಿಲ್ಲ. ಕನಿಷ್ಠ ವಾರಕ್ಕೊಮ್ಮೆಯಾದರೂ ಗ್ರಾಮದಲ್ಲಿ ಸೊಳ್ಳೆ ನಿಯಂತ್ರಣದ ಫಾಗಿಂಗ್ ಮಾಡುವ ಕೆಲಸವನ್ನು ಗ್ರಾಮ ಪಂಚಾಯಿತಿಯವರು ಮಾಡಬೇಕು. ಚರಂಡಿಗಳನ್ನು ಶೀಘ್ರವೇ ಸ್ವಚ್ಛಗೊಳಿಸಬೇಕು. ಇಲ್ಲದಿದ್ದರೆ, ಕಲುಷಿತ ಚರಂಡಿ ನೀರು ಕೆರೆಗೆ ಹರಿಯುವ ಸಾಧ್ಯತೆ ಇದೆ.
ಮುನಿಶಾಮಪ್ಪ, ಗ್ರಾಮಸ್ಥ, ಜೋಡಿ ಕೃಷ್ಣಾಪುರ

# ಚಾಮರಾಜನಗರದಲ್ಲಿ ಮಾದಕ ವಸ್ತುಗಳ ಸೇವನೆ ತ್ಯಜಿಸಲು ಯುವಜನತೆಗೆ ಕರೆ

• ಉದಯವಾಹಿನಿ, ಚಾಮರಾಜನಗರ

ಮಾದಕ ವಸ್ತುಗಳ ಸೇವನೆ ತ್ಯಜಿಸುವ ಮೂಲಕ ಯುವಜನತೆ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು, ಮಾದಕ ವ್ಯಸನಗಳ ದುಷ್ಪರಿಣಾಮಗಳ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸಬೇಕು ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್ ಸಲಹೆ ನೀಡಿದರು. ನಗರದ ಚಾಮರಾಜೇಶ್ವರ ದೇವಾಲಯದ ಆವರಣದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಅಂತರರಾಷ್ಟ್ರೀಯ ಮಾದಕ ವ್ಯಸನ ತಡೆ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಜಾಗೃತಿ ಜಾಥಾಗೆ ಚಾಲನೆ ನೀಡಿ ಮಾತನಾಡಿ, ದುಶ್ಚಟಗಳಿಗೆ ಯುವಜನತೆ ಆಕರ್ಷಿತರಾಗುತ್ತಿರುವುದು ಆತಂಕಕಾರಿ


ಉದಯವಾಹಿನಿ ಚಿತ್ರ

ವಿಚಾರ ಎಂದರು. ಮಾದಕ ವಸ್ತುಗಳ ಸೇವನೆಯ ಹವ್ಯಾಸ ವೈಯಕ್ತಿಕ ನಷ್ಟದ ಜೊತೆಗೆ ಕುಟುಂಬ ಹಾಗೂ ಸಮಾಜದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ವ್ಯಸನಿಗಳ ಆರೋಗ್ಯ ಹಾಳಾಗುವುದರ ಜೊತೆಗೆ ಕುಟುಂಬವೂ ಬೀದಿಗೆ ಬರಲಿದೆ. ವಿಶೇಷವಾಗಿ ಯುವಜನತೆ, ವಿದ್ಯಾರ್ಥಿಗಳು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಅರಿವು ಹೊಂದಿ ದೂರವಿರಬೇಕು ಎಂದು ಸಲಹೆ ನೀಡಿದರು.

ದೈಹಿಕ ಹಾಗೂ ಮಾನಸಿಕ ಸಮತೋಲನ ಕಾಪಾಡಿಕೊಳ್ಳಲು ಮಾದಕ ವಸ್ತುಗಳ ಸೇವನೆಯನ್ನು ತ್ಯಜಿಸಬೇಕು. ಸ್ವಸ್ಥ ಸಮಾಜ ನಿರ್ಮಾಣ ಸಂಕಲ್ಪ ಮಾಡುವ ಮೂಲಕ ಬಲಿಷ್ಠ ದೇಶ ಕಟ್ಟಲು ಮುಂದಾಗಬೇಕು. ಮಾದಕ ಪದಾರ್ಥಗಳ ಉತ್ಪಾದನೆ, ಸಾಗಣೆ, ಬಳಕೆಗೆ ಸಂಪೂರ್ಣ ಕಡಿವಾಣ ಬೀಳಬೇಕು ಎಂದು ಸಲಹೆ ನೀಡಿದರು. ವ್ಯಸನಕ್ಕೆ ಒಳಗಾಗಿರುವವರನ್ನು ಪತ್ತೆಹಚ್ಚಿ ಪುನಶ್ಚೇತನ ಶಿಬಿರಗಳನ್ನು ಆಯೋಜಿಸುವ ಮೂಲಕ ಹೊಸ ಬದುಕು ಆರಂಭಿಸಲು ಪೂರಕ ವ್ಯವಸ್ಥೆ ಮಾಡಬೇಕು. ಈ ನಿಟ್ಟಿನಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯಿಂದ ಶಾಲಾ ಕಾಲೇಜುಗಳು ಸೇರಿದಂತೆ ಜಿಲ್ಲೆಯಾದ್ಯಂತ ಮಾದಕ ವಸ್ತುಗಳ ಸೇವನೆ ತಡೆಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ಶಶಿಧರ್ ಹೇಳಿದರು.

**ಜಾಗೃತಿ ಜಾಥಾ:** ಪೊಲೀಸ್ ಇಲಾಖೆ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸೇವಾಭಾರತಿ ಹಾಗೂ ಬ್ರೆಟ್ ಕಾಲೇಜು ವಿದ್ಯಾರ್ಥಿಗಳು, ಸರ್ಕಾರಿ ಶಾಲೆಗಳು ಹಾಗೂ ಜೆ.ಎಸ್.ಎಸ್ ಶಾಲೆಯ ವಿದ್ಯಾರ್ಥಿಗಳು, ಸಾರ್ವಜನಿಕರು ಪಾಲ್ಗೊಂಡಿದ್ದರು.

## ಚಾಮರಾಜನಗರದಲ್ಲಿ ಕಾಡಾನೆ ಕಳೇಬರ ಪತ್ತೆ, ಗಾಯಗಳಿಂದ ಸಾವು ಶಂಕೆ

• ಉದಯವಾಹಿನಿ , ಚಾಮರಾಜನಗರ


ಉದಯವಾಹಿನಿ ಚಿತ್ರ

ಬಿಳಿಗಿರಿ ರಂಗನಾಥ ಸ್ವಾಮಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಪುಣಜನೂರು ವನ್ಯಜೀವಿ ವಲಯದ ಕಾರೆಪಾಳ್ಯ ಗಸ್ತಿನ ಸಮೀಪದ ಕಾಫಿ ತೋಟದಲ್ಲಿ ಕಾಡಾನೆ ಕಳೇಬರ ಪತ್ತೆಯಾಗಿದೆ. 25 ವರ್ಷದ ಗಂಡಾನೆ ಇತರೆ ಆನೆಗಳೊಂದಿಗಿನ ಕಾದಾಟದಿಂದ ಗಾಯಗೊಂಡು ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ. ಸುದ್ದಿ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿನೀಡಿ ಪರಿಶೀಲಿಸಿದರು.

ಪಶು ವೈದ್ಯಾಧಿಕಾರಿ ಸಮ್ಮುಖದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಆನೆಯ ಅಂಗಾಂಗಗಳ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಬಿಆರ್‌ಟಿ ಅಧಿಕಾರಿಗಳು ತಿಳಿಸಿದ್ದಾರೆ.

## ಟೌನ್‌ಶಿಪ್ ಪ್ರದೇಶಕ್ಕೆ ಬನ್ನಿ ಎಂದು ಡಿಕೆ ಶಿವಕುಮಾರ್‌ಗೆ ಎ. ಮಂಜುನಾಥ್ ಸವಾಲು

• ಉದಯವಾಹಿನಿ, ಬಿಡದಿ

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಶೇ 80ರಷ್ಟು ರೈತರು ಒಪ್ಪಿದ್ದಾರೆ ಎನ್ನುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸ್ಥಳೀಯ ಶಾಸಕ ಎಚ್.ಸಿ. ಬಾಲಕೃಷ್ಣ ಅವರು ತಾಕತ್ತಿದ್ದರೆ ಯೋಜನಾ ಪ್ರದೇಶಕ್ಕೆ ಒಮ್ಮೆ ಭೇಟಿ ನೀಡಿ ರೈತರ ಅಹವಾಲು ಆಲಿಸಲಿ' ಎಂದು ಜೆಡಿಎಸ್ ಮಾಜಿ ಶಾಸಕ ಎ. ಮಂಜುನಾಥ್ ಸವಾಲು ಹಾಕಿದರು. 'ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ ಬಳಿಕ ಸರ್ಕಾರದ ಜನಪ್ರತಿನಿಧಿ, ಜಿಲ್ಲಾಧಿಕಾರಿ ಸೇರಿದಂತೆ ಯಾರೂ ಭೇಟಿ ನೀಡಿ ಹೋರಾಟನಿರತ ರೈತರ ಅಹವಾಲು ಆಲಿಸಿಲ್ಲ. ಬಾಲಕೃಷ್ಣ ಟೌನ್‌ಶಿಪ್ ಪ್ರದೇಶಕ್ಕೆ ಬಾರದೆ ತಲೆ ಮರೆಸಿಕೊಂಡು ಓಡಾಡುತ್ತಿದ್ದಾರೆ' ಎಂದು ನಡೆದ ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.


ಉದಯವಾಹಿನಿ ಚಿತ್ರ

ಯೋಜನಾ ಪ್ರದೇಶಕ್ಕೆ ಬರಲು ಭಯಪಡುವವರಿಗೆ ಅಲ್ಲಿಗೇ ಬಂದು ಯೋಜನೆಕುರಿತು ಬಹಿರಂಗವಾಗಿ ಚರ್ಚಿಸುವ ಧೈರ್ಯ ಎಲ್ಲಿಂದ ಬರಬೇಕು.

ಅದಕ್ಕಾಗಿವಿಧಾನಸೌಧಕ್ಕೆ ಬನ್ನಿ ಎಂದು ನಮ್ಮ ನಾಯಕರನ್ನು ಕರೆಯುತ್ತಿದ್ದಾರೆ. ಸ್ಥಳೀಯವಾಗಿ ನಡೆದರೆ ಗಲಾಟೆಯಾಗುತ್ತದೆ ಎಂದು ಶಾಸಕರು ಸಬೂಬು ಹೇಳುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು. 'ರೈತರ ಬದುಕಿಗೆ ಸಂಬಂಧಿಸಿದ ಯೋಜನೆ ಕುರಿತು ಅವರ ಸಮ್ಮುಖದಲ್ಲಿ ಚರ್ಚೆ ನಡೆಯಬೇಕೇ ವಿನಾ ಬೇರೆಲ್ಲೊ ಅಲ್ಲ. ಮುಖ್ಯಮಂತ್ರಿ ಕೈಯಲ್ಲಿ ಸ್ಥಳೀಯವಾಗಿ ವೇದಿಕೆ ಸಿದ್ದಪಡಿಸಲು ಆಗದಿದ್ದರೆ, ನಾನೇ ವೇದಿಕೆ ಸಿದ್ಧಪಡಿಸುವೆ. ಗಲಾಟೆ ಆಗದಂತೆ ನಾನೇ ಜವಾಬ್ದಾರಿ ವಹಿಸಿಕೊಳ್ಳುವೆ. ನಮ್ಮ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ಕರೆ ತರುವೆ' ಎಂದರು.'ಆಧಾರ್ ಕಾರ್ಡ್ ಹೊಂದಿರುವ ಟೌನ್‌ಶಿಪ್ ವ್ಯಾಪ್ತಿಯ ಸ್ಥಳೀಯರನ್ನು ಮಾತ್ರ ಸಭೆಗೆ ಸೇರಿಸೋಣ. ಆಗ ಚರ್ಚೆ ನಡೆಸಿ, ಎಷ್ಟು ಮಂದಿ ಪರ ಮತ್ತು ವಿರೋಧ ವ್ಯಕ್ತಪಡಿಸುತ್ತಾರೊ ಅದರ ಮೇಲೆ ಟೌನ್‌ಶಿಪ್ ಬೇಕಾ ಬೇಡವೇ ಎಂಬುದನ್ನು ನಿರ್ಧರಿಸೋಣ. ಹೆಚ್ಚಿನ ರೈತರು ಒಪ್ಪಿದರೆ ಯೋಜನೆಯನ್ನು ನಾವು ಬೆಂಬಲಿಸುತ್ತೇವೆ.

ಇಲ್ಲದಿದ್ದರೆ, ಮುಖ್ಯಮಂತ್ರಿ ಅವರು ಯೋಜನೆ ಕೈ ಬಿಡಬೇಕು' ಎಂದು ಸವಾಲು ಹಾಕಿದರು.ಸುದ್ದಿಗೋಷ್ಠಿಯಲ್ಲಿ ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ರೈತ ಭೂ ಹಿತರಕ್ಷಣಾ ಸಮಿತಿ ಅಧ್ಯಕ್ಷ ಕೆ. ರಾಮಯ್ಯ ಹಾಗೂ ರೈತ ಮುಖಂಡರು ಇದ್ದರು.

# ಎಲ್‌ಐಸಿ ಹಣದ ಮೇಲಿನ ದುರಾಸೆ, ತಮ್ಮನನ್ನೇ ಭೀಕರವಾಗಿ ಕೊಂದ ಅಣ್ಣ ಸೇರಿ ನಾಲ್ವರ ಬಂಧನ

• ಉದಯವಾಹಿನಿ, ತುಮಕೂರು

ಜೂನ್ 20 ರಂದು ಶಿರಾ ತಾಲ್ಲೂಕಿನ ಪಟ್ಟನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸರಹದ್ದು ಹೊಸನಹಳ್ಳಿ - ಬಡೇನಹಳ್ಳಿ ಗೇಟ್ ಮಧ್ಯದಲ್ಲಿ ರಸ್ತೆ ಅಪಘಾತದ ರೀತಿ ಒಂದು ಬೈಕ್ ಮತ್ತು ಪರಿಚಿತ ಪುರುಷನ ಶವ ಪತ್ತೆಯಾಗಿತ್ತು. ಮೃತನ ಅಣ್ಣ ರಂಗನಾಥ ನೀಡಿದ ದೂರಿನ ಮೇರೆಗೆ ಅನುಮಾನಾಸ್ಪದ ಸಾವು ಎಂದು ಪಟ್ಟನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸ್ ಅಧೀಕ್ಷಕ ಕೆ.ವಿ. ಅಶೋಕ್ ಪ್ರಕರಣದ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಲು ಶಿರಾ ಉಪವಿಭಾಗದ ಡಿವೈಎಸ್‌ಪಿ ಬಿ.ಕೆ. ಶೇಖರ್ ಮತ್ತು ಶಿರಾ ಗ್ರಾಮಾಂತರ ವೃತ್ತದ ಸಿಪಿಐ ಡಿ.ಜಿ. ಶ್ರೀನಿವಾಸ್ ಅವರ ನೇತೃತ್ವದಲ್ಲಿ ಪ್ರಕರಣದ ಆರೋಪಿಗಳನ್ನು ಶೀಘ್ರವಾಗಿ ಬಂಧಿಸಲು 25ಕ್ಕೂ ಹೆಚ್ಚು ಸಿಬ್ಬಂದಿ ಇರುವ ಮೂರು ತಂಡಗಳನ್ನು ರಚನೆ ಮಾಡಿದ್ದರು. ಈ ಪ್ರಕರಣದಲ್ಲಿ ತನಿಖೆ ಕೈಗೊಂಡ ಪಟ್ಟನಾಯಕನಹಳ್ಳಿ ಪೊಲೀಸ್ ಠಾಣೆಯ ಪಿ.ಎಸ್. ಐ ಹರೀಶ್ ಅವರು


ಉದಯವಾಹಿನಿ ಚಿತ್ರ

ಮೃತನ ಮೈಮೇಲಿನ ಗಾಯಗಳು ಹಾಗೂ ಶವ ಪರೀಕ್ಷೆ ನಡೆಸಿದ ವೈದ್ಯರು ನೀಡಿದ ಅಭಿಪ್ರಾಯದ ಮೇರೆಗೆ ಮೃತ ರಮೇಶನನ್ನು ಯಾರೋ ದುಷ್ಕರ್ಮಿಗಳು, ಯಾವುದೋ ದುರುದ್ದೇಶದಿಂದ ಕೊಲೆ ಮಾಡಿದ್ದಾರೆ. ಕೊಲೆಯನ್ನು ಮರೆಮಾಚುವ ಉದ್ದೇಶದಿಂದ ರಸ್ತೆ ಅಪಘಾತವಾಗಿದೆ ಎಂದು ಸೃಷ್ಟಿ ಮಾಡಿದ್ದಾರೆ ಎಂದು ವರದಿ ನೀಡಿದ್ದರು. ಕೊಲೆ ಮಾಡಿದ ಆರೋಪಿಗಳ ಪತ್ತೆಗಾಗಿ ಕೊಲೆ ಪ್ರಕರಣ ದಾಖಲಾದ 12 ಗಂಟೆಯ ಒಳಗಾಗಿ ಪ್ರಕರಣದ ಪ್ರಮುಖ ಸೂತ್ರಧಾರಿ ಹನುಮಂತರಾಜು ಮತ್ತು ಇತರೆ ಆರೋಪಿಗಳನ್ನು ಪತ್ತೆಮಾಡಿ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಮೃತ ರಮೇಶನು ಮೂಲತಃ ಆಂಧ್ರಪ್ರದೇಶದ ಸತ್ಯಸಾಯಿ ಜಿಲ್ಲೆಯ, ಅಮರಾಪುರ ತಾಲ್ಲೂಕಿನ ಮಡಕಶಿರಾ ಗ್ರಾಮದವ. ಈತ ಕಳೆದ 6 ವರ್ಷದಿಂದ ಸ್ವಂತ ಗ್ರಾಮವನ್ನು ತೊರೆದು ಬೆಂಗಳೂರಿನಲ್ಲಿ ಎಳನೀರು ವ್ಯಾಪಾರ ಮತ್ತು ಮಂಡ್ಯದಲ್ಲಿ ಕಬ್ಬಿನ ಜ್ಯೂಸ್ ವ್ಯಾಪಾರ ಮಾಡಿಕೊಂಡಿದ್ದನು. ಮದುವೆಯಾದ ನಂತರ ಆತನ ಹೆಂಡತಿ ದೂರವಾಗಿದ್ದು, ಬಳಿಕ ಈತ ಮಾಟಮಂತ್ರ ಮಾಡುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದನು. ತನ್ನ ಸ್ವಂತ ಅಣ್ಣಂದಿರ ಸಂಸಾರಕ್ಕೆ ಆಗಿಂದಾಗ್ಗೆ ಮಾಟ ಮಂತ್ರ ಮಾಡಿ ತೊಂದರೆ ಕೊಡುತ್ತಿದ್ದನು. ಇದರಿಂದ ಬೇಸತ್ತ ಮೃತನ ಮೂರನೇ ಅಣ್ಣ ಆರೋಪಿ ಹನುಮಂತರಾಜು (ರಾಜು) ಕಳೆದ 2 ವರ್ಷಗಳ ಹಿಂದೆ ತನ್ನ ತಮ್ಮನನ್ನು ಮುಗಿಸಬೇಕೆಂದು ನಿರ್ಧರಿಸಿದ್ದ. ಆ ಮೂಲಕ ಲಾಭ ಮಾಡಿಕೊಳ್ಳುವ ಉದ್ದೇಶದಂದ ಮೃತ ರಮೇಶನ ಹೆಸರಿಗೆ 15 ಲಕ್ಷ ಮೊತ್ತದ ಎಲ್.ಐ.ಸಿ ವಿಮೆ ಮಾಡಿಸಿ ತನ್ನನ್ನೇ ನಾಮಿನಿ ಮಾಡಿಕೊಂಡಿದ್ದನು ಎಂದು ಪೊಲೀಸರು ಮಾಹಿತಿ ನೀಡಿದರು. ಅಲ್ಲದೆ ಪ್ರತಿ ವರ್ಷಕ್ಕೆ 15,000 ರೂ. ವಿಮಾ ಕಂತನ್ನು ಪಾವತಿ ಮಾಡಿದ್ದನು. ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ನಾಮಿನಿದಾರರಿಗೆ ವಿಮೆ ಮೊತ್ತದ ಡಬಲ್ ಹಣ ಪಾವತಿಯಾಗುವಂತೆ ಇದ್ದುದ್ದರಿಂದ ಈ ಹಣದ ದುರಾಸೆಯಿಂದ 1ನೇ ಆರೋಪಿ ಹನುಮಂತರಾಜು ಬೆಂಗಳೂರು ಹತ್ತಿರ ಇರುವ ನವಯುಗ ಟೋಲ್ ಬಳಿ ನಡೆಸುತ್ತಿದ್ದ ಟೀ ಅಂಗಡಿಗೆ ಖಾಯಂ ಆಗಿ ಬರುತ್ತಿದ್ದ 2ನೇ ಆರೋಪಿ ಲಕ್ಷ್ಮೀಕಾಂತ, 3ನೇ ಆರೋಪಿ ನವೀನ್ ಕುಮಾರ್ ಹಾಗೂ 4ನೇ ಆರೋಪಿ ಎಂ.ಡಿ. ಜಿಲಾನ್ ಅವರು ಸೇರಿಕೊಂಡು ಒಳಸಂಚು ರೂಪಿಸಿದ್ದರು. ಅದರಂತೆ ಜೂನ್ 19 ರಂದು ರಾತ್ರಿ ಮಂಡ್ಯದಲ್ಲಿದ್ದ ಮೃತ ರಮೇಶನನ್ನು ನಿಧಿ ಇದೆ, ಪೂಜೆ ಮಾಡಬೇಕು ಎಂದು ಹೇಳಿದರು.

# ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮೊದಲ ಆದ್ಯತೆ

## ತೆರಕಣಾಂಬಿ ಕೃಷಿ ಉತ್ಪನ್ನ ಮಾರುಕಟ್ಟೆಯ ಸಿಸಿರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಅಧಿಕೃತವಾಗಿ ಚಾಲನೆ

• ಉದಯವಾಹಿನಿ , ಗುಂಡ್ಲುಪೇಟೆ

ಗುಂಡ್ಲುಪೇಟೆ ಮೂಲಸೌಕರ್ಯ ಸೇರಿದಂತೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗಿದೆ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಹೇಳಿದರು. ಗುರುವಾರ ತಾಲ್ಲೂಕಿನ ತೆರಕಣಾಂಬಿ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದ ಸಿಸಿರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಶಾಸಕನಾಗಿ ಆಯ್ಕೆಯಾದ ಬಳಿಕ ವಿವಿಧ ಯೋಜನೆಗಳನ್ನೊಳಗೊಂಡಂತೆ ಅನೇಕ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು ಗ್ರಾಮಾಂತರ ಪ್ರದೇಶಗಳಲ್ಲಿ ಭಾಗಶಃ ಕೆಲಸಗಳು ಪೂರ್ಣಗೊಂಡಿವೆ ಕೆಳಭಾಗದಲ್ಲಿ ಪ್ರಗತಿಯಲಿದ್ದು ಶೀಘ್ರದಲ್ಲೇ ಮುಕ್ತಾಯಗೊಳ್ಳಲಿವೆ ಎಂದು ತಿಳಿಸಿದರು. ತೆರಕಣಾಂಬಿ ಕೃಷಿ ಉತ್ಪನ್ನ ಮಾರುಕಟ್ಟೆಯ ಸಿಸಿರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಅಧಿಕೃತವಾಗಿ ಚಾಲನೆ ನೀಡಲಾಗಿದೆ, ಸ್ಥಳೀಯ ರೈತರು



ವ್ಯಾಪಾರಿಗಳ ಬಹುದಿನಗಳ ಬೇಡಿಕೆಯಂತೆ ಅಂದಾಜು ಒಂದೂವರೆ ಕೋಟಿ ವೆಚ್ಚ ಕಾಯ್ದಿರಿಸಲಾಗಿದೆ ಎಂದರು. ಮಾರುಕಟ್ಟೆ ಪ್ರದೇಶದಲ್ಲಿ ವ್ಯವಸ್ಥಿತವಾಗಿ ಸಿಸಿರಸ್ತೆ ಚರಂಡಿ ನಿರ್ಮಾಣ ಮಾಡಿದ್ದೆಯಾದಲ್ಲಿ ಮಳೆಗಾಲದ ಸಂಧರ್ಭದಲ್ಲಿನ ಅವಾಂತರಗಳಿಗೆ ಇತಿಶ್ರೀ ಹಾಡಬಹುದು ಎಂಬುದೇ ಪ್ರಮುಖ ಉದ್ದೇಶವಾಗಿದೆ **30 ವರ್ಷದ ಕನಸು ನನಸು :** ಹಲವು ವರ್ಷಗಳಿಂದ ರಸ್ತೆಯನ್ನೇ ಕಾಣದ ಮದ್ದೂರು ಗ್ರಾಮಕ್ಕೆ 25 ಲಕ್ಷ ವೆಚ್ಚದ ಸಿಸಿರಸ್ತೆ ಚರಂಡಿ ನಿರ್ಮಾಣ ಕಾಮಗಾರಿಗೂ ಸಹ ಶಾಸಕ ಗಣೇಶ್ ಪ್ರಸಾದ್ ಅಧಿಕೃತವಾಗಿ ಚಾಲನೆ ನೀಡಿದ್ದು ಸ್ಥಳೀಯರಲ್ಲಿ ಸಂತಸ ತಂದಿತು. ವರ್ಷಗಟ್ಟಲೇ ರಸ್ತೆ ವ್ಯವಸ್ಥೆಗಾಗಿ ಕಾಯುತ್ತಿದ್ದ ಗ್ರಾಮಸ್ಥರ ಬೇಡಿಕೆ ಈಡೇರಿಸಿದ ಆತ್ಮತೃಪ್ತಿ ಶಾಸಕರಿಗೆ ದಕ್ಕಿದರೆ ಒಂದೊಳ್ಳೆ ವಾತಾವರಣ ನಿರ್ಮಾಣ ಕೊನೆಗೂ ಕೈಗೂಡಿತ್ತಲ್ಲ ಎಂಬ ನಿರಾಳತೆ ಸ್ಥಳೀಯರಿಗೆ ಸಿಕ್ಕಿದೆ.

ಹಾಗೆಯೇ ದೊಡ್ಡತುಪ್ಪೂರು ಗ್ರಾಮದಲ್ಲಿನ ಮಹದೇಶ್ವರ ಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಅಗತ್ಯ ಸಹಕಾರ ನೀಡುವ ಭರವಸೆ ನೀಡಿದರು.

### ಗುಣಮಟ್ಟದ ಕಾಮಗಾರಿಗೆ ಸೂಚನೆ

ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿದು ಹೋಗಲು ಸುಸಜ್ಜಿತ ಮಾರ್ಗ, ಮಾರುಕಟ್ಟೆ ಪ್ರಾಂಗಣದಲ್ಲಿ ನೈರ್ಮಲ್ಯ ಮತ್ತು ಉತ್ತಮ ವಾತಾವರಣ ನಿರ್ಮಾಣ ಮಾಡಲು ಗುತ್ತಿಗೆದಾರರು ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸಬೇಕು ಎಂದು ತಾಕೀತು ಮಾಡಿದರು.

## ಮಿನಿ ನ್ಯೂಸ್

### ರಕ್ಷಣಾ ಪಡೆ ಸೇರುವ ಅಕಾಂಕ್ಷಿಗಳು ಕೇವಲ ಬುದ್ದಿವಂತಿಕೆ ಅಷ್ಟೇ ಅಲ್ಲದೆ ಪರಿಶ್ರಮವನ್ನು ಮೈಗೂಡಿಸಿಕೊಳ್ಳಬೇಕು: ಡಿ.ಸತೀಶ್

• ಉದಯವಾಹಿನಿ, ಮೈಸೂರು

ರಕ್ಷಣಾ ಪಡೆ ಸೇರುವ ಅಕಾಂಕ್ಷಿಗಳು ಕೇವಲ ಬುದ್ದಿವಂತಿಕೆ ಅಷ್ಟೇ ಅಲ್ಲದೆ ಪರಿಶ್ರಮ ಮೈಗೂಡಿಸಿಕೊಂಡಲ್ಲಿ ಯಶಸ್ಸು ಪಡೆಯಲು ಸಾಧ್ಯ ಎಂದು ಮೇಜರ್ ಡಿ. ಸತೀಶ್ ಅವರು ಹೇಳಿದರು. ಮೈಸೂರು ನಗರ ಕೇಂದ್ರ ಗ್ರಂಥಾಲಯದ ಅಧೀನ ಪೀಪಲ್ಸ್ ಪಾರ್ಕ್ ಗ್ರಂಥಾಲಯದ ವತಿಯಿಂದ ಏರ್ಪಡಿಸಲಾಗಿದ್ದ ರಕ್ಷಣಾ ಪಡೆಗಳಲ್ಲಿ ಉದ್ಯೋಗಾವಕಾಶ ಕುರಿತ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಪ್ರಾಮಾಣಿಕತೆ, ದಕ್ಷತೆ ಹಾಗೂ ಪರಿಶ್ರಮದಿಂದ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಪಡೆಯಬಹುದು. ಭಾರತೀಯ ರಕ್ಷಣ ಪಡೆಗೆ ಸೇರುವ ವಿವಿಧ ಅವಕಾಶಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚೆ ನಡೆಸಿದ ಅವರು, ಕೇಂದ್ರ ಲೋಕ ಸೇವಾ ಆಯೋಗ ನಡೆಸುವ ಪರೀಕ್ಷೆ ಹಾಗೂ ನಂತರ ನಡೆಯುವ ಎಸ್.ಎಸ್.ಬಿ ಪರೀಕ್ಷೆಗಳು ವಿಶ್ವದಲ್ಲೇ ಅತ್ಯಂತ ಕಠಿಣ ಪರೀಕ್ಷೆಗಳಲ್ಲಿ ಒಂದಾಗಿವೆ ಎಂದು ಹೇಳಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಕೊಡಗು ಜಿಲ್ಲೆ ಕೂರ್ಗ್ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರಾದ ಪಿ. ಪಾವನಿ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಉತ್ತಮ ಸಂವಹನ, ಕೌಶಲ್ಯ ಮತ್ತು ಪ್ರಾಮಾಣಿಕ ಪರೀಕ್ಷಾ ಸಿದ್ಧತೆ ಯಶಸ್ಸು ತಂದು ಕೊಡಬಹುದೆಂದು ಹೇಳಿದರು.

### ವಿದ್ಯುತ್ ಖಾಸಗೀಕರಣ ವಿರೋಧಿಸಿ ಬೃಹತ್ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೋಲಾರ


ಕರ್ನಾಟಕ ರಾಜ್ಯದಲ್ಲಿ ಕೆಇಆರ್‌ಸಿ ವತಿಯಿಂದ ವಿದ್ಯುತ್ ವಿತರಣಾ ಪರವಾನಗಿಯನ್ನು ಟಾಟಾ ಪವರ್ ಕಂಪನಿಗೆ ನೀಡುವುದನ್ನು ಮತ್ತು ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವುದನ್ನು ವಿರೋಧಿಸಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ವೇಮಗಲ್, ನರಸಾಪುರ ಮತ್ತು ಕ್ಯಾಲನೂರು ಭಾಗದ ಹೋರಾಟಗಾರರು ಹಾಗೂ ನೌಕರರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಬಯಲು ರಂಗಮಂದಿರದಿಂದ ಪ್ರಾರಂಭವಾದ ಪ್ರತಿಭಟನಾ ಜಾಥಾ ವೇಮಗಲ್ ಪೊಲೀಸ್ ಠಾಣೆಯ ಮುಂಭಾಗದ ರಸ್ತೆಯ ಮೂಲಕ ರಾಮಶೆಟ್ಟಿ ಸರ್ಕಲ್‌ನಲ್ಲಿ ಕೆಲಕಾಲ ರಸ್ತೆ ತಡೆ ನಡೆಸಿತು. ನಂತರ ಪಟ್ಟಣ ಪಂಚಾಯಿತಿ ಕಚೇರಿ ಮುಂದೆ ಜಮಾಯಿಸಿದ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರೊಫೆಸರ್ ನಂಜುಂಡಸ್ವಾಮಿ ಸ್ಥಾಪಿತ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಯುಗ ಘಟಕದ ಅಧ್ಯಕ್ಷರಾದ ಕಲ್ವಮಂಜಲಿ ರಾಮುಶಿವಣ್ಣ, ವಿದ್ಯುತ್ ಕ್ಷೇತ್ರ ಖಾಸಗೀಕರಣವಾದರೆ ರೈತರಿಗೆ ನೀಡುತ್ತಿರುವ ಉಚಿತ ವಿದ್ಯುತ್ ಸಂಪೂರ್ಣ ರದ್ದಾಗಲಿದೆ. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಕಡ್ಡಾಯವಾಗಿ ಮೀಟರ್ ಅಳವಡಿಸಲಾಗುತ್ತದೆ. ಬಡವರಿಗೆ ಆಸರೆಯಾಗಿರುವ ಗೃಹಜ್ಯೋತಿ, ಭಾಗ್ಯಜ್ಯೋತಿ, ಕುಟೀರಜ್ಯೋತಿ ಹಾಗೂ ಗಂಗಾ ಕಲ್ಯಾಣದಂತಹ ಪ್ರಮುಖ ಯೋಜನೆಗಳು ರದ್ದಾಗಲಿವೆ'' ಎಂದು ಎಚ್ಚರಿಸಿದರು.

### ಗಾಂಜಾ ಮಾರಾಟಗಾರ ಎಸ್ಕೇಪ್ : ಗಾಂಜಾ ಪಡೆದ ತಮಿಳುನಾಡು ಮೂಲದ ಯುವಕ ಅರೆಸ್ಟ್





ಪತ್ರಿಕಾ ಪ್ರಕಟಣೆ

• ಉದಯವಾಹಿನಿ, ಗುಂಡ್ಲುಪೇಟೆ

ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿ ಎಸ್ಕೇಪ್ ಆಗಿದ್ದು ಗಾಂಜಾ ಪಡೆಯುತ್ತಿದ್ದ ತಮಿಳುನಾಡು ಮೂಲದ ಯುವಕನೋರ್ವನನ್ನ ಗುಂಡ್ಲುಪೇಟೆ ಪೊಲೀಸರು ಬಂಧಿಸಿರುವ ಘಟನೆ ನಡೆದಿದೆ.

ಪಟ್ಟಣದ ಜಾಕೀರ್ ಹುಸೇನ್ ನಗರದ ಅಂಗನವಾಡಿ ಕೇಂದ್ರದ ಬಳಿ ಗಾಂಜಾ ಮಾರಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪಿ ಎಸ್ ಐ ನರೇಶ್ ಕುಮಾರ್ ಮತ್ತು ತಂಡ ಗಾಂಜಾ ಖರೀದಿಸಿದ್ದ ತಮಿಳುನಾಡಿನ ಊಟಿಯ ನಡುವಟ್ಟಂ ಗ್ರಾಮದ ವಿಘ್ನೇಶ್ ಬಿನ್ ರಾಜನ್ ( 19) ಎಂಬ ಆರೋಪಿಯನ್ನ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಆದರೆ ಮಾರಾಟ ಮಾಡಿದ ಆರೋಪಿ ಜಾಕೀರ್ ಹುಸೇನ್ ನಗರದ ಮುಬಾರಕ್ ಎಸ್ಕೇಪ್ ಆಗಿದ್ದಾನೆ. ಸದ್ಯ ಬಂಧಿತನ ಬಳಿಯಿದ್ದ ಐದು ಸಾವಿರ ರೂ ಮೌಲ್ಯದ 100 ಗ್ರಾಂ ಒಣಗಾಂಜಾವನ್ನ ವಶಕ್ಕೆ ಪಡೆದು ಪ್ರಕರಣ ದಾಖಲಿಸಿರುವ ಪಟ್ಟಣ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

### ಮನೆಗೆ ರಸ್ತೆ, ಚರಂಡಿ ವ್ಯವಸ್ಥೆ ಕಲ್ಪಿಸಲು ಗ್ರಾಮಸ್ಥರ ಆಗ್ರಹ

• ಉದಯವಾಹಿನಿ, ಕೋಲಾರ

25 -ನಕ್ಷೆಯಲ್ಲಿರುವಂತೆ ಕಾನೂನುಬದ್ಧವಾಗಿ ನಮ್ಮ ಸ್ವಂತ ಮನೆಗೆ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಕಲ್ಪಿಸುವಂತೆ ತಾಲ್ಲೂಕಿನ ಚೌಡದೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೊಡ್ಡವಲ್ಲಬಿ ಗ್ರಾಮದ ಎಂ.ಸೋಮಶೇಖರ್ ಆಗ್ರಹಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮನೆ ಬಳಿ ಮೂರು ರಸ್ತೆಗಳಿದ್ದು, ಈ ಪೈಕಿ ಒಂದು ರಸ್ತೆ ಒತ್ತುವರಿ ಆಗಿದೆ. ಇನ್ನು ಎರಡು ರಸ್ತೆಗೆ ನಕಲಿ ದಾಖಲೆ ಸೃಷ್ಟಿಸಿ ಅಕ್ರಮವಾಗಿ ಖಾತೆ ಮಾಡಿಕೊಡಲಾಗಿದೆ. ನಮ್ಮ ಮನೆಗೆ ಹೋಗಿ ಬರಲು ಜಾಗವಿಲ್ಲದಂತಾಗಿದೆ. ಅಲ್ಲದೇ, ನಮ್ಮ ಮನೆ ಬಳಿಗೆ ಸರಿಯಾಗಿ ಕಾಲುವೆ ಅಂತ್ಯಗೊಂಡಿದ್ದು, ಮಳೆ ಬಂದಾಗ ನೀರು ಮನೆಯೊಳಗೆ ನುಗ್ಗುತ್ತದೆ ಎಂದರು.

ಈ ಸಂಬಂಧ ನಾನು ನ್ಯಾಯ ಕೋರಿ ಇಲ್ಲಿಗೆ ಬಂದಿದ್ದೇನೆ. ಯಾರ ವಿರುದ್ಧವೂ ನನಗೆ ವೈಯಕ್ತಿಕ ದ್ವೇಷ ಇಲ್ಲ. ಆದರೆ, ಪಿಡಿಒಗಳು ಸರ್ಕಾರಿ ದಾಖಲೆ ತಿದ್ದಿ ಪ್ರಭಾವಿಗಳಿಗೆ ಸಹಕಾರ ಮಾಡಿಕೊಟ್ಟಿದ್ದಾರೆ. ಗ್ರಾಮದ ರಸ್ತೆ ಅಕ್ರಮಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ ಎಂದು ಆರೋಪಿಸಿದರು. ರಸ್ತೆ ಹಾಗೂ ಚರಂಡಿ ಕಲ್ಪಿಸಿಕೊಡುವಂತೆ ನಾನು ಹಲವಾರು ಬಾರಿ ಮನವಿ ಸಲ್ಲಿಸಿದ್ದೇನೆ. ಈ ಸಂಬಂದ ಮೇಲಧಿಕಾರಿಗಳ ಗಮನಕ್ಕೂ ತಂದಿದ್ದೇನೆ, ಅಕ್ರಮಗಳ ವಿರುದ್ಧ ದನಿ ಎತ್ತಿದ್ದೇನೆ. ಲೋಕಾಯುಕ್ತಕ್ಕೂ ದೂರು ಸಲ್ಲಿಸಿದ್ದೇನೆ. ಆದಾಗ್ಯೂ ಈವರೆಗೆ ಕ್ರಮವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.ಸರ್ಕಾರಿ ರಸ್ತೆಯನ್ನು ಬೇರೆಯವರಿಗೆ ಬರೆದುಕೊಡಲು ಅಧಿಕಾರ ಕೊಟ್ಟಿದ್ದು ಯಾರು? ಇದರಿಂದ ಬೇಸತ್ತು ತಂದೆ ಮುನೇಗೌಡ ಅವರು ದಯಾಮರಣಕ್ಕೆ ಅನುಮತಿ ಕೋರಿ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದಾರೆ. ಅದಕ್ಕೂ ಯಾವುದೇ ಪ್ರತಿಕ್ರಿಯೆ ಇಲ್ಲವಾಗಿದೆ ಎಂದರು.

ಅಂತರಾಳದಿಂದ...
EDITORIAL

# ವಿದೇಶಿ ದೇಣಿಗೆ ನಿಯಮ ತಿದ್ದುಪಡಿ ಎನ್‌ಜಿಒಗಳ ಮೇಲಿನ ಹಿಡಿತ ಬಿಗಿ



ವಿದೇಶಗಳಿಂದ ದೇಣಿಗೆ ಪಡೆಯುತ್ತಿರುವ ಸರಕಾರೇತರ ಸಂಸ್ಥೆ (ಎನ್‌ಜಿಒ)ಗಳ ಮೇಲೆ ಕೇಂದ್ರ ಸರಕಾರ ತನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿದೆ. ಕೆಲವು ಎನ್‌ಜಿಒಗಳು ವಿವಿಧ ಕಾರಣಗಳನ್ನು ಮುಂದಿಟ್ಟು ವಿದೇಶಗಳಿಂದ ಪಡೆದುಕೊಂಡ ದೇಣಿಗೆಯನ್ನು ಧಾರ್ಮಿಕ ಮತಾಂತರ, ದೇಶದ್ರೋಹಿ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವ ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಗೃಹ ಸಚಿವಾಲಯ ವಿದೇಶಿ ದೇಣಿಗೆ(ನಿಯಂತ್ರಣ) ತಿದ್ದುಪಡಿ ನಿಯಮಗಳು 2026 ಅನ್ನು ಜಾರಿಗೊಳಿಸಿದೆ. ಈ ಮೂಲಕ ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಎನ್‌ಜಿಒಗಳ ಚಟುವಟಿಕೆಗಳು ಮತ್ತು ಅವುಗಳಿಗೆ ಹರಿದುಬರುತ್ತಿರುವ ವಿದೇಶಿ ದೇಣಿಗೆಗಳ ಮೇಲೆ ನಿಗಾ ಇರಿಸಲು ಮುಂದಾಗಿದೆ.

ಇದೇ ವೇಳೆ ಯಾವುದೇ ಕಾರಣಕ್ಕೂ ಧಾರ್ಮಿಕ ಮತಾಂತರ ಕಾರ್ಯಗಳಿಗೆ ವಿದೇಶಿ ದೇಣಿಗೆಯನ್ನು ಬಳಸುವಂತಿಲ್ಲ ಎಂದು ಪರಿಷ್ಕೃತ ನಿಯಮಾವಳಿಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುವುದು ಗಮನಾರ್ಹ. ಧಾರ್ಮಿಕ ಮತಾಂತರಕ್ಕಾಗಿಯೇ ವಿದೇಶಿ ಕಂಪೆನಿಗಳು ದೇಶದ ಎನ್‌ಜಿಒಗಳಿಗೆ ದೇಣಿಗೆ ನೀಡುತ್ತಿರುವಂತಹ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ತಿದ್ದುಪಡಿ ಮಾಡಲಾದ ನಿಯಮಾವಳಿಗಳಲ್ಲಿಯೇ ಇದನ್ನು ಸ್ಪಷ್ಟವಾಗಿ ಉಲ್ಲೇಖಿಸಿ ಇಂತಹ ಅಕ್ರಮಗಳಿಗೆ ಕಾನೂನಿನ ಕಡಿವಾಣ ಹಾಕಿದೆ. ವಿದೇಶಿ ದೇಣಿಗೆ ಪಡೆಯುವ ಎನ್‌ಜಿಒಗಳು ಯಾವ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ತನ್ನ ಕಾರ್ಯಚಟುವಟಿಕೆ ನಡೆಸಲಿವೆ ಮತ್ತು ಯಾವ ಉದ್ದೇಶಕ್ಕಾಗಿ ಬಳಸಲಾಗುವುದು ಎಂಬುದನ್ನು ತಿಳಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಈಗಾಗಲೇ ಕಾರ್ಯನಿರತವಾಗಿರುವ ಎನ್‌ಜಿಒಗಳು ತಮ್ಮ ಪರವಾನಿಗೆಯ ನವೀಕರಣದ ವೇಳೆ ಹಾಗೂ ಹೊಸದಾಗಿ ಆರಂಭವಾಗಲಿರುವ ಎನ್‌ಜಿಒಗಳು ಕೂಡ ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳ ವಿವರಗಳನ್ನು ನೀಡಬೇಕು ಮತ್ತು ವಾರ್ಷಿಕ ವರದಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಅಷ್ಟು ಮಾತ್ರವಲ್ಲದೆ ವಿದೇಶಿ ದೇಣಿಗೆ ಪಡೆದ ಎನ್‌ಜಿಒಗಳು 2 ವರ್ಷಗಳಲ್ಲಿ ಕನಿಷ್ಠ 10 ಲಕ್ಷ ರೂ.ಗಳನ್ನು ನಿಗದಿತ ಉದ್ದೇಶದ ಕಾರ್ಯಚಟುವಟಿಕೆಗೆ ವ್ಯಯಿಸದೆ ಇದ್ದಲ್ಲಿ ಆ ಎನ್‌ಜಿಒಗಳ ಪರವಾನಿಗೆಯನ್ನೇ ರದ್ದುಗೊಳಿಸುವ ನಿಯಮವನ್ನು ತಿದ್ದುಪಡಿ ಒಳಗೊಂಡಿದೆ.

ತನ್ಮೂಲಕ ಎನ್‌ಜಿಒಗಳ ಮೇಲೆ ನೇರ ನಿಯಂತ್ರಣ ಸಾಧಿಸಲು ಮುಂದಾಗಿದೆ.

ವಿದೇಶಿ ದೇಣಿಗೆ (ನಿಯಂತ್ರಣ)ಯನ್ನು ಪಡೆಯುತ್ತಿರುವ ಎನ್‌ಜಿಒಗಳು ತಮ್ಮ ನಿಗದಿತ ಉದ್ದೇಶಗಳನ್ನು ಹೊರತುಪಡಿಸಿ ಅನ್ಯ ಕಾರ್ಯಗಳಿಗೆ ಬಳಸುವುದು, ದೇಶವಿರೋಧಿ ಮತ್ತು ಕಾನೂನುಬಾಹಿರ ಚಟುವಟಿಕೆಗಳಿಗೆ ಈ ಹಣವನ್ನು ದುರುಪಯೋಗಪಡಿಸಿಕೊಳ್ಳುವುದು, ದೇಣಿಗೆಯ ನೆಪದಲ್ಲಿ ತೆರಿಗೆ ವಿನಾಯಿತಿ ಪಡೆದುಕೊಳ್ಳುವುದು ಮತ್ತಿತರ ಎಲ್ಲಾ ಅಕ್ರಮಗಳಿಗೆ ಕಡಿವಾಣ ಹಾಕಲು ಈ ತಿದ್ದುಪಡಿ ನಿಯಮಾವಳಿ ನೆರವಾಗಲಿದೆ. ಸಾಮಾಜಿಕ ಸೇವೆಯ ನೆಪದಲ್ಲಿ ದೇಶದ ಹಿತ ಮತ್ತು ಸಾಮಾಜಿಕ ಶಾಂತಿ, ಕೋಮು ಸೌಹಾರ್ದಕ್ಕೆ ಧಕ್ಕೆ ತರುವಂತಹ ಕಾರ್ಯಗಳಲ್ಲಿ ನಿರತವಾಗಿರುವ ಎನ್‌ಜಿಒಗಳ ಮೇಲೆ ಹದ್ದುಗಣ್ಣಿರಿಸಲು ಪರಿಷ್ಕೃತ ನಿಯಮಾವಳಿಗಳು ಗೃಹ ಸಚಿವಾಲಯಕ್ಕೆ ನೆರವಾಗಲಿದೆ.

## ಮೂರು ಬಾರಿ ತೃಣಮೂಲ ಕಾಂಗ್ರೆಸ್‌ಗೆ ಅವಕಾಶ

ಪರಿಷ್ಕೃತ ನಿಯಮಾವಳಿಗಳಂತೆ ಎನ್‌ಜಿಒಗಳಿಗೆ ದೇಶದಲ್ಲಿನ ವಲಸೆ ಕಾರ್ಮಿಕರು, ನಿರಾಶ್ರಿತರು, ಅಲೆಮಾರಿ, ಬುಡಕಟ್ಟು ಜನಾಂಗದವರ ಮಕ್ಕಳ ಶಿಕ್ಷಣ ಮತ್ತು ಅಂತಹ ಶಾಲೆಗಳಲ್ಲಿ ಮೌಲ್ಯಾಧಾರಿತ ಮತ್ತು ನೈತಿಕ ಶಿಕ್ಷಣ ನೀಡುವ ನಿಟ್ಟಿನಲ್ಲಿ ವಿದೇಶಗಳಿಂದ ದೇಣಿಗೆಯನ್ನು ಸಂಗ್ರಹಿಸಲು ಅವಕಾಶ ನೀಡಲಾಗಿದೆ.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಆರ್‌ಎ)ಯಡಿ ವಿದೇಶಗಳಿಂದ ದೇಣಿಗೆ ಪಡೆಯಲಿಚ್ಛಿಸುವ ದೇಶದಲ್ಲಿನ ಪ್ರತಿಯೊಂದು ಎನ್‌ಜಿಒ ಗೃಹ ಸಚಿವಾಲಯದಲ್ಲಿ ನೋಂದಣಿ ಅಥವಾ ಪೂರ್ವಾನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಹೀಗೆ ಪಡೆದುಕೊಂಡ ವಿದೇಶಿ ದೇಣಿಗೆ ಮೊತ್ತವನ್ನು ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರಕ್ಕೆ ಸಂಬಂಧಿಸಿದ 105 ಕಾರ್ಯಚಟುವಟಿಕೆಗಳಿಗಷ್ಟೇ ವಿನಿಯೋಗಿಸಲು ಅನುಮತಿ ನೀಡಲಾಗಿದೆ.

# ರಾಮಾಯಣ



ಬ್ರಹ್ಮಾಸ್ತ್ರ ಸ್ತವನ್ನು ಮನ್ನಣೆ ಮಾಡಿದ ಹನುಮಂತನು ಸಭೆಗೆ ಬಂದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಅವನು ನನ್ನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ ಆದರೆ ಆ ಅಸ್ತ್ರ ನನ್ನ ಬಳಿ ಬರಲು ಹಿಂದೆಗೆದು ನಿಂತುಬಿಟ್ಟಿತು ಹೆಮಿಲಜನೇ ನನ್ನ ಬಳಿ ಬಂದು ಕಂಡ ಮೇಲೆ ಖಯಷಿಯ ವಾಕ್ಯವನ್ನು ಸರಿಸುತ್ತ ಅವನ ಕೋರಿಕೆಯನ್ನು ಮನ್ನಿಸಿದಾಗ ಅಸ್ತವು ನನ್ನನ್ನು ಬಂಧಿಸಿತು. ತಕ್ಷಣವೇ ರಕ್ಕಸ ಸೈನ್ಯವೆಲ್ಲ ನನ್ನನ್ನು ಸುತ್ತುಗಟ್ಟಿ ದಶಕಂಠನ ಬಳಿಗೆ ಕರೆದೊಯ್ದರು. ನಾನು ಅವನ ಮುಂದೆ ಬಂದು ವಿವರವನ್ನೂ ಮರೆಮಾಚದೆ ಇದ್ದ ಸಂಗತಿಯನ್ನೆಲ್ಲ ಹೇಳಿದೆ ಸೂರ್ಯವಂಶದ ಸಿರಿ, ಸುಗೀವನ ಪರಿ, ಧರಣಿಜಾತೆಯ ಸುಳಿವನ್ನು ತಿಳಿಯಲು ನನ್ನನ್ನು ಕಳಿಸಿದುದು ಎಲ್ಲವನ್ನೂ ಹೇಳಿದೆ. ಎಲ್ಲವನ್ನೂ ಕೇಳಿದ ರಾವಣನು ಕ್ರೋಧೋನತ್ತನಾಗಿ ನನ್ನನ್ನು ಕೊಲ್ಲಿಸುವಂತೆ ಸೇವಕರಿಗೆ ಆಜ್ಞೆಯಿತ್ತ. ಆದರೆ ಮಹಾ ಬುದ್ಧಿವಂತನೂ ಧರ್ಮಿಷ್ಟನೂ ಆದ ವಿಭೀಷಣನೆಂಬ ರಾಜನ ತಮ್ಮನು ಬುದ್ಧಿ ಹೇಳಲು, ನನ್ನ ಬಾಲಕ್ಕೆ ಬೆಂಕಿಯಿಡಲು ಆಜ್ಞಾಪಿಸಿದ. ಆದರೆ ನಾನು ಬೆಂಕಿಯನ್ನು ಇಡೀ ನಗರಕ್ಕೆ ಹಬ್ಬಿಸಿ, ಜಗಳಕ್ಕೆ ಬಂದವರನ್ನೆಲ್ಲ ತರಿದು ಹಾಕಿ, ಮತ್ತೆ ಜಾನಕಿಯನ್ನು ಕಂಡು ನಮಸ್ಕರಿಸಿ, ಆಕೆಯ ಅಪ್ಪಣೆ ಪಡೆದು ಬೀಳ್ಕೊಂಡು ಕಡಲನ್ನು ದಾಟಿ ವಾಪಸು ಬಂದೆ ಎಂದು ಸಂಕ್ಷೇಪವಾಗಿ ನಡೆದುದೆಲ್ಲವನ್ನೂ ಹೇಳಿದ. ಯಾವುದನ್ನೂ ಬಚ್ಚಿಟ್ಟುಕೊಳ್ಳದೆ ಎಲ್ಲವನ್ನೂ ಹೇಳಿದ್ದೇನೆ, ಮುಂದಿನ ಕಾರ್ಯವು ನಿಮ್ಮ ಚಿತ್ತಕ್ಕೆ ಬಿಟ್ಟದ್ದು, ನಿಮಗೆ ತಿಳಿಯದ್ದು ಏನಿದೆ ಎಂದು ಮಾತನ್ನು ಕೊನೆಗೊಳಿಸಿದಾಗ, ಎಲ್ಲಾ ಕಪಿವೀರರೂ ಹರುಷದಲ್ಲಿ ಓಲಾಡಿದರು. ಅಂಗದನು ಸಂತಸದಿಂದ ಆಂಜನೇಯನನ್ನು ಪ್ರೀತಿಯಿಂದ ಅಪ್ಪಿಕೊಂಡು ಹೊಗಳಿದ. ''ಕಾರ್ಯವನ್ನು ಬುದ್ಧಿವಂತಿಕೆಯಿಂದಲೂ ಅತಿಶಯ ಶ್ರದ್ಧೆಯಿಂದಲೂ ಮಾಡಿ ಮುಗಿಸಿದ್ದೇನೆ ಮುಂದೆ ರಾಜನ ಆಜ್ಞೆಯನ್ನು ನೆರವೇರಿಸಲು ನೀಲ ನಳ ಮೊದಲಾದ ಪ್ಲವಗಸಮೂಹವೆಲ್ಲ ಯುವರಾಜನೊಡನೆ ಸೇರಿ ಯುದ್ಧಮಾಡಲು ಸಿದ್ಧರಾಗಿದ್ದು, ಅರೆನಿಮಿಷದಲ್ಲಿ ಅಲ್ಲಬುದ್ಧಿಯ ದಶಾಸ್ಯನನ್ನು ಮಟ್ಟಹಾಕುತ್ತಾರೆ ಎಂದು ಹೇಳಿ ಪವಮಾನತನಯನು ಸುಮ್ಮನಾದ.

ಎಲ್ಲಾ ಕಪಿಗಳು ಬಂದು ಹನುಮನ ಕೈಗೆ ಮುತ್ತಿಟ್ಟು, ಬಾಲವನ್ನು ಚುಂಬಿಸಿ ಅಪ್ಪಿಕೊಂಡು, ಕೈಮುಗಿದು ಸ್ತುತಿಸಿ ತಮ್ಮ ಸಂತೋಷ-ಅಭಿಮಾನಗಳನ್ನು ತೋರಿದರು ಮರುತಸುತನೇ, ಶ್ರೀರಾಮ, ಲಕ್ಷ್ಮಣ, ಸುಗ್ರೀವ. ಅಂಗದ, ಕಪಿಕುಲವು ನಿನ್ನಿಂದಾಗಿ ಉಳಿಯುವಂತಾಯಿತು ಎಂದು ಕೊಂಡಾಡಿದರು. ಶ್ರೀರಾಮನ ಸ್ಮರಣೆಯಿಂದೆಲ್ಲ ಇಷ್ಟೆಲ್ಲ ಸಿದ್ಧಿಸಿದೆ, ನಮ್ಮ ಮಧ್ಯೆ ಅವತಾರ ಮಾಡಿ ನಮ್ಮನ್ನು ಸಲಹುತ್ತಿರುವವನು ಜೊತೆಯಲ್ಲಿಯೇ ಇರಬೇಕಾದರೆ ಅಖಿಲಾರ್ಥಸಿದ್ಧಿಯಾಗುವುದರಲ್ಲಿ ಏನಾಶ್ಚರ್ಯ ಎಂದು ಸ್ತುತಿಸಿದರು. ಆಗ ಅಂಗದನು ಹನುಮಂತನೇ, ಶಾಖಾಮೃಗದ ಕುಲದ ಏಳಿಗೆಗೆ ಬದ್ಧ ಕಂಕಣ ಎಂಬ ಬಿರುದಿಗೆ ನೀನು ಪಾತ್ರನಾಗಿ, ನಮ್ಮೆಲ್ಲರನ್ನೂ ಉದ್ಧರಿಸಿದ್ದೀಯೆ. ಮುಂದೆ ಆಗಬೇಕಾದ ಕಾರ್ಯಗಳ ಬಗ್ಗೆ ಆಲೋಚಿಸಲು ನಾವು ಆದಷ್ಟು ಬೇಗ ಹೋಗಿ ರಘುನಂದನನನ್ನು ಕಾಣುವುದು ಉಚಿತವಾದುದು ಎಂದು ಹೇಳಲು ಎಲ್ಲರೂ ಆ ಮಾತಿಗೆ ಒಪ್ಪಿಗೆಯಿತ್ತರು. ಶತ್ರುಗಳ ನಡುವೆ ಸಿಕ್ಕಿಕೊಂಡಿರುವ ರಾಮನರಸಿಯು ಸಂಕಟಪಡುತ್ತಿರುವಳೆಂಬ ಚಿಂತೆಯಿಂದ ರಘುನಾಥನು ಕೂಡಿದ್ದಾನೆ ರಾಮಲಕ್ಷ್ಮಣರನ್ನು ನೋಡುತ್ತ ಸೂರ್ಯಸುತನು ತವಕಕ್ಕೊಳಗಾಗಿದ್ದಾನೆ. ಆದ್ದರಿಂದ ನಾವು ಬೇಗ ಕಿಷ್ಕಿಂಧೆಗೆ ಮರಳಿ ಅವರನ್ನು ಸಂತಸಗೊಳಿಸಬೇಕು ಎಂದು ಅಂಗದನು ಹೇಳಲು ಎಲ್ಲರೂ ಉತ್ಸುಕರಾದರು. ಆಗ ಜಾಂಬವಂತನು ಅಂಗದನನ್ನು ಕುರಿತು, ಮತಿವಂತ ಯುವರಾಜನೇ, ನಿನ್ನ ಮಾತಿನಿಂದ ನಮಗೆ ತುಂಬ ಸಂತೋಷವಾಗಿದೆ. ಬೇಗ ಹೋಗಿ ಮಹಾರಾಜನ ಅಡಿದಾವರೆಗಳನ್ನು ಕಾಣಬೇಕು ಎಂದು ಬೆಂಬಲಿಸಲು ಎಲ್ಲರೂ ಆಕಾಶಮಾರ್ಗದಲ್ಲಿ ಸಾಗುತ್ತಿರಲು ಎಲ್ಲರನ್ನು ಅನುಸರಿಸಿ ಪವಮಾನನಂದನನು ಹೋದ. ಕಪಿವೀರರೆಲ್ಲರೂ ವಾಯುಪಥವನ್ನು ಹಿಡಿದು ಬರಲು ಸಂಜೆಯಾಯಿತು ಬರಬರುತ್ತ ಕತ್ತಲೆ ಆವರಿಸಿತು. ಅವರಾಗ ಹಣ್ಣುಹೂಗಳಿಂದ ತುಂಬಿ ತೊನೆಯುವ ಮರಗಳಿದ್ದ ಉದ್ಯಾನವೊಂದನ್ನು ಕಂಡರು ಕಪಿನಾಯಕರು ಭೂಮಿಗಿಳಿದು ವನವನ್ನು ನೋಡುವ ಉತ್ಸಾಹ ತಾಳಿದರು. ಪರಿಮಳಭರಿತ ತಂಗಾಳಿ, ಗಿಳಿಕೋಗಿಲೆಗಳ ಕೂಜನ, ರುಚಿಕರವಾದ ಹಣ್ಣುಕಾಯಿಗಳ ತೌರೆನಿಸಿ, ಭ್ರಮರಾಳಿಯ ನೆಲೆಯೆನ್ನಿಸಿ, ಸದಾಕಾಲವೂ ನೆರಳನ್ನೀಯುತ್ತ ದಾರಿಹೋಕರಿಗೆ ಶ್ರಮನಿವಾರಕವಾಗಿ ವಸಂತನ ಆಡುಂಬೊಲದಂತೆ ಆ ಮಧುವನವು ಕಾಣಿಸಿತು.

ಇಂತಹ ಲೋಕಾನಂದಕರವೂ ದೇವತಾನಿಕರದ ಮನೋರಥವನ್ನು ನೆರವೇರಿಸುವಂಥದೂ ಆದ ಆ ಮಹೋದ್ಯಾನಕ್ಕೆ ಬಂದು ಎಲ್ಲರೂ ಭಕ್ತವತ್ಸಲನಾದ ರಾಮಪುರದರಸನ ಪಾದಗಳನ್ನು ಸುಕುಮಾರರಚನೆಗಳಿಂದ ಸ್ತುತಿಸುತ್ತ ಮರಗಳ ಅಡಿಯಲ್ಲಿ ವಿಶ್ರಮಿಸಿಕೊಂಡರು.

ಮುಂದುವರೆಯುವುದು

# ವಿದ್ಯಾರ್ಥಿ ವಿಜಯ



ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

4

## ಯಶಸ್ಸಿನ ಕೀಲಿ : ಆದ್ಯತೆಗಳ ನಿರ್ವಹಣೆ

ವಿದ್ಯಾರ್ಥಿಯ ಜೀವನದಲ್ಲಿ ವಿಜಯ ಸಾಧಿಸಲು ಆದ್ಯತೆಗಳ ಸರಿಯಾದ ನಿರ್ವಹಣೆ ಅತ್ಯಂತ ಅವಶ್ಯಕವಾಗಿದೆ. ಪ್ರತಿದಿನ ನಾವು ಅನೇಕ ಕೆಲಸಗಳನ್ನು ಎದುರಿಸುತ್ತೇವೆ. ಆದರೆ ಯಾವುದು ಮುಖ್ಯ, ಯಾವುದು ತುರ್ತು ಎಂಬುದನ್ನು ಅರಿತುಕೊಂಡಾಗ ಮಾತ್ರ ಸಮಯವನ್ನು ಸರಿಯಾಗಿ ಬಳಸಬಹುದು. ಆದ್ಯತೆಗಳನ್ನು ಸರಿಯಾಗಿ ಗುರುತಿಸುವುದು ಯಶಸ್ಸಿನ ಮೊದಲ ಹೆಜ್ಜೆಯಾಗಿದೆ.

ಆದ್ಯತೆಗಳನ್ನು ಸರಿಯಾಗಿ ನಿರ್ವಹಿಸುವ ವಿದ್ಯಾರ್ಥಿ ತನ್ನ ಸಮಯವನ್ನು ವ್ಯರ್ಥ ಮಾಡದೆ ಫಲಪ್ರದವಾಗಿ ಬಳಸುತ್ತಾನೆ. ಅವನು ಗುರಿಯತ್ತ ಕ್ರಮಬದ್ಧವಾಗಿ ಸಾಗುತ್ತಾನೆ ಮತ್ತು ಒತ್ತಡದಿಂದ ದೂರವಿರುತ್ತಾನೆ.

ಇದರಿಂದ ಆತ್ಮವಿಶ್ವಾಸ ಹೆಚ್ಚಾಗಿ ಉತ್ತಮ ಫಲಿತಾಂಶ ಪಡೆಯಲು ಸಹಾಯವಾಗುತ್ತದೆ. ಇಂತಹ ಶಿಸ್ತುಬದ್ಧ ಜೀವನಶೈಲಿ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ರೂಪಿಸುತ್ತದೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಆದ್ಯತೆಗಳನ್ನು ಸರಿಯಾಗಿ ಗುರುತಿಸಿ ನಿರ್ವಹಿಸಿದರೆ ಜೀವನದಲ್ಲಿ ಯಶಸ್ಸು ಸುಲಭವಾಗಿ ದೊರೆಯುತ್ತದೆ ಮತ್ತು ಭವಿಷ್ಯ ಪ್ರಕಾಶಮಾನವಾಗುತ್ತದೆ

ವಿದ್ಯಾರ್ಥಿಯ ಪ್ರಮುಖ ಆದ್ಯತೆ ಅಧ್ಯಯನವಾಗಿರಬೇಕು. ಪಾಠಗಳನ್ನು ನಿಯಮಿತವಾಗಿ ಓದುವುದು, ಗೃಹಕಾರ್ಯವನ್ನು ಸಮಯಕ್ಕೆ ಮುಗಿಸುವುದು ಮತ್ತು ಪರೀಕ್ಷೆಗೆ ಮುಂಚಿತವಾಗಿ ತಯಾರಿ ಮಾಡಿಕೊಳ್ಳುವುದು ಅವನ ಕರ್ತವ್ಯವಾಗಿದೆ. ಇವುಗಳ ನಂತರವೇ ಆಟ, ಮನರಂಜನೆ ಮತ್ತು ಇತರ ಚಟುವಟಿಕೆಗಳಿಗೆ ಸಮಯ ನೀಡಬೇಕು. ಮುಖ್ಯ ಕೆಲಸಗಳನ್ನು ಮುಂದೂಡುವ ಅಭ್ಯಾಸ ವಿದ್ಯಾರ್ಥಿಯ ಪ್ರಗತಿಗೆ ಅಡ್ಡಿಯಾಗುತ್ತದೆ.



# ಶ್ವಾಸಕೋಶದ ಆಚೆಗೆ : ಒಂದು ಸಿಗರೆಟ್ ನಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಹೇಗೆ ಹಾನಿಗೊಳಿಸಬಲ್ಲದು ?




ವ್ಯಸನಗಳ ವಿನಾಶಕಾರಿ ಅಡ್ಡಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಜೂನ್ 26 ರಂದು 'ಅಂತರರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನ' ವನ್ನು ಆಚರಿಸಲಾಗುತ್ತದೆ. ಧೂಮಪಾನದ ದೈಹಿಕ ಅಡ್ಡಪರಿಣಾಮಗಳ ಬಗ್ಗೆ ಎಲ್ಲರಿಗೂ ತಿಳಿದಿದೆ, ಆದರೆ ಮಹರ್ಷಿ ಅಧ್ಯಾತ್ಮ ವಿಶ್ವವಿದ್ಯಾಲಯದ ಒಂದು ಕುತೂಹಲಕಾರಿ ಅಧ್ಯಯನವು ನಮ್ಮ ಆರೋಗ್ಯದ ಸಂಪೂರ್ಣ ವಿಭಿನ್ನ ಆಯಾಮದ ಮೇಲೆ ಬೆಳಕು ಚೆಲ್ಲಿದೆ ಅದುವೇ ''ನಮ್ಮ ಸೂಕ್ಷ್ಮ ಶಕ್ತಿ''.ಪ್ರಯೋಗ ಧೂಮಪಾನದ ಕುಂಡಲಿನಿ-ಚಕ್ರಗಳ ಮೇಲಿನ ಪರಿಣಾಮ ಕುಂಡಲಿನಿ-ಚಕ್ರಗಳು ನಮ್ಮ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಕಾರ್ಯಗಳಿಗೆ ಸೂಕ್ಷ್ಮ ಶಕ್ತಿಯನ್ನು ನೀಡುತ್ತವೆ. ಧೂಮಪಾನವು ವ್ಯಕ್ತಿಯ ಕುಂಡಲಿನಿ-ಚಕ್ರಗಳ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬುದನ್ನು ಅಧ್ಯಯನ ಮಾಡಲು, ಒಂಗಿ ಸಂಶೋಧಕರು ರಷ್ಯಾದ ಉಪಕರಣವಾದ 'ಬಯೋ-ವೆಲ್' ಮತ್ತು ಸಾಂಪ್ರದಾಯಿಕ ಪೆಂಡುಲಮ್ ಸಹಾಯದಿಂದ ಒಂದು ಪ್ರಯೋಗವನ್ನು ನಡೆಸಿದರು. ಇದರಲ್ಲಿ ವರ್ಷಗಳಿಂದ ನಿಯಮಿತವಾಗಿ ಸಾಧನೆ ಮಾಡುತ್ತಿರುವ ಒಬ್ಬ ಸಾಧಕರನ್ನು ಸೇರಿಸಿಕೊಳ್ಳಲಾಗಿತ್ತು. ಧೂಮಪಾನಕ್ಕೆ ಮುನ್ನ (ಮೂಲ ಸ್ಥಿತಿ) ಧೂಮಪಾನ ಮಾಡುವ ಮೊದಲು ಸಾಧಕರ ಕುಂಡಲಿನಿ-ಚಕ್ರಗಳು (ಸಹಸ್ರಾರ, ಆಜ್ಞಾ, ಮೂಲಾಧಾರ) ಸಮತೋಲನದಲ್ಲಿದ್ದವು (ಮಧ್ಯರೇಖೆ (ಸುಷುಮ್ನಾ ನಾಡಿ)ಗೆ ಹತ್ತಿರವಾಗಿದ್ದವು). ಅಂದರೆ ದೈವಿಕ ಚೈತನ್ಯವನ್ನು ಗ್ರಹಿಸಲು ಅನುಕೂಲಕರ ಸ್ಥಿತಿಯಲ್ಲಿದ್ದವು, ನಕಾರಾತ್ಮಕ ಶಕ್ತಿಯು ಶೂನ್ಯವಾಗಿತ್ತು ಮತ್ತು ಸಕಾರಾತ್ಮಕ ಶಕ್ತಿಯ ಪ್ರಭಾವಲಯವು 5.3 ಮೀಟರ್ ಇತ್ತು. ನಂತರ ಆ ಪಾಲ್ಗೊಂಡಿದ್ದ ಸಾಧಕರು (ತಮ್ಮ ಸೇವೆಯ ರೂಪದಲ್ಲಿ ಕೇವಲ ಸಂಶೋಧನೆಗಾಗಿ) ಸಿಗರೆಟ್‌ನ ಕೇವಲ ಎಂಟು ಕಟುಗಳನ್ನು (ಎಳೆತಗಳನ್ನು -) ತೆಗೆದುಕೊಂಡರು.

**ಇದರಿಂದ ತಕ್ಷಣವೇ ಒಂದು ದೊಡ್ಡ ಬದಲಾವಣೆಯಾಯಿತು:** ಸಕಾರಾತ್ಮಕ ಪ್ರಭಾವಲಯವು ಕೇವಲ 0.8 ಮೀಟರ್‌ಗೆ ಕುಸಿಯಿತು, ಆದರೆ ನಕಾರಾತ್ಮಕ ಶಕ್ತಿಯ ಪ್ರಭಾವಲಯವು 7 ಮೀಟರ್ ವರೆಗೆ ಹರಡಿತು. **20 ನಿಮಿಷಗಳ ನಂತರ:** ಸಕಾರಾತ್ಮಕ ಶಕ್ತಿಯು ಸಂಪೂರ್ಣವಾಗಿ ಶೂನ್ಯವಾಯಿತು ಮತ್ತು ನಕಾರಾತ್ಮಕ ಶಕ್ತಿಯು



15 ಮೀಟರ್‌ಗಿಂತಲೂ ಹೆಚ್ಚು ಹೆಚ್ಚಾಯಿತು. ಸಹಸ್ರಾರ ಮತ್ತು ಮಣಿಪುರ ಚಕ್ರಗಳು ನಕಾರಾತ್ಮಕ ಶಕ್ತಿಯನ್ನು ಗ್ರಹಿಸಿದವು, ಇದರಿಂದಾಗಿ ಸಾಧಕರ ದೈವಿಕ ಚೈತನ್ಯವನ್ನು ಗ್ರಹಿಸುವ ಮತ್ತು ಜೀರ್ಣಿಸಿಕೊಳ್ಳುವ ಸಾಮರ್ಥ್ಯದ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರಿತು. 30 ನಿಮಿಷಗಳ ನಂತರ ದೇಹದೊಳಗೆ ಪ್ರತಿರೋಧವು ಪ್ರಾರಂಭವಾಯಿತು, ಇದರಿಂದಾಗಿ ನಕಾರಾತ್ಮಕ ಶಕ್ತಿಯು 12.5 ಮೀಟರ್‌ಇಳಿಯಿತು ಮತ್ತು ಸಕಾರಾತ್ಮಕ ಶಕ್ತಿಯ (1 ಮೀಟರ್) ನಿರ್ಮಾಣವು ಪ್ರಾರಂಭವಾಯಿತು.

ತೀರ್ಮಾನ 'ಬಯೋ-ವೆಲ್' ಮತ್ತು ಲೋಲಕದಿಂದ ಮಾಡಿದ ಅಧ್ಯಯನದ ತೀರ್ಮಾನಗಳು ಪರಸ್ಪರ ಸಂಪೂರ್ಣವಾಗಿ ಹೊಂದಿಕೆಯಾಗಿದ್ದವು. ಸಿಗರೆಟ್‌ನ ಕೇವಲ '8 ಕಟುಗಳ' ನಕಾರಾತ್ಮಕ ಪರಿಣಾಮವು ಸಾಧಕರ ಚಕ್ರಗಳು ಮತ್ತು ಪ್ರಭಾವಲಯದ ಮೇಲೆ ಸುಮಾರು ಅರ್ಧ ಗಂಟೆಯವರೆಗೆ ಇತ್ತು ಎಂಬುದು ಇದರಿಂದ ಸ್ಪಷ್ಟವಾಯಿತು. ಈ (ಪ್ರತಿರೋಧವು) ಸಾಧಕರು ಹಲವು ವರ್ಷಗಳಿಂದ ನಿಯಮಿತವಾಗಿ ಮಾಡುತ್ತಿರುವ ಸಾಧನೆಯ ಫಲವಾಗಿತ್ತು. ಸಾಮಾನ್ಯ ಜನರಲ್ಲಿ ಈ ಪ್ರತಿರೋಧ ಶಕ್ತಿಯು ತುಂಬಾ ಕಡಿಮೆಯಿರುತ್ತದೆ, ಇದರಿಂದಾಗಿ ಅವರ ಮೇಲೆ ಧೂಮಪಾನದ ದೀರ್ಘಕಾಲೀನ ಪರಿಣಾಮ ಬೀರಬಹುದು. ಬಾಹ್ಯವಾಗಿ ಧೂಮಪಾನ ಮಾಡುವುದರಿಂದ ವ್ಯಕ್ತಿಯ ಪ್ರಭಾವಲಯ ಮತ್ತು ಚಕ್ರಗಳ ಮೇಲೆ ಶಾಶ್ವತ ನಕಾರಾತ್ಮಕ ಪರಿಣಾಮ ಬೀರಬಹುದು ಇದರಿಂದ ಆರೋಗ್ಯ ಮತ್ತು ಇತರ ದೊಡ್ಡ ಸಮಸ್ಯೆಗಳು ಉದ್ಭವಿಸಬಹುದು.

ನಿರಂತರ ಸಾಧನೆಯಿಂದ ವ್ಯಕ್ತಿಯು ತನ್ನ ಕುಂಡಲಿನಿ-ಚಕ್ರಗಳನ್ನು ಬಲಪಡಿಸಿಕೊಳ್ಳಬಹುದು ಮತ್ತು ವ್ಯಸನಗಳನ್ನು ಕಡಿಮೆ ಸಮಯದಲ್ಲಿ ನಿಯಂತ್ರಿಸಬಹುದು.

ಈ ಪ್ರಯೋಗವು ಕೇವಲ ಒಂದು ಸಣ್ಣ ಅಂಶವಷ್ಟೇ ಆಗಿದೆ. ಸಾಧನೆಯ ಮೂಲಕ ಜನರು ಅತ್ಯಂತ ಕಡಿಮೆ ಹಿಂತೆಗೆದುಕೊಳ್ಳುವ ರೋಗಲಕ್ಷಣಗಳೊಂದಿಗೆ ಕಡಿಮೆ ಅವಧಿಯಲ್ಲಿ ವ್ಯಸನಗಳನ್ನು ಹೇಗೆ ಗೆದ್ದಿದ್ದಾರೆ ಎಂಬುದಕ್ಕೆ ಒಂಗಿ ಬಳಿ ಇಂತಹ ಅನೇಕ ಕೇಸ್ ಸ್ಟಡಿಗಳಿವೆ.



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಕೆಂಪೇಗೌಡರ ಆಡಳಿತ: ಸುಶಾಸನ ಮತ್ತು ಜನಪರ ನಾಯಕತ್ವದ ಆದರ್ಶ

**ಒಬ್ಬ ಆಡಳಿತಗಾರನ ಯಶಸ್ಸು ಅವನು ನಿರ್ಮಿಸುವ ಕಟ್ಟಡಗಳಲ್ಲಿ ಅಲ್ಲ, ಜನರ ಜೀವನದಲ್ಲಿ ತರುವ ಬದಲಾವಣೆಯಲ್ಲಿ ಅಡಗಿರುತ್ತದೆ. ಈ ಸತ್ಯವನ್ನು ಕೆಂಪೇಗೌಡರು ತಮ್ಮ ಆಡಳಿತದ ಮೂಲಕ ಸಾಬೀತುಪಡಿಸಿದರು. ಪ್ರಜೆಗಳ ಸುರಕ್ಷತೆ, ಕೃಷಿಯ ಅಭಿವೃದ್ಧಿ, ನೀರಿನ ಸಂರಕ್ಷಣೆ, ವ್ಯಾಪಾರದ ಉತ್ತೇಜನ ಹಾಗೂ ಧಾರ್ಮಿಕ ಸಾಮರಸ್ಯಕ್ಕೆ ಅವರು ಸಮಾನ ಆದ್ಯತೆ ನೀಡಿದರು.ಅವರ ಆಡಳಿತದಲ್ಲಿ ಜನರ ಅಗತ್ಯಗಳೇ ಮೊದಲ ಆದ್ಯತೆಯಾಗಿದ್ದವು. ಕೃಷಿಗೆ ಅಗತ್ಯವಾದ ನೀರಿನ ವ್ಯವಸ್ಥೆ, ವ್ಯಾಪಾರಿಗಳಿಗೆ ಅನುಕೂಲವಾಗುವ ಮಾರುಕಟ್ಟೆಗಳು, ಜನರ ರಕ್ಷಣೆಗೆ ಕೋಟೆ ಮತ್ತು ನಗರ ಭದ್ರತಾ ವ್ಯವಸ್ಥೆಗಳನ್ನು ಕಲ್ಪಿಸುವ ಮೂಲಕ ಸಮಗ್ರ ಅಭಿವೃದ್ಧಿಯ ಪರಿಕಲ್ಪನೆಯನ್ನು**

ಇತಿಹಾಸದಲ್ಲಿ ಕೆಲವು ನಾಯಕರು ತಮ್ಮ ಅಧಿಕಾರದಿಂದ ಗುರುತಿಸಿಕೊಳ್ಳುತ್ತಾರೆ. ಆದರೆ ಕೆಲವು ನಾಯಕರು ತಮ್ಮ ಆಡಳಿತದ ಗುಣಮಟ್ಟ, ಜನಪರ ಚಿಂತನೆ ಮತ್ತು ದೂರದೃಷ್ಟಿಯಿಂದ ಶಾಶ್ವತವಾಗಿ ನೆನಪಿನಲ್ಲಿ ಉಳಿಯುತ್ತಾರೆ. ನಾಡಪ್ರಭು ಕೆಂಪೇಗೌಡರು ಅಂತಹ ಅಪರೂಪದ ಆಡಳಿತಗಾರರಲ್ಲಿ ಒಬ್ಬರು. ಅವರು ಕೇವಲ ಬೆಂಗಳೂರು ನಗರದ ನಿರ್ಮಾತೃ ಮಾತ್ರವಲ್ಲ ಜನರ ಬದುಕನ್ನು ಸುಧಾರಿಸುವ ಆಡಳಿತದ ಮೂಲಕ ಉತ್ತಮ ಆಡಳಿತದ ಮಾದರಿಯನ್ನು ರೂಪಿಸಿದ ನಾಯಕರು. ಕೆಂಪೇಗೌಡರು ಧಾರ್ಮಿಕ ಸಹಿಷ್ಣುತೆಯನ್ನೂ ತಮ್ಮ ಆಡಳಿತದ ಪ್ರಮುಖ ತತ್ವವನ್ನಾಗಿಸಿಕೊಂಡಿದ್ದರು. ದೇವಾಲಯಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದ ಅವರು ವಿವಿಧ ಸಮುದಾಯಗಳ ನಡುವೆ ಸಾಮರಸ್ಯದ ವಾತಾವರಣ ನಿರ್ಮಿಸಲು ಪ್ರಯತ್ನಿಸಿದರು. ಆಡಳಿತ ಎಂದರೆ ಕೇವಲ ಅಧಿಕಾರ ಚಲಾಯಿಸುವುದಲ್ಲ ಸಮಾಜದಲ್ಲಿ ಶಾಂತಿ ಮತ್ತು ವಿಶ್ವಾಸವನ್ನು ಬೆಳೆಸುವುದು ಎಂಬ ಸಂದೇಶವನ್ನು ಅವರು ನೀಡಿದರು.

ಇಂದಿನ ಕರ್ನಾಟಕದಲ್ಲಿ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ರಸ್ತೆ, ಮೆಟ್ರೋ, ಕೈಗಾರಿಕೆ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿ ಕಂಡಿದ್ದರೂ, ಜನಸಾಮಾನ್ಯರ ಮೂಲಭೂತ ಸಮಸ್ಯೆಗಳು ಇನ್ನೂ ಸಂಪೂರ್ಣವಾಗಿ ಪರಿಹಾರವಾಗಿಲ್ಲ. ಕುಡಿಯುವ ನೀರು, ಸಂಚಾರ ದಟ್ಟಣೆ,



ಪರಿಸರ ಮಾಲಿನ್ಯ, ನಿರುದ್ಯೋಗ ಮತ್ತು ಗ್ರಾಮೀಣ ಅಭಿವೃದ್ಧಿಯಂತಹ ಸವಾಲುಗಳು ನಮ್ಮ ಮುಂದಿವೆ.

ಇಂತಹ ಸಂದರ್ಭದಲ್ಲಿ ಕೆಂಪೇಗೌಡರ ಆಡಳಿತ ತತ್ವಗಳು ಹೆಚ್ಚು ಪ್ರಸ್ತುತವಾಗುತ್ತವೆ. ಜನಕೇಂದ್ರಿತ ಯೋಜನೆಗಳು, ಪಾರದರ್ಶಕ ಆಡಳಿತ, ಸಂಪನ್ಮೂಲಗಳ ಸಮರ್ಪಕ ಬಳಕೆ ಮತ್ತು ಪರಿಸರ ಸ್ನೇಹಿ ಅಭಿವೃದ್ಧಿ ಇಂದಿನ ಆಡಳಿತದ ಅವಿಭಾಜ್ಯ ಅಂಗಗಳಾಗಬೇಕು. ಸರ್ಕಾರದ ಜೊತೆಗೆ ನಾಗರಿಕರೂ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದಾಗ ಮಾತ್ರ ಉತ್ತಮ ಆಡಳಿತ ಸಾಧ್ಯ. ಯುವಜನತೆಯೂ ಈ ವಿಚಾರದಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಸಮಾಜದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವುದು, ಸಾರ್ವಜನಿಕ ಆಸ್ತಿಗಳ ರಕ್ಷಣೆ, ತೆರಿಗೆ ಪಾವತಿ, ಪರಿಸರ ಕಾಳಜಿ ಮತ್ತು ನಾಗರಿಕ ಜವಾಬ್ದಾರಿಯನ್ನು ಅರಿತುಕೊಳ್ಳುವುದು ಉತ್ತಮ ಆಡಳಿತಕ್ಕೆ ಪೂರಕವಾಗುತ್ತದೆ. ಉತ್ತಮ ಸಮಾಜವನ್ನು ನಿರ್ಮಿಸುವ ಹೊಣೆಗಾರಿಕೆ ಕೇವಲ ಸರ್ಕಾರದ ಮೇಲಲ್ಲ ಪ್ರತಿಯೊಬ್ಬ ನಾಗರಿಕನ ಮೇಲೂ ಇದೆ. ಕೆಂಪೇಗೌಡರ ಜೀವನ ನಮಗೆ ತಿಳಿಸುವ ಪ್ರಮುಖ ಸಂದೇಶವೆಂದರೆ, ನಾಯಕತ್ವ ಎಂದರೆ ಅಧಿಕಾರವಲ್ಲ ಸೇವೆ. ಜನರ ಒಳಿತಿಗಾಗಿ ದೂರದೃಷ್ಟಿಯಿಂದ ಕೆಲಸ ಮಾಡುವ ನಾಯಕರು ಮಾತ್ರ ಇತಿಹಾಸದಲ್ಲಿ ಶಾಶ್ವತ ಸ್ಥಾನ ಪಡೆಯುತ್ತಾರೆ. ಅವರು ಕಟ್ಟಿದ ಬೆಂಗಳೂರು ಇಂದು ವಿಶ್ವಮಟ್ಟದಲ್ಲಿ ಗುರುತಿಸಿಕೊಂಡಿರುವುದು ಅವರ ಆಡಳಿತ ಸಾಮರ್ಥ್ಯಕ್ಕೆ ಜೀವಂತ ಸಾಕ್ಷಿಯಾಗಿದೆ. ಕೆಂಪೇಗೌಡ ಜಯಂತಿಯನ್ನು ಆಚರಿಸುವುದರ ಜೊತೆಗೆ ಅವರ ಜನಪರ ಆಡಳಿತ, ಪಾರದರ್ಶಕತೆ, ದೂರದೃಷ್ಟಿ ಮತ್ತು ಸೇವಾ ಮನೋಭಾವವನ್ನು ಅಳವಡಿಸಿಕೊಳ್ಳುವುದು ಇಂದಿನ ಕರ್ನಾಟಕದ ಅಗತ್ಯವಾಗಿದೆ. ಅವರ ಆದರ್ಶಗಳನ್ನು ಅನುಸರಿಸಿದಾಗ ಮಾತ್ರ ಅಭಿವೃದ್ಧಿಯ ಫಲ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವಂತಾಗುತ್ತದೆ. ಇದೇ ನಾಡಪ್ರಭು ಕೆಂಪೇಗೌಡರಿಗೆ ಸಲ್ಲಿಸುವ ನಿಜವಾದ ಗೌರವ.

# ಕಲಾ ಸಾಹಿತ್ಯ




ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

## ಮೌಲ್ಯಗಳ ಜೊತೆಗೆ ಅವಶ್ಯಕತೆ ಮತ್ತು ಅಗತ್ಯತೆಗೆ ತಕ್ಕಂತೆ ಮಾತನಾಡುವವರನ್ನು ಖಂಡಿಸುವವರು ಅವರ ಜ್ಞಾನವೇ ಸಾಕ್ಷಿ

ಸೃಷ್ಟಿಕರ್ತನು ತಾಯಿ ಗರ್ಭದಲ್ಲಿ ಒಂಬತ್ತು ತಿಂಗಳ ಅವಧಿಯ ಒಳಗೆ ಹಂತಹಂತವಾಗಿ ದೇಹದ ಎಲ್ಲಾ ಅಂಗಾಂಗಗಳನ್ನು ಸೃಷ್ಟಿ ಮಾಡಿ ಪರಿಪೂರ್ಣವಾದ ಮೇಲೆ ಒಂದು ದಿನ ಹೊರಗಿನ ಪ್ರಪಂಚಕ್ಕೆ ಪರಿಚಯಿಸುತ್ತಾನೆ. ಪರಿಚಯಿಸಿದ ನಂತರ ಎಲ್ಲಾ ದೇಹದ ಅಂಗಾಂಗಗಳು ಲವಲವಿಕೆಯಿಂದ ಇರಬೇಕಾದರೆ ಅವುಗಳ ಪಾತ್ರವನ್ನು ಸಹ ಪ್ರತಿನಿತ್ಯ ಸ್ವಯಂ ಚಾಲಿತ ನಿರಂತರ ನಿರ್ವಹಿಸಬೇಕು ಎಂದು ಶಾರೀರಿಕ ಜ್ಞಾನ ತಿಳಿಸುತ್ತದೆ.ಅಗತ್ಯತೆಗೆ ಮತ್ತು ಅವಶ್ಯಕತೆಗೆ ತಕ್ಕಂತೆ ಮಾತನಾಡುವುದನ್ನು ಪ್ರತಿಯೊಬ್ಬರೂ ರೂಢಿ ಮಾಡಿಕೊಳ್ಳಬೇಕು. ಮಾತನಾಡುವುದು ಒಂದು ಕಲೆ, ಭಾಷಣ ಮಾಡುವುದು ಒಂದು ಕಲೆ,ಬರೆಯುವುದು ಒಂದು ಕಲೆ, ಕೇಳುವುದೂ ಒಂದು ಕಲೆ ಹಾಗೂ ಸಹಿಸಿಕೊಳ್ಳುವುದೂ ಸಹ ಒಂದು ಕಲೆ ಇದ್ದ ಹಾಗೆ. ಮಾತಿಗೆ ಮುನ್ನ ಆಲೋಚನೆ ಇರಲಿ ನಮ್ಮ ಉದ್ದವಾದ ಚರಿತ್ರೆಯನ್ನು ಕೇಳಲು ಯಾರೂ ಸಹ ಇಷ್ಟಪಡಲಾರರು. ಮಾತು ಸಂಕ್ಷಿಪ್ತವೂ,ಸರಳವೂ ಆಗಿರಲಿ. ಮೌಲ್ಯಯುತ ಮಾತುಗಳಿಗೆ ಗೌರವ ಮತ್ತು ಬೆಲೆ ನೀಡುವ ಮನಸ್ಸುಗಳಿರಬೇಕು. ಮನುಷ್ಯ ಸಂದರ್ಭಾನುಸಾರ ಎಲ್ಲವನ್ನೂ ಅರಗಿಸಿಕೊಳ್ಳುವ ಮನೋಭಾವವನ್ನು ನಿತ್ಯಜೀವನದ ಬದುಕಿನಲ್ಲಿ ರೂಢಿ ಮಾಡಿಕೊಳ್ಳಬೇಕು. ಮಾತಿನಲ್ಲಿನ ಸೌಜನ್ಯ ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತದೆ , ವಿಚಾರದಲ್ಲಿನ ಸೌಜನ್ಯ ಜ್ಞಾನ ಸಂಪತ್ತನ್ನು ಹೆಚ್ಚಿಸುತ್ತದೆ,ಪ್ರೀತಿಯಲ್ಲಿನ ಸೌಜನ್ಯ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ.

ಮಾತು ಮಿತವಾಗಿದ್ದರೆ ಜನ ಮೆಚ್ಚುತ್ತಾರೆ, ಹಿತವಾಗಿದ್ದರೆ ಮುದಗೊಳ್ಳುತ್ತಾರೆ, ತೂಕ ಬದ್ಧವಾಗಿದ್ದರೆ ತಲೆದೂಗುತ್ತಾರೆ, ಬಿರುಸಾಗಿ ಇದ್ದರೆ ನೋಯುತ್ತಾರೆ , ಗಂಭೀರವಾಗಿದ್ದರೆ ಜನ ಆದರಿಸುತ್ತಾರೆ, ಮೌನವೇ ಆಗಿದ್ದರೆ ಜನ ಆರಾಧಿಸುತ್ತಾರೆಮಾತು ಬೆಳ್ಳಿ ,ಮೌನ ಬಂಗಾರ ಎಂಬ ಮಾತು ಶತ-ಶತಮಾನಗಳಿಂದ ಚಾಲನೆಯಲ್ಲಿದೆ. ಈ ಮಾತಿಗೆ ವಿವಿಧ ಕಾಲಗಳಲ್ಲಿ ವಿವಿಧ ವಿವರಣೆಗಳನ್ನು ನೀಡಿದ್ದಾರೆ. ಪ್ರಾಯಶಃ ಮಾತಿನಲ್ಲೆ ಕಾಲಹರಣ ಮಾಡುತ್ತಿದ್ದ ಅವರಿಗಾಗಿ ಇದು ಚಾಲನೆಗೆ ಬಂದಿರಬಹುದು. ಇದರೊಂದಿಗೆ ಮಾತು ಕಡಿಮೆ,ಹೆಚ್ಚು ದುಡಿಮೆ ಎಂಬ ಮಾತನ್ನು ತಳುಕು ಹಾಕಿದ್ದಾರೆ.ಈ ಲೋಕ ಸೃಷ್ಟಿಯಾದದ್ದು ಮಾತಿನಿಂದ ಎಂದು ಧರ್ಮಗ್ರಂಥ ಹೇಳುತ್ತದೆ.

ಆದಿಯಲ್ಲಿ ದೇವರೆಂದರು ಬೆಳಕಾಗಲಿ ಎಂದ ಹಾಗೆಯೇ ಆಯಿತು. ಅಂತೆಯೇ ಸೃಷ್ಟಿಸಲ್ಪಟ್ಟ ಪ್ರತಿ ವಸ್ತುವು ಜೀವಿಯು ದೇವ ವಾಕ್ಯದಿಂದ ಸೃಷ್ಟಿಸಲ್ಪಟ್ಟಿತು ಎಂದರೆ ಮಾತಿನ ಶಕ್ತಿ ಎಷ್ಟಿರಬೇಕು. ಧರ್ಮಗ್ರಂಥಗಳಲ್ಲಿ ಬರೆಯಲ್ಪಟ್ಟ ದೇವ ವಾಕ್ಯವು ತಲೆತಲಾಂತರದಿಂದ ಮಾನವನ ಹಾದಿಗೆ ದಾರಿದೀಪವಾಗಿದೆ.ಈ ವಾಕ್ಯವು ಇಂದಿಗೂ ಪವಾಡಗಳನ್ನೇ ಮಾಡಬಲ್ಲದು. ದುಃಖದಲ್ಲಿರುವವರಿಗೆ ಸ್ವಾಂತನವನ್ನು, ನಿರಾಶೆಯಲ್ಲಿ ಇರುವವರಿಗೆ ಭರವಸೆಯನ್ನು, ಒಂಟಿತನದಿಂದ ಕಷ್ಟಪಡುವವರಿಗೆ ಗೆಳೆತನ, ಬದುಕಿನ ಜಂಜಾಟದಲ್ಲಿ ನರಳುವವರಿಗೆ







ಹೊಸ ಜೀವವನ್ನು ನೀಡಬಲ್ಲುದು. ವಿಪರ್ಯಾಸವೆಂದರೆ ಇಷ್ಟೊಂದು ಬಲಶಾಲಿ ಸಾಧನ ನಮ್ಮ ಬಳಿ ಇರುವಾಗ ಅಗತ್ಯ ಕಾಲಕ್ಕೆ ಅದನ್ನು ಬಳಸದೇ ಮೌನ ಬಂಗಾರ ಎಂಬ ಸೋಗಿನಲ್ಲಿ ಇರುತ್ತೇವೆ. ಅನ್ಯಾಯವನ್ನು ಖಂಡಿಸಲು ಅವಕಾಶವಿರುವಾಗ ಮಾತುಬರದ ಮೂಕರಾಗುತ್ತೇವೆ.ಅಸತ್ಯದ ಆಳ್ವಿಕೆ ಇರುವಾಗ ಸತ್ಯವನ್ನು ಪಸರಿಸಲು ಹಿಂಜರಿಯುತ್ತೇವೆ. ಇಂತಹ ಸಂದರ್ಭಗಳಲ್ಲಿ ಖಂಡಿತವಾಗಿ ಮೌನ ಬಂಗಾರವಲ್ಲ ಮೌನದ ಮರೆಯಲ್ಲಿ ಬಚ್ಚಿಟ್ಟು ಕುಳಿತುಕೊಳ್ಳುವುದು ಆಷಾಢಭೂತಿತನದ ಸಂಕೇತ. ಇಂತಹ ಸಂದರ್ಭಗಳಲ್ಲಿ ಅನ್ಯಾಯವನ್ನು ಖಂಡಿಸಿ ಮಾತನಾಡುವುದು ಸುಲಭವಲ್ಲ. ಆದರೆ ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾ, ಮಹಾತ್ಮ ಗಾಂಧೀಜಿ ಇನ್ನಿತರ ಈ ಲೋಕದ ವ್ಯಕ್ತಿಗಳು ಇಂತಹ ಸಂದರ್ಭಗಳಲ್ಲಿ ಮೌನವಾಗಿರದೇ ಬಾಯಿತೆರೆದು ಮಾತನಾಡಿದ್ದ ರಿಂದಲೇ ಅವರನ್ನು ಇಂದು ಮಹಾಪುರುಷರೆಂದು ಕರೆಯಲಾಗುತ್ತದೆ.ಹಾಗೆಯೇ ಮಹಾತ್ಮರೆಲ್ಲರೂ ಮಾತನಾಡಿದ್ದರಿಂದಲೇ ಮಹಾತ್ಮರಾದರು ಹಾಗೂ ಸ್ಮರಣೀಯರಾದರು. ಗಾಂಧೀಜಿ ಮೊದಲ್ಗೊಂಡು ಬ್ರಿಟೀಷರ ವಿರುದ್ಧ ಭಾರತ ಬಿಟ್ಟು ತೊಲಗಿ ಎಂಬ ಘೋಷವಾಕ್ಯದೊಂದಿಗೆ ಹೋರಾಟ ಮಾಡಿ ಮಾತನಾಡಿದ್ದರಿಂದಲೇ ಭಾರತ ಸ್ವತಂತ್ರವಾಯಿತು. ಈಗಿನ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಮಾತನಾಡುವ ಕಲೆಯನ್ನು ಕರಗತಮಾಡಿಕೊಂಡಿದ್ದ ರಿಂದಲೇ ಲೋಕದಲ್ಲಿ ಮನ್ನಣೆ ಗಳಿಸಿರುವುದು. ಈ ಮೇಲ್ಕಂಡ ಎಲ್ಲಾ ಮಾಹಿತಿಗಳ ಅನ್ವಯ, ಆಳವಾದ ಅಧ್ಯಯನ, ಆಳವಾದ ವಿಶ್ಲೇಷಣೆ, ಆಳವಾದ ವಿಮರ್ಶೆಯೊಂದಿಗೆ ಸಕರಾತ್ಮಕ ಚಿಂತನೆಯಲ್ಲಿ ಸೋಸಿ ನೋಡಿದಾಗ ಅಗತ್ಯ ಮತ್ತು ಅವಶ್ಯವಿದ್ದಾಗ ಮೌಲ್ಯದೊಂದಿಗೆ ಮಾತನಾಡುವುದು ಅತ್ಯಂತ ಸೂಕ್ತವೆನಿಸುತ್ತದೆ. ಇಂತಹ ಸಂದರ್ಭದಲ್ಲೂ ಸಹ ಮಹಾತ್ಮರು ಹಾಗೂ ಸಂದರ್ಭಾನುಸಾರ ಇತರರು ಅಗತ್ಯತೆ ಮತ್ತು ಅವಶ್ಯಕತೆಯ ಬಗ್ಗೆ ಮಾತನಾಡುವುದನ್ನು ಯಾರಾದರೂ ಖಂಡಿಸಿದರೆ ಅವರ ಜ್ಞಾನ ಎಷ್ಟಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ಎಲ್ಲರೂ ಅರ್ಥೈಸಿಕೊಂಡರೆ ಸತ್ಯ ಏನೆಂಬುದು ಅನಾವರಣಗೊಳ್ಳುತ್ತದೆ.

## ಸೌತೆಕಾಯಿ ಸೇವನೆ ಆರೋಗ್ಯಕ್ಕೆ ಒಳಿತೇ? ತಜ್ಞರು ಹೇಳೋದೇನು?


ಬೇಸಿಗೆಯ ಸಮಯದಲ್ಲಿ ನಮ್ಮ ದೇಹ ಹೈಡ್ರೇಟ್ ಆಗಿ ಇರಿಸಲು ನಾವು ಸೇವಿಸುವ ಆಹಾರ ಕೂಡ ಪ್ರಮುಖವಾಗುತ್ತದೆ.

ಅದರಲ್ಲೂ ಹೆಚ್ಚಿನವರು ನೀರಿನ ಅಂಶ ಇರುವ ಹಣ್ಣು,ತರಕಾರಿಗಳನ್ನೇ ಆಯ್ದುಕೊಳ್ಳುತ್ತಾರೆ. ಮುಖ್ಯವಾಗಿ ಸೌತೆಕಾಯಿಯಲ್ಲಿ ಜೀವಸತ್ವಗಳು ಮತ್ತು ಉತ್ಕರ್ಷಣ ನಿರೋಧಕಗಳು ಹೆಚ್ಚಿನ ಪ್ರಮಾಣದಲ್ಲಿದ್ದು ಜನಪ್ರಿಯ ಬೇಸಿಗೆ ಆಹಾರವಾಗಿದೆ. ಆದರೆ ಸೌತೆಕಾಯಿ ಸಾಮಾನ್ಯವಾಗಿ ಹೆಚ್ಚಿನ ಜನರಿಗೆ ಸುರಕ್ಷಿತವಾಗಿದ್ದರೂ, ಅವು ಕೆಲವೊಮ್ಮೆ ಕೆಲವು ಸಂದರ್ಭಗಳಲ್ಲಿ ಅಡ್ಡಪರಿಣಾಮಗಳು ಅಥವಾ ಆರೋಗ್ಯ ಸಮಸ್ಯೆ ಗಳನ್ನು ಉಂಟುಮಾಡಬಹುದು ಎಂದು ತಜ್ಞರು ಎಚ್ಚರಿಕೆಯನ್ನು ನೀಡಿದ್ದಾರೆ.

ಸೌತೆಕಾಯಿಯಲ್ಲಿ ಕುಕುರ್ಬಿಟಾಸಿನ್‌ಗಳು ಎಂದು ಕರೆಯಲ್ಪಡುವ ವಿಷಕಾರಿ ಸಂಯುಕ್ತಗಳು ಇದ್ದು ಅವುಗಳನ್ನು ಅತ್ಯಂತ ಕಹಿಯಾಗಿ ಮಾಡುತ್ತದೆ. ಇದು ಹೊಟ್ಟೆಯ ಅಸ್ವಸ್ಥತೆಯನ್ನು ಉಂಟು ಮಾಡಬಹುದು ಹೊಟ್ಟೆಯುಬ್ಬರ, ಗ್ಯಾಸ್, ಹೊಟ್ಟೆ ನೋವು ಅಥವಾ ಅಜೀರ್ಣಕ್ಕೆ ಕಾರಣವಾಗಬಹುದು. ತುಂಬಾ ಕಹಿಯಾದ ಸೌತೆಕಾಯಿಗಳನ್ನು ಸೇವಿಸುವುದರಿಂದ ವಾಕರಿಕೆ, ವಾಂತಿ ಉಂಟಾಗುತ್ತದೆ. ಕೆಲವರಿಗೆ ಸೌತೆಕಾಯಿ ತಿಂದಾಗ ಅಲರ್ಜಿ ಉಂಟಾಗಬಹುದು.

ಬಾಯಿ ಅಥವಾ ಗಂಟಲಿನಲ್ಲಿ ತುರಿಕೆ, ತುಟಿ ಅಥವಾ ನಾಲಿಗೆಯಲ್ಲಿ ಅಲರ್ಜಿ ಅಥವಾ ಚರ್ಮದಲ್ಲಿ ದದ್ದುಗಳು ಉಂಟಾಗ ಬಹುದು.

ಸೌತೆಕಾಯಿಗಳು ಹೆಚ್ಚಿನ ಪ್ರಮಾಣದ ನೀರನ್ನು ಹೊಂದಿರು ವುದರಿಂದ ನೈಸರ್ಗಿಕ ಮೂತ್ರವರ್ಧಕ ಗುಣಗಳನ್ನು ಹೊಂದಿದೆ. ಅತಿಯಾದ ಪ್ರಮಾಣದಲ್ಲಿ ತಿನ್ನುವುದು ಮೂತ್ರ ವಿಸರ್ಜನೆಯನ್ನು ಹೆಚ್ಚಿಸಬಹುದು.



# ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ; ಸತ್ಯಶೋಧನ ಸಮಿತಿಯ ವರದಿ ಸಿದ್ದ, ಸೀಲ್ಡ್ ಕವರ್‌ನಲ್ಲಿ ಭದ್ರ: ಸಿ.ಟಿ. ರವಿ

• **ಉದಯವಾಹಿನಿ ಚಿಕ್ಕಮಗಳೂರು:**

ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಸತ್ಯಶೋಧನ ಸಮಿತಿಯ ವರದಿ ಸಿದ್ಧವಾಗಿರುವ ಬಗ್ಗೆ ಸಿ ಟಿ ರವಿ ತಿಳಿಸಿದರು. ಇದೇ ವೇಳೆ ಗೃಹಲಕ್ಷ್ಮಿ ಹಣದ ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು ಆಗ್ರಹಿಸಿದರು. ಪರಿಷತ್ ಚುನಾವಣೆಯಲ್ಲಿ ನಡೆದಿರುವ ಅಡ್ಡ ಮತದಾನ ಪ್ರಕರಣದ ಕುರಿತು ಬಿಜೆಪಿ ರಾಜ್ಯ ಘಟಕವು ರಚಿಸಿರುವ ಸತ್ಯಶೋಧನ ಸಮಿತಿಯ ವರದಿ ಈಗಾಗಲೇ ಸಿದ್ಧವಾಗಿದ್ದು, ಅದನ್ನು ಸೀಲ್ಡ್ ಕವರ್‌ನಲ್ಲಿ ಇಡಲಾಗಿದೆ ಎಂದು ಪರಿಷತ್ ಸದಸ್ಯ ಸಿ. ಟಿ. ರವಿ ತಿಳಿಸಿದರು. ಈ ಕುರಿತಂತೆ ನಗರದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯ ಬಿಜೆಪಿ ಅಧ್ಯಕ್ಷರು ಪ್ರಸ್ತುತ ದೆಹಲಿಗೆ ತೆರಳಿದ್ದು, ನಾಳೆ ಸಂಜೆ ಬೆಂಗಳೂರಿಗೆ ಮರಳಲಿದ್ದಾರೆ. ಅವರೊಂದಿಗೆ ಸಮಿತಿ ಸದಸ್ಯರಾದ ಮೂವರು



ಉದಯವಾಹಿನಿ ಚಿತ್ರ

ಭೇಟಿ ಮಾಡಿ ವರದಿಯನ್ನು ಸಲ್ಲಿಸಲಿದ್ದೇವೆ ಎಂದು ಹೇಳಿದರು.

''ನಾವು ವಿವಿಧ ವ್ಯಕ್ತಿಗಳೊಂದಿಗೆ ನಡೆಸಿದ ಚರ್ಚೆಗಳು, ನಮಗೆ ಲಭ್ಯವಾದ ಮಾಹಿತಿ ಹಾಗೂ ಸಾಂದರ್ಭಿಕ ಅಂಶಗಳ ಆಧಾರದ ಮೇಲೆ ವರದಿಯನ್ನು ಸಿದ್ಧಪಡಿಸಿದ್ದೇವೆ. ವರದಿ ಹೇಗೆ ತಯಾರಿಸಲಾಗಿದೆ ಎಂಬುದನ್ನು ಅಧ್ಯಕ್ಷರ ಮುಂದೆ ವಿವರಿಸಿ ನಂತರ ಸಲ್ಲಿಸಲಾಗುವುದು. ಯಾವುದೇ ಸಂಗತಿಯನ್ನು ಸಾರ್ವಜನಿಕವಾಗಿ ಚರ್ಚಿಸಲು ನಾವು ಬಯಸುವುದಿಲ್ಲ,'' ಎಂದು ಸಿ ಟಿ ರವಿ ಸ್ಪಷ್ಟಪಡಿಸಿದರು. ಸೀಕ್ರೆಟ್ ವೋಟಿಂಗ್ ನಡೆದಿರುವುದರಿಂದ ಕೆಲವು ವ್ಯಕ್ತಿಗಳ ಬಗ್ಗೆ ಅನುಮಾನ ವ್ಯಕ್ತಪಡಿಸುವುದೇ ಹೊರತು, ಕೇವಲ ಸಾಂದರ್ಭಿಕ ಸಾಕ್ಷಿಗಳ ಆಧಾರದ ಮೇಲೆ ಯಾರನ್ನೂ ಆರೋಪಿಯ ಸ್ಥಾನದಲ್ಲಿ ನಿಲ್ಲಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

**ಗೃಹಲಕ್ಷ್ಮಿ ಹಣದ ಗೋಲ್‌ಮಾಲ್ ಆರೋಪದ ಹೇಳಿದ್ದು ಹೀಗೆ:** ಇದೇ ವೇಳೆ ಗೃಹಲಕ್ಷ್ಮಿ ಯೋಜನೆಯಲ್ಲಿ 250 ಕೋಟಿ ರೂ. ಗೂ ಅಧಿಕ ಹಣ ಹಗರಣ ನಡೆದಿರುವ ಆರೋಪದ ಕುರಿತು ಪ್ರತಿಕ್ರಿಯಿಸಿದ ಸಿ.ಟಿ. ರವಿ, ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಒತ್ತಾಯಿಸಿದರು. ''ಸರ್ಕಾರದ ಯಾವುದೇ ತನಿಖೆಯಿಂದ ನ್ಯಾಯ ಸಿಗುತ್ತದೆ ಎಂಬ ವಿಶ್ವಾಸ ಇಲ್ಲ, ನಕಲಿ ಖಾತೆಗಳಿಗೆ ಹಣ ವರ್ಗಾವಣೆಯಾಗಿದೆ ಎಂದು ಸಿಎಜಿ ಪತ್ತೆ ಹಚ್ಚಿದೆ. ಒಂದೇ ಬ್ಯಾಂಕ್ ಖಾತೆಗೆ ಸಾವಿರಾರು ಫಲಾನುಭವಿಗಳ ಹಣ ಹೋಗಿರುವುದು ಸಾಮಾನ್ಯ ವಿಷಯವಲ್ಲ,'' ಎಂದು ಆತಂಕ ವ್ಯಕ್ತಪಡಿಸಿದರು. ಮುಖ್ಯಮಂತ್ರಿಗಳು, ಮಾಜಿ ಮುಖ್ಯಮಂತ್ರಿ ಹಾಗೂ ಹಿಂದಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ವಿಚಾರದಲ್ಲಿ ಮೌನ ವಹಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದ ಅವರು, ನಕಲಿ ಖಾತೆಗಳಿಗೆ ಹಣ ಹೋಗಿರುವುದು ಗೃಹಲಕ್ಷ್ಮಿ ಯೋಜನೆಯ ನಿಜವಾದ ಫಲಾನುಭವಿಗಳಿಗೆ ಮಾಡಿದ ದ್ರೋಹ ಎಂದು ಟೀಕಿಸಿದರು. ಈ ಹಗರಣದ ಸಂಪೂರ್ಣ ಸತ್ಯ ಹೊರಬರಬೇಕಾದರೆ ಸ್ವತಂತ್ರ ಮತ್ತು ನಿಷ್ಪಕ್ಷಪಾತ ತನಿಖೆ ಅಗತ್ಯ ಎಂದು ಅವರು ಆಗ್ರಹಿಸಿದರು.



## ಮಿನಿ ನ್ಯೂಸ್

# ಅಣೆಕಟ್ಟುಗಳ ಹೂಳು ತೆಗೆಯಲು ಕೇಂದ್ರದಿಂದ ಶೀಘ್ರದಲ್ಲೇ ಮಹತ್ವದ ಯೋಜನೆ

## ತುಂಗಭದ್ರಾ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯವನ್ನು ಶೇ.25ರಿಂದ 30ರಷ್ಟು ಹೆಚ್ಚಿಸಬಹುದಾಗಿದೆ

• **ಉದಯವಾಹಿನಿ, ಕೊಪ್ಪಳ:**

ದೇಶದಾದ್ಯಂತ ಇರುವ ಬಹುತೇಕ ಅಣೆಕಟ್ಟುಗಳಲ್ಲಿ ಶೇಕಡಾ 15ಕ್ಕಿಂತಲೂ ಹೆಚ್ಚು ಹೂಳು ತುಂಬಿಕೊಂಡಿದ್ದು, ಇದರಿಂದ ಜಲಾಶಯಗಳ ನೀರು ಸಂಗ್ರಹಣಾ ಸಾಮರ್ಥ್ಯ

**1 : ಸಾಮರ್ಥ್ಯ ಹೆಚ್ಚಳಕ್ಕೆ ಕ್ರಮ**
**2 : ಅಂತಾರಾಜ್ಯ ಸಹಕಾರಕ್ಕೆ ಶ್ಲಾಘನೆ**
**3 : ಸದ್ಬಳಕೆಯಿಂದ ರೈತರ ಆದಾಯ ವೃದ್ಧಿ**

ಗಣನೀಯವಾಗಿ ಕುಸಿದಿದೆ. ಈ ಸಮಸ್ಯೆಯನ್ನು ಮನಗಂಡು ದೇಶದ ಅಣೆಕಟ್ಟುಗಳಿಂದ ಹೂಳು ತೆಗೆಯುವ (ಡಿ-ಸಿಲ್ಟಿಂಗ್) ಬೃಹತ್ ಯೋಜನೆಯೊಂದನ್ನು ಕೇಂದ್ರ ಸರ್ಕಾರ ಸಿದ್ಧಪಡಿಸುತ್ತಿದೆ ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಹೇಳಿದರು. ಕರ್ನಾಟಕ ಸರ್ಕಾರ ಜಲಸಂಪನ್ಮೂಲ ಇಲಾಖೆ ಹಾಗೂ ತುಂಗಭದ್ರಾ ಮಂಡಳಿಯ ಸಹಯೋಗದಲ್ಲಿಂದು ಮುನಿರಾಬಾದ್‌ನ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಲಾಗಿದ್ದ ತುಂಗಭದ್ರಾ ಜಲಾಶಯದ ನೂತನ 33 ಸ್ಪಿಲ್‌ವೇ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

**ತುಂಗಭದ್ರಾ ಜಲಾಶಯದ ಸಾಮರ್ಥ್ಯ ಹೆಚ್ಚಳಕ್ಕೆ ಕ್ರಮ:** ತುಂಗಭದ್ರಾ ಜಲಾಶಯದಲ್ಲೂ ಶೇ.15ಕ್ಕಿಂತ ಹೆಚ್ಚು ಹೂಳು ತುಂಬಿಕೊಂಡಿರುವುದನ್ನು ಪ್ರಸ್ತಾಪಿಸಿದ ಸಚಿವ ಸಿ.ಆರ್.ಪಾಟೀಲ್, ಜಲಶಕ್ತಿ ಸಚಿವಾಲಯವು ಹೂಳು ತೆಗೆಯುವ ವಿಶೇಷ ಯೋಜನೆಯನ್ನು ರೂಪಿಸುತ್ತಿದೆ ಎಂದರು.

**33 ಸ್ಪಿಲ್‌ವೇ ಗೇಟುಗಳ ಲೋಕಾರ್ಪಣೆ**



'ಹರ್ ಘರ್ ಜಲ್' (ನಲ್ ಮುಖಾಂತರ ನೀರು) ಯೋಜನೆ ಹಳ್ಳಿಗಳಲ್ಲಿ ಸರಿಯಾಗಿ ಅನುಷ್ಠಾನಗೊಳ್ಳದಿದ್ದರೆ ಆಯಾ ರಾಜ್ಯಗಳ ಮುಖ್ಯಮಂತ್ರಿಗಳ ಗಮನಕ್ಕೆ ತರುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.
ಸಿ.ಆರ್.ಪಾಟೀಲ್

ಈ ಯೋಜನೆಯ ತಾಂತ್ರಿಕ ಸಹಯೋಗವನ್ನು ಕೇಂದ್ರ ಸರ್ಕಾರ ನೀಡಲಿದ್ದು, ಅನುಷ್ಠಾನದ ಜವಾಬ್ದಾರಿಯನ್ನು ಆಯಾ ರಾಜ್ಯ ಸರ್ಕಾರಗಳು ಹೊರಬೇಕಾಗುತ್ತದೆ.

ಈ ಯೋಜನೆ ಯಶಸ್ವಿಯಾದರೆ ತುಂಗಭದ್ರಾ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯವನ್ನು ಶೇ.25ರಿಂದ 30ರಷ್ಟು ಹೆಚ್ಚಿಸಬಹುದಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ವರ್ಷಕ್ಕೆ ಒಂದರ ಬದಲು ಎರಡು ಬೆಳೆ**

**ರೈತರಿಗೆ ಹೆಚ್ಚಿನ ನೀರು ಲಭ್ಯವಾದರೆ, ಅವರು ವರ್ಷಕ್ಕೆ ಒಂದರ ಬದಲು ಎರಡು ಬೆಳೆಗಳನ್ನು ತೆಗೆಯಲು ಸಾಧ್ಯವಾಗುತ್ತದೆ ಮತ್ತು ಇದರಿಂದ ಅವರ ಆದಾಯವೂ ದ್ವಿಗುಣಗೊಳ್ಳುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.**

**ಅಂತಾರಾಜ್ಯ ಸಹಕಾರಕ್ಕೆ ಶ್ಲಾಘನೆ:** ಹಿಂದೆ ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳ ನಡುವೆ ನೀರು ಹಂಚಿಕೆ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಆದರೆ ಇಂದು ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಒಂದೇ ವೇದಿಕೆಗೆ ಬಂದು ಒಗ್ಗಟ್ಟು ಪ್ರದರ್ಶಿಸಿರುವುದನ್ನು ಸಚಿವರು ಮುಕ್ತಕಂಠದಿಂದ ಶ್ಲಾಘಿಸಿದರು. ಯಾವುದೇ ಆಕ್ಷೇಪಣೆಗಳಿಲ್ಲದೆ, ಪರಸ್ಪರ ಸಹಕಾರ ಹಾಗೂ ಆರ್ಥಿಕ ನೆರವು ನೀಡಿದ್ದರಿಂದಲೇ ತುಂಗಭದ್ರಾ ಜಲಾಶಯಕ್ಕೆ ಕೇವಲ ಕೆಲವೇ ದಿನಗಳಲ್ಲಿ ನೂತನ ಗೇಟುಗಳನ್ನು ಅಳವಡಿಸಲು ಸಾಧ್ಯವಾಯಿತು ಎಂದು ಅವರು ಸ್ಮರಿಸಿದರು.

**ನೀರಿನ ಸದ್ಬಳಕೆಯಿಂದ ರೈತರ ಆದಾಯ ವೃದ್ಧಿ:** ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯಂತೆ ದೇಶವನ್ನು ರಸ್ತೆಗಳ ಮೂಲಕ ಹೇಗೆ ಜೋಡಿಸಲಾಗುತ್ತಿದೆಯೋ, ಅದೇ ರೀತಿ ನೀರಿನ ಯೋಜನೆಗಳ ಮೂಲಕವೂ ಇಡೀ ದೇಶವನ್ನು ಬೆಸೆಯಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

# ವಿಶೇಷ ಚೇತನರ ಅನುದಾನ ಸಮರ್ಪಕ ಬಳಕೆಗೆ ಸೂಚನೆ

• **ಉದಯವಾಹಿನಿ, ವಿಜಯಪುರ**

ಸರ್ಕಾರಿ ಹಾಗೂ ಅರೆ ಸರ್ಕಾರಿ ಕಚೇರಿಗಳಲ್ಲಿ ವಿಶೇಷ ಚೇತನರಿಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ, ಅವರಿಗಾಗಿ ಮೀಸಲಿರುವ ಶೇ.5ರಷ್ಟು ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಅವರು ಅಧಿಕಾರಿಗಳಿಗೆ ಸೂಚಿಸಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವಿಶೇಷ ಚೇತನರ ಕುಂದು-ಕೊರತೆಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿವಿಧ ಇಲಾಖೆಗಳ ಮೂಲಕ ವಿಶೇಷ ಚೇತನರಿಗೆ ದೊರೆಯುವ ಸೌಲಭ್ಯಗಳು ಮತ್ತು ಯೋಜನೆಗಳ ಅನುಷ್ಠಾನದ ಪ್ರಗತಿಯನ್ನು ಪರಿಶೀಲಿಸಿದರು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವತಿಯಿಂದ ನೀಡಲಾಗುವ ವಿಶೇಷ ಚೇತನರ ಬಸ್‌ಪಾಸ್ ವಿತರಣೆಯನ್ನು ಮತ್ತಷ್ಟು ಸರಳೀಕರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಅವರು, ಮಹಾನಗರ ಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರ ಸೇರಿದಂತೆ ಎಲ್ಲಾ ಇಲಾಖೆಗಳ ಕಚೇರಿಗಳ ಸೂಚನಾ ಫಲಕಗಳಲ್ಲಿ ಶೇ.5ರ ಅನುದಾನ ಮತ್ತು ಸೌಲಭ್ಯಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಗೋಚರಿಸುವಂತೆ ಪ್ರದರ್ಶಿಸಲು ನಿರ್ದೇಶನ ನೀಡಿದರು.

ಮಾಸಾಶನ (ಪಿಂಚಣಿ) ಸಂಬಂಧಿತ ಬಾಕಿ ಪ್ರಕರಣಗಳನ್ನು ಒಂದು ವಾರದೊಳಗೆ ವಿಲೇವಾರಿ ಮಾಡಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ತಲುಪುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಸರ್ಕಾರಿ ಬಸ್‌ಗಳಲ್ಲಿ ವಿಶೇಷ ಚೇತನರಿಗೆ ದೊರೆಯುವ ಪ್ರಯಾಣ ಸೌಲಭ್ಯಗಳ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ವಿಶೇಷ ಚೇತನರ ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಉದ್ಯೋಗಾವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸಂಬಂಧಿತ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

# ಶಾರುಖ್ ಖಾನ್ ಭೇಟಿ: ವಿಮಾನ ನಿಲ್ದಾಣದಲ್ಲಿ ಅದ್ದೂರಿ ಸ್ವಾಗತ

• **ಉದಯವಾಹಿನಿ, ಮಂಗಳೂರು:**



ಉದಯವಾಹಿನಿ ಚಿತ್ರ

ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಲು ಬಾಲಿವುಡ್ ಸೂಪರ್‌ಸ್ಟಾರ್, 'ಕಿಂಗ್ ಖಾನ್' ಶಾರುಖ್ ಖಾನ್ ಅವರು ಇಂದು ಮಂಗಳೂರಿಗೆ ಭೇಟಿ ನೀಡಿದ್ದಾರೆ. ನಟನನ್ನು ನೋಡಲು ಅಭಿಮಾನಿಗಳು ಏರ್‌ಪೋರ್ಟ್‌ನಲ್ಲಿ ಜಮಾಯಿಸಿದ್ದರು.

ಕರಾವಳಿ ಕರ್ನಾಟಕದ ರಿಯಲ್ ಎಸ್ಟೇಟ್ ಸಂಸ್ಥೆಯಾದ 'ರೋಹನ್ ಕಾರ್ಪೊರೇಷನ್'ನ ಬ್ರ್ಯಾಂಡ್ ಅಂಬಾಸಿಡರ್ ಆಗಿರುವ ಶಾರುಖ್ ಖಾನ್ ಅವರಿಗಾಗಿ ಕಾರ್ಯಕ್ರಮ ಆಯೋಜಿಸಲಾಗಿದ್ದು, ಇದರಲ್ಲಿ ಭಾಗವಹಿಸಲು ಅವರು ನಗರಕ್ಕೆ ಬಂದಿಳಿದಿದ್ದಾರೆ.

**ವಿಮಾನ ನಿಲ್ದಾಣಕ್ಕೆ ಆಗಮನ, ಅಭಿಮಾನಿಗಳ ಹರ್ಷೋದ್ಗಾರ:** ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್‌ನಿಂದ ಶಾರುಖ್ ಖಾನ್ ಅವರು ಹೊರಬರುತ್ತಿದ್ದಂತೆ, ಅಲ್ಲಿ ನೆರೆದಿದ್ದ ನೂರಾರು ಅಭಿಮಾನಿಗಳು ಒಮ್ಮೆಲೇ ಹರ್ಷೋದ್ಗಾರ ಮಾಡಿದರು. ಕಪ್ಪು ಟೀ-ಶರ್ಟ್, ಕಂದು ಬಣ್ಣದ ಜಾಕೆಟ್, ಕಪ್ಪು ಕ್ಯಾಪ್ ಹಾಗೂ ಸನ್‌ಗ್ಲಾಸ್ ಧರಿಸಿ ಸ್ಟೈಲಿಶ್ ಲುಕ್‌ನಲ್ಲಿ ಕಿಂಗ್ ಖಾನ್ ಕಾಣಿಸಿಕೊಂಡರು. ತಮ್ಮನ್ನು ನೋಡಲು ನೆರೆದಿದ್ದ ಅಭಿಮಾನಿಗಳತ್ತ ಕೈಬೀಸುತ್ತಾ ಮತ್ತು ಕೈ ಮುಗಿಯುತ್ತಾ ಸ್ವಾಗತವನ್ನು ಸ್ವೀಕರಿಸಿದರು. ವಿಮಾನ ನಿಲ್ದಾಣದ ಆವರಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಹಾಗೂ ಖಾಸಗಿ ಭದ್ರತಾ ಸಿಬ್ಬಂದಿಯ ಕಾವಲು ಆಯೋಜಿಸಲಾಗಿತ್ತು.

ಅತ್ಯಂತ ಸುರಕ್ಷಿತವಾಗಿ ನಟನನ್ನು ನಿಲ್ದಾಣದಲ್ಲಿ ಸಿದ್ಧವಾಗಿದ್ದ ಐಷಾರಾಮಿ ಕಾರಿನವರೆಗೆ ಕರೆದೊಯ್ಯಲಾಯಿತು.

# ಸಾಗರದಲ್ಲಿ ಆರು ಸಾವಿರ ಸಸಿಗಳ ನಾಶ; ಭೂಕಬಳಿಕೆದಾರರ ವಿರುದ್ಧ ಆಕ್ರೋಶ

• **ಉದಯವಾಹಿನಿ, ಸಾಗರ:**

ತಾಲ್ಲೂಕಿನ ತಾಳಗುಪ್ಪ ಹೋಬಳಿಯ ಕೆ.ಜಿ.ಕೊಪ್ಪ ಗ್ರಾಮದಲ್ಲಿ ಅರಣ್ಯ ಇಲಾಖೆ ನೆಟ್ಟಿದ್ದ ಆರು ಸಾವಿರ ಸಸಿಗಳನ್ನು ಭೂಕಬಳಿಕೆದಾರರು ಕಿತ್ತಿರುವ ಪ್ರಕರಣವನ್ನು ಖಂಡಿಸಿ ರೈತ ಸಂಘದ ಕಾರ್ಯಕರ್ತರು ಇಲ್ಲಿನ ಉಪವಿಭಾಗಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಕಿತ್ತಿರುವ ಕೆಲವು ಸಸಿಗಳನ್ನು ತಂದು ಉಪವಿಭಾಗಾಧಿಕಾರಿ ಕಚೇರಿ ಎದುರು ಸುರಿಯುವ ಮೂಲಕ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. ಸಸಿ ಕಿತ್ತವರ ಮೇಲೆ ಕೂಡಲೇ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

'ಅರಣ್ಯ ಇಲಾಖೆಗೆ ಹಾಗೂ ಸರ್ಕಾರಕ್ಕೆ ಸೇರಿದ ಭೂಮಿಯಲ್ಲಿ ನೆಟ್ಟ ಆರು ಸಾವಿರ ಗಿಡಗಳನ್ನು ಕಡಿಯಲು ಧೈರ್ಯ ಬರುತ್ತದೆ ಎಂದರೆ ಅಂತವರಿಗೆ ರಾಜಕಾರಣಿಗಳ ಬೆಂಬಲ ಇದೆ ಎಂದರ್ಥ. ಕೆ.ಜಿ. ಕೊಪ್ಪ ಗ್ರಾಮದಲ್ಲಿ ಭೂ ಕಬಳಿಕೆದಾರರಿಗೆ ಶಾಸಕರೊಬ್ಬರ ಬೆಂಬಲ ಇರುವುದರಿಂದ ಈ ದುಷ್ಕೃತ್ಯ ನಡೆದಿದೆ' ಎಂದು ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ದಿನೇಶ್ ಶಿರವಾಳ ಆರೋಪಿಸಿದರು. ಈ ಹಿಂದೆ ಕೆ.ಜಿ. ಕೊಪ್ಪ ಗ್ರಾಮದಲ್ಲಿ ಸರ್ಕಾರಿ ಭೂಮಿಯನ್ನು ಕೆಲವು ವ್ಯಕ್ತಿಗಳು ಅತಿಕ್ರಮಣ ಮಾಡಿದಾಗ ಗ್ರಾಮಸ್ಥರು ದೂರು ನೀಡಿದ್ದರು. ರೈತ ಸಂಘದ ವತಿಯಿಂದ ಪ್ರತಿಭಟನೆಯೂ ನಡೆದಿತ್ತು. ಆದಾಗ್ಯೂ, ತಾಲ್ಲೂಕು ಆಡಳಿತ ಅತಿಕ್ರಮಣಕಾರರ ವಿರುದ್ಧ ಕ್ರಮ ಕೈಗೊಳ್ಳದ ಕಾರಣ ಸರ್ಕಾರದ ಇಲಾಖೆ ನೆಟ್ಟ ಗಿಡಗಳನ್ನು ಕೀಳುವ ಧೈರ್ಯ ಅವರಿಗೆ ಬಂದಿದೆ' ಎಂದು ದೂರಿದರು.



ಉದಯವಾಹಿನಿ ಚಿತ್ರ

ಅರಣ್ಯ, ಕಂದಾಯ, ಪೊಲೀಸ್ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದ ಕೆ.ಜಿ. ಕೊಪ್ಪ ಗ್ರಾಮದಲ್ಲಿ ಭೂ-ಕಬಳಿಕೆ ದಾರರ ಅಟ್ಟಹಾಸ ಮುಂದುವರಿದಿದೆ.


ಸರ್ಕಾರಿ ಅಧಿಕಾರಿಗಳಿಗೆ ಸರ್ಕಾರಿ ಭೂಮಿಯನ್ನು, ಸರ್ಕಾರವೇ ನೆಟ್ಟ ಗಿಡಗಳನ್ನು ಉಳಿಸಿಕೊಳ್ಳುವ ಮನಸ್ಸು ಇಲ್ಲದಿರುವುದು ಆಡಳಿತ ವ್ಯವಸ್ಥೆ ಕುಸಿದಿರುವ ಸಂಕೇತವಾಗಿದೆ' ಎಂದು ಟೀಕಿಸಿದರು.

'ಆರು ಸಾವಿರ ಕಾಡು ಜಾತಿಯ ಗಿಡಗಳನ್ನು ನಾಶ ಮಾಡಿದ್ದಾರೆ ಎಂದರೆ ಸರ್ಕಾರಕ್ಕೆ ಕನಿಷ್ಠ 7 ಲಕ್ಷ ನಷ್ಟವಾದಂತೆ. ಔಷಧೀಯ ಗುಣಗಳುಳ್ಳ ಅಪರೂಪದ ಸಸಿಗಳನ್ನು ಕೂಡ ನಾಶ ಮಾಡಲಾಗಿದ್ದು, ಪರಿಸರಕ್ಕೆ ಉಂಟಾಗಿರುವ ಹಾನಿಯನ್ನು ಹಣದ ರೂಪದಲ್ಲಿ ಅಳೆಯಲು ಸಾಧ್ಯವಿಲ್ಲ. ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು' ಎಂದು ಪರಿಸರ ಕಾರ್ಯಕರ್ತ ಅಖಿಲೇಶ್ ಚಿಪ್ಪಿ ಆಗ್ರಹಿಸಿದರು.

# ಸರ್ಕಾರಿ ಶಾಲಾ ಕೊಠಡಿಗಳ ದುರಸ್ತಿಗೆ ಕ್ರಮ

• **ಉದಯವಾಹಿನಿ, ನರಗುಂದ, :**

ನರಗುಂದ ತಾಲ್ಲೂಕು ಉಸ್ತುವಾರಿ ಕಾರ್ಯದರ್ಶಿಗಳಾದ ರಮೇಶ ಕಳಸದ ಅವರ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಾಲ್ಲೂಕಿನ ಸರ್ಕಾರಿ ಶಾಲೆಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳ ದುರಸ್ತಿಗೆ ಕ್ರಮ ಕೈಗೊಳ್ಳುವಂತೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಈ ಹಿನ್ನೆಲೆಯಲ್ಲಿ ನರಗುಂದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಧರ್ ಚಿನಗುಂಡಿ ಅವರು ಸುರಕೋಡ, ಹದಲಿ, ರೆಡ್ಡರನಾಗನೂರು ಹಾಗೂ ಶಿರೋಳ ಗ್ರಾಮದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಭೇಟಿ ವೇಳೆ ಶಾಲೆಗಳ ಹಾನಿಗೊಳಗಾದ ಕೊಠಡಿಗಳನ್ನು ಪರಿಶೀಲಿಸಿದ ಅವರು, ಮಳೆಗಾಲದ ಸಂದರ್ಭದಲ್ಲಿ ಶಾಲಾ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆ ಉಂಟಾಗುತ್ತಿದೆಯೇ ಹಾಗೂ ಕೊಠಡಿಗಳ ಸುರಕ್ಷತಾ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಮಕ್ಕಳ ಕಲಿಕಾ ಹಿತದೃಷ್ಟಿಯಿಂದ ಶಾಲಾ ಕೊಠಡಿಗಳ ಸುರಕ್ಷತೆ ಕುರಿತು ಶಾಲಾ ಮುಖ್ಯೋಪಾಧ್ಯಾಯರಿಂದ ವಿವರಗಳನ್ನು ಪಡೆದುಕೊಂಡರು. ಇದೇ ವೇಳೆ ಶಿಕ್ಷಕರ ಹಾಜರಾತಿ ಪುಸ್ತಕ, ವಿದ್ಯಾರ್ಥಿಗಳ ಒಟ್ಟು ಹಾಜರಾತಿ ಹಾಗೂ ಶಾಲೆಗೆ ಹಾಜರಾದ ಮಕ್ಕಳ ಸಂಖ್ಯೆಯನ್ನು ಪರಿಶೀಲಿಸಿದರು. ಶಿಕ್ಷಕರು ತಮ್ಮ ಚಲನವಲನ ನೋಂದಣಿ (ಮೂವ್ಮೆಂಟ್ ರಿಜಿಸ್ಟರ್)ಯನ್ನು ನಿಯಮಿತವಾಗಿ ನವೀಕರಿಸಿಕೊಂಡು ಇರಬೇಕೆಂದು ಸೂಚಿಸಿದರು.ಶಾಲಾ ಅಡುಗೆ ಸಿಬ್ಬಂದಿ ಅವರ ಜೊತೆ ಸಮಾಲೋಚನೆ ನಡೆಸಿದ ಇಓ ಅವರು ಬಿಸಿಯೂಟ ನಿರ್ವಹಣೆಯ ನಮೂನೆ-3 ರಜಿಸ್ಟರ್ ನ್ನು ಪರಿಶೀಲಿಸಿದರು.



ಉದಯವಾಹಿನಿ ಚಿತ್ರ

**ರೆಡ್ಡರ ನಾಗನೂರು ಗ್ರಾಮದ ಸೀತಮ್ಮ ದೊಡ್ಡನಗೌಡ್ರ ಪ್ರೌಢ ಶಾಲೆಯ ಅಡುಗೆ ಸಿಬ್ಬಂದಿ ನಮೂನೆ-3 ರಜಿಸ್ಟರ್ ಅಪಡೇಟ್ ಮಾಡದೇ ಇರುವುದು ಇಓ ಅವರ ಗಮನಕ್ಕೆ ಬಂತು. ಅಕ್ಷರ ದಾಸೋಹದ ಸಹಾಯಕ ನಿರ್ದೇಶಕರಿಗೆ ದೂರವಾಣಿ ಕರೆ ಮಾಡಿ ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ ಅಡುಗೆ ಸಿಬ್ಬಂದಿಗಳು ನಿರ್ವಹಿಸುವ ನಮೂನೆ-3 ರಿಜಿಸ್ಟರ್ ನ್ನು ಅಪಡೇಟ್ ಗೊಳಿಸಲು ಕ್ರಮವಹಿಸಿ ಅಂತ ತಿಳಿಸಿದರು.**

# ಶಂಕಿತ ಉಗ್ರ ಸುಹೇಲ್‌ನನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಿದ ನ್ಯಾಯಾಲಯ

• **ಉದಯವಾಹಿನಿ, ದಾವಣಗೆರೆ :**

ಹರಿಹರದ ಬನ್ನಿಕೋಡು ಗ್ರಾಮದಲ್ಲಿ ಸಿಕ್ಕ ಉತ್ತರ ಪ್ರದೇಶ ಮೂಲದ ಶಂಕಿತ ಉಗ್ರ ಸುಹೇಲ್‌ನನ್ನು ನ್ಯಾಯಾಲಯವು 10 ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿದ ಹಿನ್ನೆಲೆ ಪೊಲೀಸರು ಆತನನ್ನು ಹರಿಹರ ಗ್ರಾಮಾಂತರ ಠಾಣೆಗೆ ಕರೆತಂದಿದ್ದಾರೆ.ಪೊಲೀಸ್ ಕಸ್ಟಡಿಗೆ ಒಪ್ಪಿಸುವ ಮುನ್ನ ಪೊಲೀಸರು ಮೆಡಿಕಲ್ ಟೆಸ್ಟ್ ಮಾಡಿಸಿದ್ದಾರೆ. ನಿನ್ನೆ ವೈದ್ಯಕೀಯ ಪರೀಕ್ಷೆ ಮಾಡಿಸಿ ಪೊಲೀಸರು ಕೋರ್ಟ್‌ಗೆ ಹಾಜರುಪಡಿಸಿದ್ದರು.

ಹರಿಹರ ಗ್ರಾಮಾಂತರ ಠಾಣೆಗೆ ಎ ಟಿ ಯು ಹಾಗೂ ಎನ್ಐ ಎ ಎರಡು ಟೀಂಗಳಿಂದ ನಾಲ್ಕು ಜನ ಅಧಿಕಾರಿಗಳು ಆಗಮಿಸಿದ್ದಾರೆ. ಪಾಕಿಸ್ತಾನದ ಉಗ್ರ ಸಂಘಟನೆಗಳ ಜೊತೆ ಸುಹೇಲ್ ನಿರಂತರವಾಗಿ ಸಂಪರ್ಕದಲ್ಲಿದ್ದ. ಹೀಗಾಗಿ, ಆತನನ್ನು ತೀವ್ರ ವಿಚಾರಣೆ ನಡೆಸಲಿದ್ದಾರೆ ಎಂದು ವರದಿಯಾಗಿದೆ.ಎರಡು ತನಿಖಾ ಸಂಸ್ಥೆಗಳು ಜಂಟಿಯಾಗಿ ವಿಚಾರಣೆ ನಡೆಸುವ ಸಾಧ್ಯತೆ ಇದೆ. ರಾಷ್ಟ್ರೀಯ ತನಿಖಾ ತಂಡಗಳು ಮತ್ತಷ್ಟು ಮಾಹಿತಿ ಕಲೆ ಹಾಕಲಿವೆ. ದಾವಣಗೆರೆ ಪೊಲೀಸರು ರಾಷ್ಟ್ರೀಯ ತನಿಖಾ ತಂಡಗಳಿಗೆ ಸಾಥ್ ನೀಡಲಿದ್ದಾರೆ.

# ಆಧಾರ್ ಸೇವಾ ಕೇಂದ್ರವನ್ನು ಜಿಲ್ಲಾಧಿಕಾರಿ ಉದ್ಘಾಟಿಸಿದರು

• **ಉದಯವಾಹಿನಿ, ಬೆಳಗಾವಿ:**

ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (ಯುಐಡಿಎಐ) ವತಿಯಿಂದ ಬೆಳಗಾವಿಯಲ್ಲಿ ಸ್ಥಾಪಿಸಲಾದ ಆಧಾರ್ ಸೇವಾ ಕೇಂದ್ರವನ್ನು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಉದ್ಘಾಟಿಸಿದರು.

ಸಾರ್ವಜನಿಕರ ದೂರುಗಳ ತ್ವರಿತ ಪರಿಹಾರ ಹಾಗೂ ಗುಣಮಟ್ಟದ ಸೇವೆ ಒದಗಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಸೂಚಿಸಿದರು. ಅಲ್ಲದೆ, ಆಧಾರ್ ಸೇವಾ ಕೇಂದ್ರದಲ್ಲಿ ಲಭ್ಯವಿರುವ ಸೌಲಭ್ಯಗಳು ಹಾಗೂ ಸೇವೆಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು. ಯುಐಡಿಎಐ ಉಪನಿರ್ದೇಶಕಿ ಸಿರಿ ಆನಂದ್ ವಿ. ಆಧಾರ್ ಸೇವಾ ಕೇಂದ್ರದಲ್ಲಿ ಲಭ್ಯವಿರುವ ವಿವಿಧ ಸೇವೆಗಳ ಕುರಿತು ಮಾಹಿತಿ ನೀಡಿದರು. ಯುಐಡಿಎಐ ವ್ಯವಸ್ಥಾಪಕ ಮೊಹಮ್ಮದ್ ಮುಸಾಬ್ ಅವರು ಆನ್‌ಲೈನ್ ಮೂಲಕ ಅಪಾಯಿಂಟ್‌ಮೆಂಟ್ ಕಾಯ್ದಿರಿಸುವ ವಿಧಾನ ಹಾಗೂ ಹೊಸ ಆಧಾರ್ ಅಪ್ಲಿಕೇಶನ್‌ನ ವೈಶಿಷ್ಟ್ಯಗಳನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಮೊದಲಿಗೆ ಮೊಹಮ್ಮದ್ ರೋಷನ್ ಅವರ ಆಧಾರ್ ಬಯೋಮೆಟ್ರಿಕ್ ಮಾಹಿತಿಯ ನೇರ ನವೀಕರಣ ಪ್ರಕ್ರಿಯೆ ನಡೆಸಲಾಯಿತು. ಜೊತೆಗೆ ಆಧಾರ್ ನೋಂದಣಿ ಮತ್ತು ನವೀಕರಣ ಪ್ರಕ್ರಿಯೆಯ ಪ್ರಾತ್ಯಕ್ಷಿಕೆಯನ್ನು ಸಹ ಪ್ರದರ್ಶಿಸಲಾಯಿತು. ಕ್ಲಸ್ಟರ್ ವ್ಯವಸ್ಥಾಪಕ ಶ್ಯಾಮ್ ಸುಂದರ್, ಬಿಎಲ್‌ಎಸ್ ಇಂಟರ್‌ನ್ಯಾಷನಲ್ ಸರ್ವಿಸಸ್ ಲಿಮಿಟೆಡ್‌ನ ಆಧಾರ್ ಸೇವಾ ಕೇಂದ್ರ ವ್ಯವಸ್ಥಾಪಕಿ ಸ್ವಾತಿ ಕೋಟಬಾಗಿ, ಜಿಲ್ಲಾ ಆಧಾರ್ ಸಲಹೆಗಾರ ವಿನೋದ್ ಹಾಗೂ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

# ಹುಡದಳ್ಳಿ ಕೆರೆಯು ಅಭಿವೃದ್ಧಿಪಡಿಸಿ ರೈತರ ಬದುಕಿಗೆ ಜೀವದಾನ ನೀಡಿ

• **ಉದಯವಾಹಿನಿ,ಚಿಂಚೋಳಿ:**

ತಾಲ್ಲೂಕಿನ ಮಾಜಿ ಮುಖ್ಯಮಂತ್ರಿ ದಿ.ವೀರೇಂದ್ರ ಪಾಟೀಲ್ ಅವರ ಹುಟ್ಟೂರಾದ ಹುಡದಳ್ಳಿ ಗ್ರಾಮದ ಕೆರೆಯು ಅಭಿವೃದ್ಧಿಪಡಿಸಿ ರೈತರ ಬದುಕಿಗೆ ಜೀವದಾನವಾಗಬೇಕು ಹಾಗೂ ಮುಖ್ಯಮಂತ್ರಿಗಳಾದ ಡಿಕೆ ಶಿವಕುಮಾರ ಅವರಿಗೆ ರಾಜಕೀಯ ಮುನ್ನುಡಿ ಬರೆದ ದಿ.ವೀರೇಂದ್ರ ಪಾಟೀಲ್‌ರ ಹುಟ್ಟೂರು ಹುಡದಳ್ಳಿ ಗ್ರಾಮ ದತ್ತು ಪಡೆದು ಸಂಪೂರ್ಣವಾಗಿ ಅಭಿವೃದ್ಧಿಪಡಿಸಬೇಕು ಎಂದು ಯುವ ಹೋರಾಟಗಾರ ಎಂಪಿ ಗೋಪಾಲ ಸರ್ಕಾರಕ್ಕೆ ಒತ್ತಾಯಿಸಿದರು.

ತಾಲ್ಲೂಕಿನ ಹುಡದಳ್ಳಿ ಗ್ರಾಮದಲ್ಲಿ ಕೆರೆ ಅಭಿವೃದ್ಧಿ ಸೇರಿದಂತೆ ಮೂಲಭೂತ ಸೌಕರ್ಯ ಒದಗಿಸುವಂತೆ ರೈತರು ಹೋರಾಟಗಾರರು ಸಣ್ಣ ನೀರಾವರಿ ಇಲಾಖೆ ಎದುರು ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿಪತ್ರ ಸಲ್ಲಿಸಿ ಮಾತನಾಡಿದ ಅವರು,ಹುಡದಳ್ಳಿ ಗ್ರಾಮದಲ್ಲಿ ಸಾಮೂಹಿಕ ಶೌಚಾಲಯ ನಿರ್ಮಿಸಬೇಕು,ಸರ್ಕಾರಿ ಶಾಲೆ ಸ್ಮಾರ್ಟ ಡಿಜಿಟಲ್ ಅಭಿವೃದ್ಧಿ ಪಡಿಸಬೇಕು,ಶಾಶ್ವತ ಕುಡಿಯುವ ನಿರಿನ ಸಮಸ್ಯೆ ಪರಿಹರಿಸಬೇಕು,ನಾಗರಾಳ ಜಲಾಶಯ ಮತ್ತು ಚಂದ್ರಂಪಳ್ಳಿ ಜಲಾಶಯಗಳಿಗೆ ವೀರೇಂದ್ರ ಪಾಟೀಲ್ ಹೆಸರು ನಾಮಕರಣ ಮಡಬೇಕು.



ಉದಯವಾಹಿನಿ ಚಿತ್ರ


ವಯೋವೃದ್ದರ,ವಿಧವೆಯರ ವಿಕಲಚೇತನರ ಪಿಂಚಣಿ ಹಣ ಬಿಡುಗಡೆಗೋಳಿಸಬೇಕು,ಕಸ್ಕೋಟ ಸಸ್ಯರೋಗಕ್ಕೆ ಹೈದರಾಬಾದ ವಿಜ್ಞಾನಿಗಳ ವರದಿ ಅನುಮೋದಿಸಿ ಔಷದಿ ನೀಡಬೇಕು,ಚಂದಾಪೂರದ ಉದ್ಯಾನವನ ಅಭಿವೃದ್ಧಿಪಡಿಸಬೇಕು,ಕಲಬುರ್ಗಿ ನಗರ ಪಾಲಿಕೆ ಎದುರು ವೀರೇಂದ್ರ ಪಾಟೀಲ್ ಮೂರ್ತಿ ಸ್ಥಾಪಿಸಬೇಕು.

ಹುಡದಳ್ಳಿ ಕೆರೆಯ ಎಡ,ಬಲ ಭಾಗದ ಸಂಪೂರ್ಣ ನಾಲ್ಕು ಕಿಮೀ.ರವರೆಗೆ ಹುಳ್ಳೆತ್ತಿ ಗಿಡ ಗಂಟೆಗಳನ್ನು ಸ್ವಚ್ಚತೆಗೋಳಿಸಿ ಸಮರ್ಪಕವಾಗಿ ರೈತರ ಹೊಲಗಳಿಗೆ ನೀರು ಮುಟ್ಟುವಂತೆ ಮಾಡಬೇಕು,ಹುಡದಳ್ಳಿ ಮತ್ತು ಗಾರಂಪಳ್ಳಿ ಗ್ರಾಮಗಳ ಮೂಲಭೂತ ಸೌಕರ್ಯಗಳು ಒದಗಿಸಬೇಕು,ಹುಡದಳಿ ಗ್ರಾಮದಲ್ಲಿ ವೀರೇಂದ್ರ ಪಾಟೀಲ್ ಹೆಸರಲ್ಲಿ ಭವ್ಯ ಸ್ಮಾರಕ ಮತ್ತು ವಸ್ತು ಸಂಗ್ರಾಲಯ ಸ್ಥಾಪನೆ ಮಾಡಬೇಕು,ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆ ಮಾಡಬೇಕು ಎಂದು ಗೋಪಾಲ ಎಂ ಪಿ ಆಗ್ರಹಿಸಿದರು.

# ಮನಸೆಳೆದ ಗಾನಸುಧೆ, ಸಾಂಸ್ಕೃತಿಕ ಸಂಭ್ರಮ

• **ಉದಯವಾಹಿನಿ, ಸಂಕೇಶ್ವರ:**

ಇಳಿ ಸಂಜೆ ಹೊತ್ತಿನಲ್ಲಿ ಸೂರ್ಯ ಇಳಿಯುತಿದ್ದಂತೆ ಕಲಾವಿದರ ಧ್ವನಿಯಿಂದ ಏರಿದ ಸಂಗೀತವು ಜನ ಮನ ಸೆಳೆಯಿತು. ಬಾಲಕರು, ಯುವಕರು, ಯುವತಿರಯರು, ಮಧ್ಯ ವಯಸ್ಕರು, ವಯೋವೃದ್ಧರು ತಮ್ಮ ರಾಗ, ತಾಳಗಳ ಮೂಲಕ ಹಾಡುಗಳನ್ನು ಹಾಡಿ ಪ್ರೇಕ್ಷಕರ ಮನವನ್ನು 4 ತಾಸುಗಳ ಕಾಲ ಮುಗ್ಧಗೊಳಿಸಿದರು. ಸಂಕೇಶ್ವರದ ಅಕ್ಕಮಹಾದೇವಿ ಕಲಾ, ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಇಲ್ಲಿನ ದುರುದುಂಡೀಶ್ವರ ಸಾಂಸ್ಕೃತಿಕ ಭವನದಲ್ಲಿ ಸಂಘಟಿಸಿದ್ದ ಗಾನಸುಧೆ ಕಾರ್ಯಕ್ರಮದಲ್ಲಿ ಕಂಡು ಬಂದ ದೃಶ್ಯವಿದು.



ಉದಯವಾಹಿನಿ ಚಿತ್ರ

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಸಾಹಿತಿ ಅಕಬರ ಸನದಿ ಅವರು ಮಾತನಾಡಿ, ಮೋಬೈಲ ಗೀಳಿಗೆ ಬಿದ್ದು ಕನ್ನಡ ನಾಡಿನ ಐತಿಹಾಸಿಕ ಮಹತ್ವ, ಸಾಹಿತ್ಯ, ಸಂಸ್ಕೃತಿ, ಕಲೆಗಳಿಂದ ದೂರವಾಗುತ್ತಿರುವ ಮಕ್ಕಳು ಹಾಗೂ ಯುವಕ-ಯುವತಿಯರಿಗೆ ಅವುಗಳನ್ನು ತಿಳಿಸಲು ಗಾನ ಸುಧೆಯಂಥ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವಾಗಬಲ್ಲವು. ಇಂಥ ಕಾರ್ಯಕ್ರಮಗಳು ಆಗಾಗ ಜರುಗಲಿ ಎಂದರು.

# ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಗಾಗಿ ಸಿಎಂ, ರಾಜ್ಯಪಾಲರನ್ನು ಭೇಟಿಯಾದ ಸಂಸದ

## ಸಿಎಂ ಡಿಕೆಶಿ ಮತ್ತು ರಾಜ್ಯಪಾಲರ ಬಳಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಗೆ ಮನವಿ ಸಲ್ಲಿಸಿದ್ದಾರೆ.

• **ಉದಯವಾಹಿನಿ ಶಿವಮೊಗ್ಗ:**

ಜಿಲ್ಲೆಯಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಗೆ ಆಗ್ರಹಿಸಿ ಶಿವಮೊಗ್ಗ ಲೋಕಾಸಭಾ ಕ್ಷೇತ್ರದ ಸಂಸದ ಬಿ.ವೈ. ರಾಘವೇಂದ್ರ ಅವರು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬುಧವಾರ ಭೇಟಿ ಮಾಡಿ ಒತ್ತಾಯ ಮಾಡಿದ್ದಾರೆ.

**1 : ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್**
**2 : ಕರ್ನಾಟಕದ ದಾವೆದಾರರ ಹಿತಾಸಕ್ತಿ**
**3 : ರೈತರ ಮೇಲೆ ಪ್ರತಿಕೂಲ ಪರಿಣಾಮ**

ಶಿವಮೊಗ್ಗ ಜಿಲ್ಲೆಯು ಹೈಕೋರ್ಟ್ ಸರ್ಕ್ಯೂಟ್‌ಪೀಠಕ್ಕೆ ಎಲ್ಲಾ ರೀತಿಯಲ್ಲೂ ಅರ್ಹವಾಗಿದೆ.ರಾಜ್ಯಪಾಲರು ಮಧ್ಯಪ್ರವೇಶ ಮಾಡಬೇಕು. ಶಿವಮೊಗ್ಗದಲ್ಲಿ ಸರ್ಕ್ಯೂಟ್ ಪೀಠ ಸ್ಥಾಪನೆಯಾಗುವವರೆಗೆ ಶಿವಮೊಗ್ಗವನ್ನು ಬೆಂಗಳೂರಿನ ಪ್ರಧಾನ ಪೀಠದಡಿಯಲ್ಲಿ ಉಳಿಸಿಕೊಳ್ಳುವಂತೆ ಸಂಸದರು ಒತ್ತಾಯಿಸಿದ್ದಾರೆ.

ಸರ್ಕ್ಯೂಟ್ ಪೀಠಕ್ಕೆ ಶಿವಮೊಗ್ಗ ಭೌಗೋಳಿಕ ಅನುಕೂಲ ಮತ್ತು ಮಧ್ಯ ಕರ್ನಾಟಕದ ಪ್ರಮುಖ ಆಡಳಿತ, ಶೈಕ್ಷಣಿಕ, ವಾಣಿಜ್ಯ ಮತ್ತು ಸಾರಿಗೆ ಕೇಂದ್ರವಾಗಿ ಜಿಲ್ಲೆ ಹೊರಹೊಮ್ಮಿದೆ. ಸರ್ಕ್ಯೂಟ್ ಪೀಠ ಸ್ಥಾಪನೆಯಿಂದ ಜಿಲ್ಲೆಯ ಜನರಿಗೆ ಮಾತ್ರವಲ್ಲದೇ ಚಿಕ್ಕಮಗಳೂರು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳು ಸೇರಿದಂತೆ ಮಲೆನಾಡು ಮತ್ತು ಮಧ್ಯ ಕರ್ನಾಟಕ ಪ್ರದೇಶದ ಜನರಿಗೆ ಹಾಗೂ ನ್ಯಾಯಕ್ಕೆ ವಲಯಕ್ಕೆ ಹೆಚ್ಚಿನ ಅನುಕೂಲವಾಗಲಿದೆ. ಇದರಿಂದಾಗಿ ನ್ಯಾಯ ಪ್ರಾಪ್ತಿಯ ಜನರ ಹಕ್ಕು ಹೆಚ್ಚು ಸುಲಭವಾಗಿ, ಅನುಕೂಲಕರವಾಗಿ ಮತ್ತು ಪರಿಣಾಮಕಾರಿಯಾಗಿ ಸಾಧ್ಯವಾಗಲಿದೆ ಎಂದಿದ್ದಾರೆ.ಭೇಟಿಯ ಸಂದರ್ಭದಲ್ಲಿ ಬೆಂಗಳೂರಿನ ವಕೀಲರ ಸಂಘದ ಅಧ್ಯಕ್ಷರಾದ ವಿವೇಕ್ ಸುಬ್ಬಾರೆಡ್ಡಿ ಅವರು ಉಪಸ್ಥಿತರಿದ್ದರು ಮತ್ತು ಸಂಸದರ ಬೇಡಿಕೆಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

**ಶಿವಮೊಗ್ಗದಲ್ಲಿ ಸರ್ಕ್ಯೂಟ್ ಪೀಠ ಸ್ಥಾಪನೆ**





ಉದಯವಾಹಿನಿ ಚಿತ್ರ

ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಗೆ ನಡೆಯುತ್ತಿರುವ ಮಲೆನಾಡು ಮತ್ತು ಮಧ್ಯ ಕರ್ನಾಟಕದ ಜನರ ಹಕ್ಕೊತ್ತಾಯ, ಹೋರಾಟಗಳ ನಡುವೆ, ಸಂಸದ ರಾಘವೇಂದ್ರ ಅವರ ಈ ಭೇಟಿಯು ಪ್ರಾಮುಖ್ಯತೆ ಪಡೆದಿದೆ. ಜೊತೆಗೆ ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠವನ್ನು ಸ್ಥಾಪಿಸಬೇಕೆಂದು ನಿರಂತರವಾಗಿ ಪ್ರತಿಪಾದಿಸುತ್ತಿರುವ ಕಾನೂನು ವಲಯ, ವಕೀಲರ ಸಂಘಗಳು ಮತ್ತು ವಿವಿಧ ನಾಗರಿಕ ಸಮಾಜ ಸಂಸ್ಥೆಗಳ ಸದಸ್ಯರ ಬೇಡಿಕೆಗೆ ಹೆಚ್ಚಿನ ಬಲ ಸಿಕ್ಕಂತಾಗಿದೆ. ಜಿಲ್ಲೆಯ ಶಾಸಕರು ಮತ್ತು ಕಾನೂನು ಪ್ರತಿನಿಧಿಗಳ ನಿಯೋಗದೊಂದಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ, ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಗೆ ರಾಜ್ಯ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಕೋರಿಕೆ ಸಲ್ಲಿಸಿರುವ ಸಂಸದರು ಇದೇ ಸಂದರ್ಭದಲ್ಲಿ, ಶಿವಮೊಗ್ಗ ಜಿಲ್ಲೆಯಾದ್ಯಂತ ಸಾವಿರಾರು ರೈತರ ಮೇಲೆ ಪ್ರತಿಕೂಲ ಪರಿಣಾಮ ಬೀರಿರುವ ಬೆಳೆ ವಿಮಾ ಪರಿಹಾರ ವೈಪರೀತ್ಯಗಳನ್ನು ಪರಿಹರಿಸಿ, ಸರಿಪಡಿಸಲು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು.

**"ಪ್ರಸ್ತಾಪಿತ ಮಂಗಳೂರು ಪೀಠದೊಂದಿಗೆ ಶಿವಮೊಗ್ಗವನ್ನು ಜೋಡಿಸುವುದರಿಂದ ಮಲೆನಾಡು ಮತ್ತು ಮಧ್ಯ ಕರ್ನಾಟಕದ ದಾವೆದಾರರ ಹಿತಾಸಕ್ತಿಗೆ ಅನುಗುಣವಾಗಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆ ಆಗಬೇಕೆಂದು ಒತ್ತಾಯಿಸಿದ್ದಾರೆ.**
**-ಸಂಸದ ಬಿ.ವೈ. ರಾಘವೇಂದ್ರ**

**ನ್ಯಾಯ ವ್ಯಾಪ್ತಿಯಡಿಯಲ್ಲಿ ಶಿವಮೊಗ್ಗ**

**ಸರ್ಕ್ಯೂಟ್ ಪೀಠ ಸ್ಥಾಪನೆಯಾಗುವವರೆಗೆ ಬೆಂಗಳೂರು ನ್ಯಾಯ ವ್ಯಾಪ್ತಿಯಡಿಯಲ್ಲಿಯೇ ಶಿವಮೊಗ್ಗ ಇರಲಿ ಎಂದು ಒತ್ತಾಯಿಸಿದ್ದಾರೆ. ಶಿವಮೊಗ್ಗವನ್ನು ಮಂಗಳೂರಿನಲ್ಲಿ ಪ್ರಸ್ತಾವಿತ ನ್ಯಾಯಪೀಠದ ವ್ಯಾಪ್ತಿಗೆ ತರುವುದರ ವಿರುದ್ಧ ಶಿವಮೊಗ್ಗದ ವಲಯದಿಂದ ವ್ಯಕ್ತವಾಗುತ್ತಿರುವ ಭಾವನೆಗಳನ್ನು ಮತ್ತು ಅದಕ್ಕೆ ಕಾರಣಗಳನ್ನು ಸಂಸದರು ರಾಜ್ಯಪಾಲರಿಗೆ ತಿಳಿಸಿಕೊಟ್ಟಿದ್ದಾರೆ.**

ಶಿವಮೊಗ್ಗ ಶಾಸಕ ಚನ್ನಬಸಪ್ಪ, ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ, ವಿಧಾನ ಪರಿಷತ್ ಸದಸ್ಯರಾದ ಡಾ. ಧನಂಜಯ್ ಸರ್ಜಿ ಮತ್ತು ಅರುಣ್ ಡಿ.ಎಸ್., ಶಿವಮೊಗ್ಗ ವಕೀಲರ ಸಂಘದ ಅಧ್ಯಕ್ಷ ಜಿ.ಆರ್. ರಾಘವೇಂದ್ರ ಸ್ವಾಮಿ, ಸಾಗರ ವಕೀಲರ ಸಂಘದ ಅಧ್ಯಕ್ಷ ಎಂ.ಬಿ. ಗಿರೀಶ್ ಗೌಡ, ಶಿಕಾರಿಪುರ ವಕೀಲರ ಸಂಘದ ಅಧ್ಯಕ್ಷ ಎಂ.ಜಿ. ಉಮೇಶ್ ಸೇರಿದಂತೆ ಶಿವಮೊಗ್ಗ ಜಿಲ್ಲೆಯ ಹಿರಿಯ ವಕೀಲರು ಮತ್ತು ವಕೀಲರ ಸಂಘಗಳ ಸದಸ್ಯರು ಈ ವೇಳೆ ಉಪಸ್ಥಿತರಿದ್ದರು.

# ಅಕ್ರಮ ಎಲ್‌ಪಿಜಿ ಗ್ಯಾಸ್ ಪತ್ತೆ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ವಿಜಯಪುರ,**

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಜಂಟಿಯಾಗಿ ದಾಳಿ ನಡೆಸಿ, 10 ವಾಣಿಜ್ಯ ಎಲ್ ಪಿಜಿ ಹಾಗೂ 13 ಗೃಹ ಬಳಕೆ ಸಿಲಿಂಡರ್ ಗಳನ್ನು ವಶಪಡಿಸಿಕೊಳ್ಳಲಾಗಿದೆ.

ನಗರದ ರಹಿಂನಗರ ಪ್ರದೇಶದಲ್ಲಿರುವ ರಾಜೇಶ್ವರಿ ಮಲ್ಲಪ್ಪ ಬರಟಗಿ ಅವರ ಖಾಲಿ ಜಾಗೆಯಲ್ಲಿನ ಶೆಡ್‌ನಲ್ಲಿ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ಗಳಿಂದ ವಾಣಿಜ್ಯ ಸಿಲಿಂಡರ್ಗಳಿಗೆ ಅಕ್ರಮವಾಗಿ ಗ್ಯಾಸ್ ತುಂಬಿಸಿ ಹೋಟೆಲ್‌ಗಳಿಗೆ ಮಾರಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಆಧರಿಸಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.ದಾಳಿಯ ವೇಳೆ 10 ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ಗಳು ಹಾಗೂ 13 ಗೃಹಬಳಕೆಯ ಸಿಲಿಂಡರ್ಗಳು ಸೇರಿದಂತೆ ಒಟ್ಟು 23 ಸಿಲಿಂಡರ್ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಕುರಿತು ಎಲ್‌ಪಿಜಿ ಆದೇಶ-2000 ಹಾಗೂ ಅಗತ್ಯ ವಸ್ತುಗಳ ಕಾಯ್ದೆ-1955ರ ಕಲಂ 3 ಮತ್ತು 7ರ ಅಡಿಯಲ್ಲಿ ಗಾಂಧೀಚೌಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಹಾರ ನಿರೀಕ್ಷಕ ಶಂಕರಗೌಡ ಬಿ. ಬಿರಾದಾರ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಲಾಗಿದ್ದು, ಗೃಹಬಳಕೆಯ ಸಿಲಿಂಡರ್ಗಳಲ್ಲಿನ ಗ್ಯಾಸ್ ಅನ್ನು ವಾಹನಗಳಿಗೆ ಅಥವಾ ವಾಣಿಜ್ಯ ಸಿಲಿಂಡರ್ಗಳಿಗೆ ಅಕ್ರಮವಾಗಿ ತುಂಬಿಸಿ ಮಾರಾಟ ಮಾಡುವುದು ಕಾನೂನುಬಾಹಿರವಾಗಿದೆ ಎಂದು ಅವರು ತಿಳಿಸಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ**: ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ. ಸ್ನೇಹಿತರು ಮತ್ತು ಕುಟುಂಬದ ಸದಸ್ಯರು ನಿಮಗೆ ನೆರವು ಮತ್ತು ಪ್ರೀತಿ ಒದಗಿಸುತ್ತಾರೆ. ನೀವು ಪ್ರಣಯದ ಮನೋಭಾವ ಹೊಂದಿರುತ್ತೀರಿ.

**ವೃಷಭ**: ಇಂದು ಮನೆಯ ಸದಸ್ಯರೊಂದಿಗೆ ಮಾತನಾಡುವ ಸಮಯದಲ್ಲಿ ನಿಮ್ಮ ಮುಖದಿಂದ ಮನೆಯ ಸದಸ್ಯರು ಕೋಪಗೊಳ್ಳುವಂತಹ ಯಾವುದೇ ಮಾತು ಬರಬಹುದು. ಇದರ ನಂತರ ಮನೆಯ ಸದಸ್ಯರನ್ನು ಮನವರಿಕೆ ಮಾಡಲು ನಿಮ್ಮ ಸಾಕಷ್ಟು ಸಮಯ ಹೋಗಬಹುದು.

**ಮಿಥುನ**: ನಿಮ್ಮ ವಿಶ್ವಾಸ ಮತ್ತು ಚೈತನ್ಯ ಇಂದು ಅಧಿಕವಾಗಿರುತ್ತದೆ. ದಿನದ ಆರಂಭದಲ್ಲಿ ಇಂದು ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು. ಇದರಿಂದ ನಿಮ್ಮ ಪೂರ್ತಿ ದಿನ ಹದಗೆಡಬಹುದು. ಒಬ್ಬ ಸ್ನೇಹಿತ ತನ್ನ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಿಮ್ಮ ಸಲಹೆ ಪಡೆದುಕೊಳ್ಳುತ್ತಾರೆ.

**ಕರ್ಕಾಟಕ**: ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು ಎಲ್ಲರನ್ನೂ ನಿಮ್ಮ ದೊಡ್ಡ ಪಾರ್ಟಿಗೆ ಕರೆಯಿರಿ.

**ಸಿಂಹ**: ನಿಮ್ಮ ಅನುಮಾನದ ಪ್ರಕೃತಿ ನಿಮಗೆ ಸೋಲಿನ ಮುಖ ತೋರಿಸಬಹುದು. ಆರ್ಥಿಕ ಸಮಸ್ಯೆ ರಚನಾತ್ಮಕವಾಗಿ ಯೋಚಿಸುವ ನಿಮ್ಮ ಸಾಮರ್ಥ್ಯವನ್ನು ಹಾಳುಮಾಡುತ್ತದೆ. ನಿಮ್ಮನ್ನು ಸಂತೋಷವಾಗಿಡುವುದನ್ನೇನಾದರೂ ಮಾಡಿ, ಆದರೆ ಇತರರ ವ್ಯವಹಾರಗಳಿಂದ ದೂರವಿರಿ.

**ಕನ್ಯಾ**: ನಿಮ್ಮ ಸಂತೋಷವನ್ನು ಅನುಭವಿಸಲು ನೀವಿದನ್ನು ನಿಮ್ಮ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ ಏಕೆಂದರೆ ನಿಮ್ಮ ಮೂಲಕ ಕೊಟ್ಟಿರುವ ಹಣ ಇಂದು ನಿಮಗೆ ಮರಳಿ ಸಿಗಬಹುದು.

**ತುಲಾ**: ನೀವು ಬಹಳ ವಿಚಿತ್ರವಾದ ಪರಿಸ್ಥಿತಿಯಲ್ಲಿ ಸಿಲುಕಿದರೂ ಅದನ್ನು ಎದುರಿಸಲು ನಿಮ್ಮ ಇಚ್ಛಾಶಕ್ತಿ ಸಹಾಯ ಮಾಡಬಹುದು .ಒಂದು ಅತ್ಯಂತ ಭಾವನಾತ್ಮಕ ನಿರ್ಧಾರ ಕೈಗೊಳ್ಳುವಾಗ ನೀವು ಸ್ತಿಮಿತ ಕಳೆದುಕೊಳ್ಳಬಾರದು. ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ತ್ಯರಾಗಿರುತ್ತೀರಿ.

**ವೃಶ್ಚಿಕ**: ಒಬ್ಬ ಆಧ್ಯಾತ್ಮಿಕ ವ್ಯಕ್ತಿ ಆಶೀರ್ವಾದ ಮಾಡುತ್ತಾರೆ ಮತ್ತು ಮನಸ್ಸಿನ ಶಾಂತಿ ತರುತ್ತಾರೆ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ, ಆದರೆ ಇದರೊಂದಿಗೆ ನೀವು ದಾನವನ್ನು ಸಹ ಮಾಡಬೇಕು ಏಕೆಂದರೆ ಇದರಿಂದ ನಿಮಗೆ ಮಾನಸಿಕ ಶಾಂತಿ ಸಿಗುತ್ತದೆ.

**ಧನಸ್ಸು**: ವಿವಾಹಿತ ಜನರು ತಮ್ಮ ಮಕ್ಕಳ ಶಿಕ್ಷಣದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ನಿಮ್ಮ ಮಕ್ಕಳಿಗಾಗಿ ಯೋಜನೆಗಳು ಮಾಡಲು ಅತ್ಯುತ್ತಮ ದಿನ. ನಿಮ್ಮ ಗೆಳತಿಯ ಜೊತೆ ಅಸಭ್ಯವಾಗಿ ನಡೆದುಕೊಳ್ಳಬೇಡಿ ನಿಮಗೆಲ್ಲರಿಗೂ ತುಂಬ ಸಕ್ರಿಯವಾದ ಹೆಚ್ಚು ಸಾಮಾಜಿಕವಾದ ಜನರು ನಿಮ್ಮಿಂದ ಸಲಹೆ ಪಡೆಯಬಯಸುತ್ತಾರೆ

**ಮಕರ**: ನಿಮ್ಮ ಪೋಷಕರನ್ನು ಸಂತೋಷಗೊಳಿಸು ಎರಡನ್ನೂ ಸಂಭಾಳಿಸಬೇಕು. ಇಂದು ಪ್ರೀತಿಯಲ್ಲಿ ನಿಮ್ಮ ವಿವೇಚನಾ ಶಕ್ತಿಯನ್ನು ಬಳಸಿ. ನುರಿತ ಜನರೊಡನೆ ಒಡನಾಟ ಹೊಂದಿ ಮತ್ತು ಅವರು ನಿಮಗೆ ಭವಿಷ್ಯದ ಪ್ರವೃತ್ತಿಗಳ ಬಗ್ಗೆ ಒಳನೋಟ ನೀಡಬಲ್ಲರು. ಕಳೆದ ಉದ್ಯಮಗಳ ಯಶಸ್ಸು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ.

**ಕುಂಭ**: ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ–ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ, ಆದರೆ ಇದರೊಂದಿಗೆ ನೀವು ದಾನವನ್ನು ಸಹ ಮಾಡಬೇಕು ಏಕೆಂದರೆ ಇದರಿಂದ ನಿಮಗೆ ಮಾನಸಿಕ ಶಾಂತಿ ಸಿಗುತ್ತದೆ.

**ಮೀನ**: ನಿಮ್ಮ ಪ್ರೀತಿಪಾತ್ರರ ಜೊತೆಗಿನ ನಿಮ್ಮ ಸಂಬಂಧದಲ್ಲಿ ಹುಳಿ ಹಿಂಡಬಹುದಾದ ಸಮಸ್ಯೆಗಳನ್ನು ಕೆದಕುವುದನ್ನು ತಪ್ಪಿಸುವುದು ಅತ್ಯುತ್ತಮ. ಪ್ರೀತಿ ಇಂದ್ರಿಯಗಳ ಮಿತಿಯನ್ನು ಮೀರಿದ್ದಾಗಿದೆ, ಆದರೆ ನಿಮ್ಮ ಇಂದ್ರಿಯಗಳು ಇಂದು ಪ್ರೀತಿಯ ಭಾವಪರವಶತೆಯನ್ನು ಅನುಭವಿಸುತ್ತವೆ. ನೀವು ನಿರಾಸೆ ಅನುಭವಿಸುತ್ತೀರಿ .

# ಎಸ್‌ಐಆರ್ ಪ್ರಕ್ರಿಯೆ ಕುರಿತು ಕಾಂಗ್ರೆಸ್ ನಾಯಕರ ಅಪಪ್ರಚಾರ: ಬಿಜೆಪಿ ಜಿಲ್ಲಾ ವಕ್ತಾರ ಸದಾನಂದ ಭಟ್ ಕಿಡಿ

• **ಉದಯವಾಹಿನಿ ಶಿರಸಿ:**

ಚುನಾವಣಾ ಆಯೋಗವು ಸಂವಿಧಾನಬದ್ಧವಾಗಿ ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು ಪ್ರಯತ್ನಿಸುತ್ತಿರುವ ಕಾಂಗ್ರೆಸ್ ನಾಯಕರ ವಿರುದ್ಧ ಉತ್ತರ ಕನ್ನಡ ಜಿಲ್ಲಾ ಬಿಜೆಪಿ ವಕ್ತಾರ ಸದಾನಂದ ಭಟ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಚುನಾವಣಾ ಆಯೋಗವು 24 ವರ್ಷಗಳ ನಂತರ ರಾಷ್ಟ್ರದಾದ್ಯಂತ ಅರ್ಹ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ದೃಷ್ಟಿಯಿಂದ ಈ ಪ್ರಕ್ರಿಯೆ ಯನ್ನು ನಡೆಸುತ್ತಿದೆ. ಸುಪ್ರೀಂ ಕೋರ್ಟ್ ಕೂಡ ಇದಕ್ಕೆ ಅನುಮೋದನೆ ನೀಡಿದೆ. ಹೀಗಿದ್ದರೂ, ಕಾಂಗ್ರೆಸ್ ನಾಯಕರು ಜನರಲ್ಲಿ ತಪ್ಪು ಮಾಹಿತಿ ಹರಡುತ್ತಾ, ಬಿಜೆಪಿಯ ಮೇಲೆ ವಿನಾಕಾರಣ ಆರೋಪ ಮಾಡುತ್ತಿರುವುದು ಖಂಡನೀಯ ಎಂದು ತಿಳಿಸಿದ್ದಾರೆ.**ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ:** ಮಾಜಿ ಸಚಿವ ಹಾಗೂ ಶಾಸಕ ಮಂಕಾಳ ವೈದ್ಯ ಮತ್ತು ಶಾಸಕ ಭೀಮಣ್ಣ ನಾಯಕ್ ಅವರು ಎಸ್‌ಐಆರ್ ಪ್ರಕ್ರಿಯೆಯ ಬಗ್ಗೆ ನೀಡಿರುವ ಹೇಳಿಕೆಗಳನ್ನು ಉಲ್ಲೇಖಿಸಿದ ಸದಾನಂದ ಭಟ್, ಮತದಾರರ ಪಟ್ಟಿಯಿಂದ ಮತದಾರರನ್ನು ಹೊರಗಿಡಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂಬುದು ಅವರ ಅಜ್ಞಾನವನ್ನು ತೋರಿಸುತ್ತದೆ. ಮತದಾರ ಪಟ್ಟಿಯ ಪರಿಷ್ಕರಣೆ ಸಂಪೂರ್ಣವಾಗಿ ಚುನಾವಣಾ ಆಯೋಗದ ವ್ಯಾಪ್ತಿಗೆ ಬರುತ್ತದೆ. ಪಡಿತರ ಚೀಟಿ ವಿತರಣೆ ಮತ್ತು ಅದರ ನಿರ್ವಹಣೆ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ ಎಂಬ ಸಾಮಾನ್ಯ ಜ್ಞಾನವೂ ಕಾಂಗ್ರೆಸ್ಸಿಗರಿಗೆ ಇಲ್ಲದಿರು ವುದು ವಿಪರ್ಯಾಸ ಎಂದು ಟೀಕಿಸಿದ್ದಾರೆ.



**"ಹಿರಿಯ ನಾಗರಿಕರು ಮತ್ತು ಅಂಗವಿಕಲರಿಗೆ ಪಿಂಚಣಿ ತಲುಪಿಸದೆ, ಅನ್ನಭಾಗ್ಯದ ಅಕ್ಕಿ ಯನ್ನೂ ವಿತರಿಸಲಾಗದೆ, ಬೆಲೆ ಏರಿಕೆಯ ಬರೆ ಎಳೆಯುತ್ತಿರುವ ಕಾಂಗ್ರೆಸ್ ಸರ್ಕಾರವು ಬಿಜೆಪಿಯ ಮೇಲೆ ಸುಳ್ಳು ಆರೋಪ ಮಾಡುವುದನ್ನು ನಿಲ್ಲಿಸಿ, ರಾಜ್ಯದ ಅಭಿವೃದ್ಧಿಯ ಕಡೆಗೆ ಗಮನಹರಿಸಲಿ ಎಂದು ಆಗ್ರಹಿಸಿದ್ದಾರೆ. – ಸದಾನಂದ ಭಟ್**

# ಕರ್ನಾಟಕದ ಮಾವು ಬೆಳೆಗಾರರ ನೆರವಿಗೆ ಬಂದ ಕೇಂದ್ರ

## ಕೇಂದ್ರ ಸರ್ಕಾರವು ಮಾರುಕಟ್ಟೆ ಹಸ್ತಕ್ಷೇಪ ಯೋಜನೆಯಡಿ ರಾಜ್ಯದ 1.30 ಲಕ್ಷ ಮೆಟ್ರಿಕ್ ಟನ್ ಮಾವಿಗೆ

• **ಉದಯವಾಹಿನಿ ಹುಬ್ಬಳ್ಳಿ :**

ಬೆಲೆ ಕುಸಿತದಿಂದ ಕಂಗೆಟ್ಟಿರುವ ಕರ್ನಾಟಕದ ಮಾವು ಬೆಳೆಗಾರರಿಗೆ ಕೇಂದ್ರ ಸರ್ಕಾರ ಸಿಹಿ ಸುದ್ದಿ ನೀಡಿದೆ. ಮಾರುಕಟ್ಟೆ ಹಸ್ತಕ್ಷೇಪ ಯೋಜನೆಯಡಿ 1.30 ಲಕ್ಷ ಮೆಟ್ರಿಕ್ ಟನ್ ಮಾವಿಗೆ

**1 : ಕರ್ನಾಟಕದ ಮಾವು ಬೆಳೆಗಾರರ ಹಿತರಕ್ಷಣೆ**
**2 : ಆರ್ಥಿಕ ನೆರವಿನಿಂದ ರಾಜ್ಯದ ಬೆಳೆಗಾರರು**
**3 : (ಪಿ ಡಿ ಪಿ) ಅನುಷ್ಠಾನಕ್ಕೆ ಕ್ರಮ ಕೈಗೊಂಡಿದೆ**



ಉದಯವಾಹಿನಿ ಚಿತ್ರ

ಪ್ರತಿ ಕ್ವಿಂಟಾಲ್‌ಗೆ 1,750 ಆರ್ಥಿಕ ನೆರವನ್ನು ಘೋಷಿಸಿದೆ. ಹವಾಮಾನ ವೈಪರೀತ್ಯ, ಮಾರುಕಟ್ಟೆಯಲ್ಲಿ ಬೆಲೆ ಕುಸಿತದಿಂದಾಗಿ ರಾಜ್ಯದ ಬೆಳೆಗಾರರಿಗೆ ಮಾವು ಹುಳಿಯಾಗಿ ಪರಿಣಮಿಸಿದರೂ, ಇದೀಗ ಕೇಂದ್ರ ಸರ್ಕಾರ ಘೋಷಿಸಿದ ಆರ್ಥಿಕ ನೆರವಿನಿಂದ ರಾಜ್ಯದ ಬೆಳೆಗಾರರು ತುಸು ನಿರಾಳರಾಗುವಂತೆ ಮಾಡಿದೆ. ಕಳೆದ ಐದಾರು ದಿನಗಳ ಹಿಂದಷ್ಟೇ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರು ರಾಜ್ಯದ ಮಾವು ಬೆಳೆಗಾರರ ಸಂಕಷ್ಟದ ಬಗ್ಗೆ ಕೃಷಿ ಸಚಿವ ಶಿವರಾಜ್? ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದು, ಮನವರಿಕೆ ಮಾಡಿಕೊಟ್ಟಿದ್ದರು. ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್)ಯಡಿ ನೆರವಾಗುವಂತೆ ಒತ್ತಾಯಿಸಿದ್ದರು. ಜೋಶಿ ಅವರ ಮನವಿಗೆ ಸ್ಪಂದಿಸಿದ ಕೇಂದ್ರ ಕೃಷಿ ಸಚಿವರು, ರಾಜ್ಯದ ಮಾವು ಬೆಳೆಗಾರರ ಸಂಕಷ್ಟಕ್ಕೆ ನೆರವಾಗುವಲ್ಲಿ ತ್ವರಿತ ಕ್ರಮ ಕೈಗೊಂಡಿದ್ದು, ಆರ್ಥಿಕ ನೆರವು ನೀಡಲು ಅನುಮೋದನೆ ನೀಡಿದ್ದರ ಬಗ್ಗೆ ನಿನ್ನೆ(ಜೂ.24) ಸಚಿವ ಪ್ರಲ್ಹಾದ ಜೋಶಿ

**"ರಾಜ್ಯ ಸರ್ಕಾರ, 2026-27ರ ಮಾರುಕಟ್ಟೆ ಋತುವಿಗಾಗಿ ಎಮ್ ಐ ಎಸ್ ಅಡಿಯಲ್ಲಿ ಬೆಲೆ ಕೊರತೆ ಪಾವತಿ ಅಡಿಯಲ್ಲಿ ತೋತಾಪುರಿ ಮಾವಿನ ವ್ಯಾಪಾರಿಗಳ ಪಟ್ಟಿ ಪ್ರಕಟಿಸಬೇಕು. ನೋಂದಾಯಿತ ರೈತರಿಗೆ ಬೆಲೆ ನಷ್ಟ ಪಾವತಿಯನ್ನು ನೇರ ಲಾಭ ವರ್ಗಾವಣೆ ಆಧಾರ್ ಪರಿಶೀಲಿಸಿದ ಬ್ಯಾಂಕ್ ಖಾತೆ ಮೂಲಕವೇ ಭರಿಸಬೇಕು ಎಂದು ಸೂಚಿಸಲಾಗಿದೆ.-ಸಚಿವ ಪ್ರಲ್ಹಾದ ಜೋಶಿ**


ಅವರಿಗೂ ಪತ್ರ ಬರೆದು ಮಾಹಿತಿ ಹಂಚಿಕೊಂಡಿದ್ದಾರೆ. ಕರ್ನಾಟಕದ ಮಾವು ಬೆಳೆಗಾರರ ಹಿತರಕ್ಷಣೆಗೆ ಮುಂದಾದ ಕೇಂದ್ರ ಸರ್ಕಾರ, ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ ಯಡಿ ಬೆಲೆ ಕೊರತೆ ಪಾವತಿ ಅನುಷ್ಠಾನಕ್ಕೆ ಕ್ರಮ ಕೈಗೊಂಡಿದೆ. ಮಾರ್ಗಸೂಚಿಯಂತೆ 2026-27ರ ಮಾರುಕಟ್ಟೆ ಹಂಗಾಮಿನಲ್ಲಿ ಕರ್ನಾಟಕದಲ್ಲಿ ತೋತಾಪುರಿ ಮಾವಿಗೆ ಬೆಲೆ ಕೊರತೆ ಪಾವತಿಯನ್ನು ಜಾರಿಗೆ ತರಲು ನಿರ್ದೇಶಿಸಿದೆ.

**ರಾಜ್ಯದ ಮಾವು ಬೆಳೆಗಾರರ ಹಿತಾಸಕ್ತಿ ಕಾಪಾಡಲು ಅಗತ್ಯ ಕ್ರಮ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಕೃಷಿ ಸಚಿವರಿಗೆ ಸಚಿವ ಪ್ರಲ್ಹಾದ ಜೋಶಿ ಅವರು ರಾಜ್ಯದ ಸಮಸ್ತ ರೈತರ ಪರವಾಗಿ ಧನ್ಯವಾದ ಅರ್ಪಿಸಿದ್ದಾರೆ.**

ಎಂ ಐ ಎಸ್ ಅಡಿಯಲ್ಲಿ ನೆರವು ಘೋಷಿಸಿರುವ ಕೇಂದ್ರ ಸರ್ಕಾರ, ಗರಿಷ್ಠ 1,30,000 ಒಖಿವರೆಗೆ ಅನ್ವಯಿಸುವಂತೆ ಪ್ರತಿ ಕ್ವಿಂಟಾಲ್‌ಗೆ 1,750 ಸಹಾಯಧನ ನಿಗದಿಪಡಿಸಿದ್ದು, ರಾಜ್ಯ ಸರ್ಕಾರಕ್ಕೆ ಮಾರ್ಗಸೂಚಿ ಹೊರಡಿಸಿದೆ. 2026-27ರ ಹಂಗಾಮಿನಲ್ಲಿ ಒಂದು ತಿಂಗಳವರೆಗೆ ಬೆಲೆ ಕೊರತೆ ಪಾವತಿ ಅನುಷ್ಠಾನ? ಜಾರಿಯಲ್ಲಿರುತ್ತದೆ. ಬೆಲೆ ಕೊರತೆ ಪಾವತಿ ಅಡಿಯಲ್ಲಿ ಪ್ರಯೋಜನ ಪಡೆಯುವ ರೈತರು ತಮ್ಮ ಉತ್ಪನ್ನಗಳನ್ನು ಕರ್ನಾಟಕದ ಅಧಿಸೂಚಿತ (ಎ ಪಿ ಎಮ್ ಸಿ) ಮಂಡಿಗಳಲ್ಲಿ ವ್ಯಾಪಾರ ಮಾಡಬೇಕು.

# ನಾಟಿ ಔಷಧಿ ಸೇವಿಸಿ ಮೃತಪಟ್ಟ ನಾಲ್ವರು ಕೂಲಿ ಕಾರ್ಮಿಕರು

• **ಉದಯವಾಹಿನಿ ಕಲಬುರಗಿ**



ಉದಯವಾಹಿನಿ ಚಿತ್ರ

ಸೇಡಂ ತಾಲ್ಲೂಕಿನ ಇಮಡಾಪುರದಲ್ಲಿ ನಾಟಿ ಔಷಧಿ ಸೇವಿಸಿ ಮೃತಪಟ್ಟ ನಾಲ್ವರು ಕೂಲಿ ಕಾರ್ಮಿಕರ ಕುಟುಂಬಗಳಿಗೆ ಸರ್ಕಾರದಿಂದ ಘೋಷಿತ ಪರಿಹಾರವನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಫೆಡರೇಶನ್ ಒತ್ತಾಯಿಸಿದೆ.

ಈ ಕುರಿತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರಿಗೆ ಮನವಿ ಸಲ್ಲಿಸಿರುವ ಫೆಡರೇಶನ್, ಘಟನೆಯಲ್ಲಿ ಶಹಾಬಾದ್ ಗ್ರಾಮದ ಗಣೇಶ್ ಬಾಬು ರಾಠೋಡ, ಬುರ್ಗಪಲ್ಲಿ ಗ್ರಾಮದ ಲಕ್ಷ್ಮೀ ನರಸಿಂಹಲು, ಮದುಕಲ್ ಗ್ರಾಮದ ನಾಗೇಶ್ (ಭೀಮಪ್ಪ ಅವರ ಪುತ್ರ) ಹಾಗೂ ಭೀಮನಹಳ್ಳಿ ಗ್ರಾಮದ ಮನೋಜ್ (ಲಕ್ಷ್ಮಣ ಅವರ ಪುತ್ರ) ಮೃತಪಟ್ಟಿದ್ದಾರೆ ಎಂದು ತಿಳಿಸಿದೆ.

ಘಟನೆ ನಡೆದು ಸುಮಾರು 9, 10 ತಿಂಗಳು ಕಳೆದರೂ ಸಂಬಂಧಪಟ್ಟ ಅಧಿಕಾರಿಗಳು ಮೃತರ ಕುಟುಂಬಗಳಿಗೆ ಸರ್ಕಾರದಿಂದ ನೀಡಬೇಕಾದ ಪರಿಹಾರ ಹಾಗೂ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಂಡಿಲ್ಲ ಎಂದು ಮನವಿಯಲ್ಲಿ ಆರೋಪಿಸಲಾಗಿದೆ. ಆದ್ದರಿಂದ ಸಚಿವರು ವೈಯಕ್ತಿಕವಾಗಿ ಮಧ್ಯಪ್ರವೇಶಿಸಿ ಪ್ರಕರಣದ ಪರಿಶೀಲನೆ ನಡೆಸಿ, ಮೃತರ ಕುಟುಂಬಗಳಿಗೆ ಸರ್ಕಾರದ ಪರಿಹಾರ ಧನ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಶೀಘ್ರವಾಗಿ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಫೆಡರೇಶನ್ ಮನವಿ ಮಾಡಿದೆ.

# ಬಾಲಕರ ವಿದ್ಯಾರ್ಥಿನಿಲಯ ನಿರ್ಮಾಣ ಕಾಮಗಾರಿಗೆ ಚಾಲನೆ

• **ಉದಯವಾಹಿನಿ ಬೀದರ್**

ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಗೋರನಳ್ಳಿ ಗ್ರಾಮದ ಹೊರವಲಯದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಪೂರಕವಾಗುವ ಮತ್ತೊಂದು ಮಹತ್ವದ ಯೋಜನೆಗೆ ಚಾಲನೆ ದೊರೆತಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ 5.00 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಮೆಟ್ರಿಕ್ ನಂತರದ ಬಾಲಕರ (ಉನ್ನತೀಕರಣ) ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಈ ವಿದ್ಯಾರ್ಥಿನಿಲಯ ನಿರ್ಮಾಣ ಯೋಜನೆಯು ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಅಗತ್ಯವಾದ ಮೂಲಸೌಕರ್ಯಗಳನ್ನು ಒದಗಿಸುವ ಮಹತ್ವದ ಹೆಜ್ಜೆಯಾಗಿದೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ವಸತಿ ವ್ಯವಸ್ಥೆ, ಅಧ್ಯಯನ ಕೊಠಡಿಗಳು, ಆಧುನಿಕ ಸೌಲಭ್ಯಗಳು ಹಾಗೂ ಸುರಕ್ಷಿತ ಶೈಕ್ಷಣಿಕ ವಾತಾವರಣವನ್ನು ಕಲ್ಪಿಸುವ ಉದ್ದೇಶದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು, ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುವುದು ಸರ್ಕಾರದ ಪ್ರಮುಖ ಧ್ಯೇಯವಾಗಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳೂ ನಗರ ಪ್ರದೇಶದ ವಿದ್ಯಾರ್ಥಿಗಳಷ್ಟೇ ಉತ್ತಮ ಸೌಲಭ್ಯಗಳನ್ನು ಪಡೆಯಬೇಕು ಎಂಬ ಉದ್ದೇಶದಿಂದ ಇಂತಹ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ ಎಂದು ಹೇಳಿದರು. ಯೋಜನೆಯ ಕಾಮಗಾರಿಯನ್ನು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಸಂಬಂಧಿಸಿದ



ಉದಯವಾಹಿನಿ ಚಿತ್ರ

**"ವಿದ್ಯಾರ್ಥಿಗಳಿಗೆ ಉತ್ತಮ ವಸತಿ ಸೌಲಭ್ಯ ದೊರೆತಾಗ ಅವರ ಶೈಕ್ಷಣಿಕ ಸಾಧನೆ ಹೆಚ್ಚುವುದರ ಜೊತೆಗೆ ಆತ್ಮವಿಶ್ವಾಸವೂ ವೃದ್ಧಿಯಾಗುತ್ತದೆ. ಹೀಗಾಗಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಅವರು ತಿಳಿಸಿದರು.**
**-ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ**

# ಮ್ಯಾಪಿಂಗ್ ಪ್ರಕ್ರಿಯೆಯಲ್ಲಿ 96% ಸಾಧನೆ ಮಾಡಿರುವ ಕಾರ್ಕಳ

• **ಉದಯವಾಹಿನಿ ಉಡುಪಿ**

ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣಾ ಪ್ರಕ್ರಿಯೆಯ ಪೂರ್ವಭಾವಿಯಾಗಿ ನಡೆದ ಮ್ಯಾಪಿಂಗ್ ಪ್ರಕ್ರಿಯೆಯಲ್ಲಿ 96% ಸಾಧನೆ ಮಾಡಿರುವ ಕಾರ್ಕಳ ತಾಲ್ಲೂಕು ಜಿಲ್ಲೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.

ತಾಲ್ಲೂಕಿನ 5 ಸಾವಿರ ಜನರು ಉದ್ಯೋಗ ಅಥವಾ ಅನ್ಯ ಕಾರಣ ನಿಮಿತ್ತ ತಾಲ್ಲೂಕಿನಿಂದ ಹೊರ ಹೋಗಿದ್ದು ಇವರ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಹೇಳಿದರು.

ಅವರು ಕಾರ್ಕಳದ ಮಂಜುನಾಥ ಪೈ ಸಭಾಂಗಣದಲ್ಲಿ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2026ರ ಸಂಬಂಧ ಕಾರ್ಕಳ ವಿಧಾನಸಭಾ ಕ್ಷೇತ್ರದ ಚುನಾಯಿತ ಜನಪ್ರತಿನಿಧಿಗಳು, ಮೇಲ್ವಿಚಾರಕರು, ಮತಗಟ್ಟೆ ಅಧಿಕಾರಿಗಳು ಹಾಗೂ ಮತಗಟ್ಟೆ ಏಜೆಂಟ್ ಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮತದಾರರ ಪಟ್ಟಿಯ ಮ್ಯಾಪಿಂಗ್ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದ್ದು, ಹೆಸರು ಬಿಟ್ಟು ಹೋದವರನ್ನು ಪಟ್ಟಿಯಲ್ಲಿ ಸೇರಿಸುವ ಜವಾಬ್ದಾರಿ ಬಿ. ಎಲ್. ಓ ಗಳ ಮೇಲಿದೆ. ಪರಿಷ್ಕರಣೆ ಸಮಯದಲ್ಲಿ ಎದುರಾಗುವ ಸಮಸ್ಯೆಗಳನ್ನು ಜಿಲ್ಲಾಡಳಿತದ ಗಮನಕ್ಕೆ ತರಬೇಕು.

ಕೇವಲ ಭಾರತೀಯ ನಾಗರಿಕರು ಮಾತ್ರ ಸಂವಿಧಾನ ಬದ್ಧ ಮತದಾನ ಮಾಡುವ ಹಕ್ಕನ್ನು ಹೊಂದಬೇಕು ಎನ್ನುವ ಉದ್ದೇಶದಿಂದ ಈ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ.

ಮುಖ್ಯವಾಗಿ ಬಿ ಎಲ್ ಓ ಮತ್ತು ಬಿ ಎಲ್ ಎ ಗಳ ಮಧ್ಯೆ ಸಮನ್ವಯ ಸಾಧಿಸಲು ತಾಲ್ಲೂಕು ಮಟ್ಟದಲ್ಲಿ ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ನೈಜ ಮತ್ತು ಅರ್ಹ ಮತದಾರರ ಹೆಸರು ಪಟ್ಟಿಯಲ್ಲಿ ಇರುವುದನ್ನು ಖಚಿತ ಪಡಿಸಿಕೊಂಡು ಪ್ರಕ್ರಿಯೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಬೇಕು. ತಾಲ್ಲೂಕಿನ ಮತದಾರರ ಪಟ್ಟಿಯ ಮ್ಯಾಪಿಂಗ್ ಅತ್ಯುತ್ತಮವಾಗಿ ನಡೆದಿದ್ದು ಇದಕ್ಕೆ ಸಹಕರಿಸಿದ ಎಲ್ಲರೂ ಅಭಿನಂದನೆಗೆ ಅರ್ಹರು ಎಂದರು.



ಉದಯವಾಹಿನಿ ಚಿತ್ರ

**"ದೇಶದಲ್ಲಿ 2002 ರಲ್ಲಿ ಕೊನೆಯ ಬಾರಿಗೆ ಮತದಾರರ ಪಟ್ಟಿ ಪರಿಷ್ಕರಣೆ ನಡೆದಿದೆ. ಆ ಬಳಿಕ ಹಳ್ಳಿಗಳು ನಗರಗಳಾಗಿ ಬೆಳೆದು, ಜನಸಂಖ್ಯೆಯೂ ಹೆಚ್ಚಾಗಿದ್ದು ಮತದಾರರನ್ನು ಗುರುತಿಸಲು ಎಸ್ ಐ ಆರ್ ಪ್ರಕ್ರಿಯೆ ನಡೆಸುವುದು ಅತ್ಯವಶ್ಯಕವಾಗಿದೆ.**
**–ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ**

# ಉಕ್ಕಿ ಹರಿದ ಒಳಚರಂಡಿ; ನಿವಾಸಿಗಳ ಸಂಕಷ್ಟ

• **ಉದಯವಾಹಿನಿ ಕಲಬುರಗಿ**

ನಗರದ ವಾರ್ಡ್ ನಂ. 25ರ ವಿಶ್ವರಾಧ್ಯ ಕಾಲೋನಿ ಮತ್ತು ಕೈಲಾಸ್ ನಗರ ಪ್ರದೇಶಗಳಲ್ಲಿ ಕಳೆದ ಒಂದು ವಾರದಿಂದ ಒಳಚರಂಡಿ ಚೇಂಬರ್ಗಳು ತುಂಬಿ ಹೊಲಸು ನೀರು ರಸ್ತೆಗಳಲ್ಲಿ ಹಾಗೂ ಮನೆಗಳೊಳಗೆ ಹರಿಯುತ್ತಿದೆ. ಇದರಿಂದ ವೃದ್ಧರು, ಮಕ್ಕಳು ಸಂಚರಿಸಲು ಸಾಧ್ಯವಾಗುತ್ತಿಲ್ಲ. ಬಟ್ಟೆ ಒಗೆಯಲು ಹಾಗೂ ದೈನಂದಿನ ಕೆಲಸಗಳನ್ನು ನಿರ್ವಹಿಸಲು ಸಹ ತೊಂದರೆಯಾಗುತ್ತಿದೆ ಎಂದು ಅಲ್ಲಿನ ನಾಗರಿಕರು ದೂರಿದ್ದಾರೆ. ಹೊಲಸು ನೀರು ನೆಲದಲ್ಲಿ ಇಳಿದು ಬೋರ್ವೆಲ್ ನೀರನ್ನು ಕಲುಷಿತಗೊಳಿಸುತ್ತಿದ್ದು, ಅದೇ ನೀರನ್ನು ಕುಡಿಯುವ ಪರಿಸ್ಥಿತಿ ಉಂಟಾಗಿದೆ. ಇದರ ಪರಿಣಾಮವಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಅನೇಕರು ಅಸ್ವಸ್ಥರಾಗುವ ಭೀತಿಯಲ್ಲಿದ್ದಾರೆ. ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲದ ಕಾರಣ ನಾಗರಿಕರು ನರಕಯಾತನೆ ಅನುಭವಿಸುತ್ತಿದ್ದಾರೆ.

ಮಳೆ ಬಂದಾಗ ಪರಿಸ್ಥಿತಿ ಇನ್ನಷ್ಟು ಹದಗೆಟ್ಟು, ಹೊಲಸು ನೀರು ಮನೆಗಳೊಳಗೆ ನುಗ್ಗುತ್ತಿದೆ. ಹಲವು ಬಾರಿ ಸಂಬಂಧಿಸಿದ ಅಧಿಕಾರಿಗಳಿಗೆ ಮತ್ತು ಜನಪ್ರತಿನಿಧಿಗಳಿಗೆ ದೂರು ನೀಡಿದರೂ ಯಾವುದೇ ಶಾಶ್ವತ ಪರಿಹಾರ ದೊರೆತಿಲ್ಲ .ಜನಪ್ರತಿನಿಧಿಗಳು ಈ ಸಮಸ್ಯೆಯತ್ತ ಗಮನ ಹರಿಸಬೇಕು.ಶುದ್ಧ ನೀರು, ಸ್ವಚ್ಛ ಪರಿಸರ ಮತ್ತು ತಕ್ಷಣದ ಪರಿಹಾರಕ್ಕಾಗಿ ವಾರ್ಡ್ ನಂ. 25ರ ನಾಗರಿಕರು ಆಗ್ರಹಿಸಿದ್ದಾರೆ.

# ಮಾದಕ ವಸ್ತುಗಳ ನಿಷೇಧ ಜಾಗೃತಿ ಅಭಿಯಾನ

• **ಉದಯವಾಹಿನಿ ಹುಬ್ಬಳ್ಳಿ.:**

ಇಲ್ಲಿನ ಹಳೇ ಹುಬ್ಬಳ್ಳಿಯ ಸದ್ಗುರು ಶ್ರೀ ಸಿದ್ಧಾರೂಢಸ್ವಾಮಿ ಪ್ರೌಢಶಾಲೆಯಲ್ಲಿ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯ ಸಂಯುಕ್ತ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಗಾಂಜಾ ಮತ್ತು ಇತರೆ ಮಾದಕ ವಸ್ತುಗಳ ವಿರುದ್ಧ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಪೊಲೀಸ್ ಕಮೀಷನರೇಟ್ ಹುಬ್ಬಳ್ಳಿ ಧಾರವಾಡ, ಹುಬ್ಬಳ್ಳಿ ದಕ್ಷಿಣ ವಿಭಾಗ, ಹಳೇ ಹುಬ್ಬಳ್ಳಿ ಠಾಣೆಯ ಪೋಲಿಸ್ ಸಬ್‌ಇನ್ಸಪೆಕ್ಟರ್ ವಿಶ್ವನಾಥ. ಆಲಮಟ್ಟಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿ ವಿದ್ಯಾರ್ಥಿಗಳು ಚಲನಚಿತ್ರಗಳಲ್ಲಿನ ನಾಯಕರನ್ನು ಆರಾಧಿಸುವ ಭರದಲ್ಲಿ ಗಾಂಜಾ, ಸಿಗರೇಟ್, ಗುಟಖಾ, ಮತ್ತೇರಿಸುವ ಪಾನೀಯಗಳು ಮತ್ತು ಇನ್ನಿತರೆ ದುಶ್ಚಟಗಳಿಗೆ ಮಾರುಹೋಗದೇ, ಮಾದಕ ವಸ್ತುಗಳನ್ನು ಬಹಿಷ್ಕರಿಸಬೇಕು ಹಾಗೂ ಸುತ್ತಮುತ್ತಲಿನಲ್ಲಿ ಯಾರಾದರೂ ಸೇವಿಸುವುದು ಅಥವಾ ಮಾರಾಟ ಮಾಡುವುದು ಕಂಡು ಬಂದರೆ ತಕ್ಷಣ 112 ಸಂಖ್ಯೆಗೆ ಕರೆ ಮಾಡಬೇಕೆಂದರು.

ಶಿಕ್ಷಕ ಶ್ರೀನಿವಾಸ ವಾಲಿ ಮಾತನಾಡಿ ಇಂದಿನ ವಿದ್ಯಾರ್ಥಿಗಳೇ ನಾಳೆಯ ಸತ್ಪ್ರಜೆಗಳು, ಹಿಂದೆ ಗುರು ಮುಂದೆ ಗುರಿಯಿದ್ದಲ್ಲಿ ಸಾಧನೆಯ ಶಿಖರಕ್ಕೇರಬಹುದು. ಮಾದಕವಸ್ತುಗಳು ಹಾಗೂ ಮೊಬೈಲ್ ಗೀಳಿನಿಂದ ಹೊರಬಂದು ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯ ರಮೇಶ ದೊಡ್ಡಮನಿ, ಶಿಕ್ಷಕ ಎಂ. ಬಿ. ಪಾಟೀಲ, ಪ್ರಭು ತಳವಾರ, ಶಿಕ್ಷಕಿ ಆರ್ ಸಿ ಸರ್ವಂದ ಹಾಗೂ ಪ್ರೌಢ ಮತ್ತು ಪ್ರಾಥಮಿಕ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಾಮರಸ್ಯಕ್ಕೆ ಸಾಕ್ಷಿಯಾದ ಮೊಹರಂ ಹಬ್ಬ

• **ಉದಯವಾಹಿನಿ ಜಮಖಂಡಿ,**

ನಗರದ ಸದಾನಂದ ಕಾಲೋನಿಯಲ್ಲಿ ಮೊಹರಂ ಹಬ್ಬದ ಅಂಗವಾಗಿ ಶ್ರೀ ಗುರು ದೊಡ್ಡ ಲಾಲಸಾಬ ಅಲಿ, ಶ್ರೀ ಅಕ್ಬರ ಅಲಿ, ಶ್ರೀ ಅಬ್ಬಾಸ ಅಲಿ ಹಾಗೂ ಶ್ರೀ ಬಾರಾಹಿಮಾಮ ಪಂಜಿ ದೇವರ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಪ್ರಮುಖರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಸಮಾಜಮುಖಿ ಚಿಂತಕ ಪ್ರದೀಪ್ ಮೇಟಗುಡ, ಮೊಹರಂ ಹಬ್ಬವು ಧರ್ಮ, ಜಾತಿ ಭೇದವಿಲ್ಲದೆ ಎಲ್ಲಾ ಸಮುದಾಯದವರನ್ನು ಒಗ್ಗೂಡಿಸುವ ಸಾಮರಸ್ಯದ ಸಂಕೇತವಾಗಿದೆ ಎಂದು ಹೇಳಿದರು.

ಕರ್ಬಲದಲ್ಲಿ ಧರ್ಮ ಹಾಗೂ ಸತ್ಯದ ರಕ್ಷಣೆಗಾಗಿ ಪ್ರಾಣತ್ಯಾಗ ಮಾಡಿದ ಮಹಾನುಭಾವರ ಸ್ಮರಣಾರ್ಥ ಮೊಹರಂ ಆಚರಿಸಲಾಗುತ್ತದೆ. ಭಾರತದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಸೇರಿದಂತೆ ಎಲ್ಲಾ ಸಮುದಾಯದವರು ಒಟ್ಟಾಗಿ ಈ ಹಬ್ಬವನ್ನು ಆಚರಿಸುತ್ತಿರುವುದು ದೇಶದ ಏಕತೆ ಹಾಗೂ ಸಹಬಾಳ್ವೆಯ ಪ್ರತೀಕವಾಗಿದೆ ಎಂದು ತಿಳಿಸಿದರು.

# ಬಸವಾದಿ ಶಿವ ಶರಣರ ಬೃಹತ್ ಹಿಂದೂ ಸಮಾವೇಶ

• **ಉದಯವಾಹಿನಿ ಯಲಬುರ್ಗಾ:**

ಬೀದರ್ ಜಿಲ್ಲೆಯ ಬಸವಕಲ್ಯಾಣ ಅಕ್ಕಮಹಾದೇವಿ ಕಾಲೇಜು ಆವರಣದಲ್ಲಿ , ಬಸವಾದಿ ಶಿವ ಶರಣರ ಬೃಹತ್ ಹಿಂದೂ ಸಮಾವೇಶ ಭವ್ಯ ಮೆರವಣಿಗೆ ಮಾಡಲು ಹೊರಟಿರುವ ಕನ್ನೇರ ಮಠದ ಕಾಡ ಸಿದ್ದೇಶ್ವರ ಸ್ವಾಮೀಜಿ ನಡೆ ಸರಿಯಾದುದಲ್ಲ ಎಂದು ಬಸವಕೇಂದ್ರದ ಅಧ್ಯಕ್ಷ ಅಮರೇಶಪ್ಪ ಬಳ್ಳಾರಿ ಹೇಳಿದರು

ತಾಲ್ಲೂಕಿನ ಗುಳೆ ಗ್ರಾಮದ ಬಸವೇಶ್ವರ ಅನುಭವ ಮಂಟಪದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕನ್ನೇರ ಮಠದ ಕಾಡ ಸಿದ್ದೇಶ್ವರ ಸ್ವಾಮೀಜಿ ಬಸವ ಕಲ್ಯಾಣದಲ್ಲಿ ಬಸವಾದಿ ಶಿವಶರಣರ ಹಿಂದೂ ಸಮಾವೇಶ ಮಾಡಲು ಹೊರಟಿದ್ದಾರೆ, ಹಿಂದೂ ಸಮಾವೇಶ ಮಾಡಲಿ ನಮ್ಮ ಅಭ್ಯಂತರವಿಲ್ಲ ಆದರೆ ಬಸವಾದಿ ಶರಣರ ಹೆಸರಿನಲ್ಲಿ ಹಿಂದೂ ಸಮಾವೇಶ ಮಾಡುವುದು ತಪ್ಪು ಬಸವಾದಿ ಶರಣರು ಸಮಾನತೆ, ಸಹೋದರತೆ ಮತ್ತು ಮಾನವೀಯತೆಯ ಸಂದೇಶ ಸಾರಿದ ಜಗಜ್ಯೋತಿ ಬಸವಣ್ಣನವರನ್ನು ಜಾತಿ ವಾದಿಯನ್ನಾಗಿ ಬಿಂಬಿಸಲು ಹೊರಟಿರುವ ಸುಳ್ಳು ಪ್ರಚಾರಕರನ್ನ ಮತ್ತು ಸಮಾಜ ವಿಭಜಕರನ್ನು ತೀವ್ರವಾಗಿ ಖಂಡಿಸಬೇಕು ಮತ್ತು ರಾಜ್ಯದಿಂದ ಇವರನ್ನ ಗಡಿಪಾರು ಮಾಡಬೇಕು.ಲಿಂಗಾಯತರಲ್ಲಿ ಜಾತಿ ಬೇಧವಿಲ್ಲ, ಲಿಂಗ ಬೇಧವಿಲ್ಲ, ಮನುಜರೆಲ್ಲರೂ ಸಮಾನರು ಬಸವಣ್ಣನವರ ತತ್ವ ಸಮಾಜವನ್ನು ಒಗ್ಗೂಡಿಸುವುದೇ ಹೊರತು, ಒಡೆಯುವುದಲ್ಲ. ಅವರ ಹೆಸರೆನಲ್ಲಿ ದ್ವೇಷ ಬಿತ್ತುವವರಿಗೆ ಜನತೆ ತಕ್ಕ ಉತ್ತರ ಪಾಠ ಕಲಿಸಬೇಕು ಇನ್ನೋರ್ವ ದೇಶ ದ್ರೋಹಿ ವ್ಯಕ್ತಿ ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕ್ ಲಿಂಗಾಯತರು ತಾಲಿಬಾನ್ನಗಳು ಎಂದು ಮಾತನಾಡಿದ್ದಾನೆ ಪ್ರಮೋದ್ ಮುತಾಲಿಕ್ ಹಾಗೂ ಕನ್ನೇರಿ ಮಠದ ಕಾಡು ಸಿದ್ದೇಶ್ವರ ಸ್ವಾಮೀಜಿರವರನ್ನ ಗಡಿಪಾರು ಮಾಡಬೇಕು ಇಲ್ಲವಾದರೆ ರಾಜ್ಯದಲ್ಲಿ ತಾಲ್ಲೂಕ ಜಿಲ್ಲಾ ಕೇಂದ್ರಗಳಲ್ಲಿ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ ಎಂದು ಆಗ್ರಹಿಸಿದರು.ಸುದ್ದಿ ಗೋಷ್ಠಿಯಲ್ಲಿ ರಾಷ್ಟ್ರೀಯ ಕೇಂದ್ರ ಅಧ್ಯಕ್ಷರುಗಳಾದ ರೇಣುಕಪ್ಪ ಮಂತ್ರಿ, ನಾಗನಗೌಡ ಜಾಲಿಹಾಳ, ಬಸವನಗೌಡ ಪೋಲಿಸ್ ಪಾಟೀಲ್ ದೇವಪ್ಪ ಕೋಳೂರು. ಮುಖಂಡರುಗಳಾದ ಬಸವಕೇಂದ್ರದ ಗೌರವಾಧ್ಯಕ್ಷ ಹನಮಗೌಡ ಬಳ್ಳಾರಿ, ಬಸವರಾಜ ಹೂಗಾರ, ಶಿವಣ್ಣ ಕರುವಿನ.ಶರಣಪ್ಪ ಮೇಟಿ ಮಾಹಲಿಂಗಪ್ಪ ಮೇಟಿ.ಗಿರಿಮಲ್ಲಪ್ಪ ಸಾಹೂಕಾರ. ಶರಣಪ್ಪ ಹೊಸಳ್ಳಿ ದೇವೇಂದ್ರಪ್ಪ ಆವಾರಿ, ನಿಜಲಿಂಗಪ್ಪ ಮಂತ್ರಿ ಯಮನೂರಪ್ಪ ಚಿಕ್ಕಮನ್ನಾಪೂರ. ಮಲ್ಲಪ್ಪ ಹಡಪದ ಶರಣಪ್ಪ ಕೋರಿ ಶಿವಾನಂದಪ್ಪ ಬೇವೂರು ಸೇರಿದಂತೆ ಮತ್ತಿತರರು



ಉದಯವಾಹಿನಿ ಚಿತ್ರ

# ಮೊಹರಂ ಹಬ್ಬದ ಸಂಭ್ರಮದಲ್ಲಿ ಒಂದಾದ ಹೆಡಗಿಮದ್ರ ಗ್ರಾಮಸ್ಥರು

• **ಉದಯವಾಹಿನಿ ಯಾದಗಿರಿ:**



ಉದಯವಾಹಿನಿ ಚಿತ್ರ

ತಾಲ್ಲೂಕಿನ ಠಾಣಗುಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಡಗಿಮದ್ರ ಗ್ರಾಮದಲ್ಲಿ ಡಬ್ಬಿನ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿಯಲ್ಲಿ ನಿರತರಾಗಿದ್ದ ನರೇಗಾ ಕೂಲಿ ಕಾರ್ಮಿಕರು ಮೊಹರಂ ಹಬ್ಬದ ಅಂಗವಾಗಿ ಸಂಭ್ರಮದಿಂದ ಹೆಜ್ಜೆ ಹಾಕಿ ಸೌಹಾರ್ದತೆ ಹಾಗೂ ಭಾವೈಕ್ಯತೆಯ ಸಂದೇಶ ಸಾರಿದರು. ಪ್ರತಿ ವರ್ಷದಂತೆ ಈ ವರ್ಷವೂ ಹೆಡಗಿಮದ್ರ ಗ್ರಾಮದಲ್ಲಿ ಮೊಹರಂ ಹಬ್ಬವನ್ನು ಯಾವುದೇ ಜಾತಿ, ಧರ್ಮದ ಭೇದಭಾವವಿಲ್ಲದೆ ಹಿಂದೂ–ಮುಸ್ಲಿಂ ಸಮುದಾಯದವರು ಒಗ್ಗಟ್ಟಿನಿಂದ ಹಾಗೂ ಸಡಗರದಿಂದ ಆಚರಿಸಿದರು. ಗ್ರಾಮದ ಜನರ ಸಾಮರಸ್ಯ ಮತ್ತು ಪರಸ್ಪರ ಗೌರವದ ಪರಂಪರೆ ಮತ್ತೊಮ್ಮೆ ಅನಾವರಣಗೊಂಡಿತು.

# ದೂರು- ನ್ಯಾಯ ಮರೀಚಿಕೆ ಪುರುಷರಕಟ್ಟೆ ಕಾರ್ಖಾನೆಯಿಂದ ಜನತೆಗೆ ಸಂಕಷ್ಟದ ಬದುಕು

## ಸಮರ್ಪಕವಾಗಿ ಮಳೆ ಸುರಿಯದ ಕಾರಣ ತೋಡಿನಲ್ಲಿ ಈ ರಾಸಾಯನಿಕ ನೀರು ಅಲ್ಲಲ್ಲಿ ಶೇಖರಣೆಗೊಂಡಿದೆ


• **ಉದಯವಾಹಿನಿ ಪುತ್ತೂರು;**

ಪರಿಸರ ಸ್ವಚ್ಛತೆ ಜೀವನಾರೋಗ್ಯ ರಕ್ಷಣೆ ಬಗ್ಗೆ ಮಾತನಾಡುವ ಅಧಿಕಾರಿಗಳು ಜನಪ್ರತಿನಿಧಿಗಳು ದೊಡ್ಡ ದೊಡ್ಡ ಕಾರ್ಖಾನೆಗಳಿಂದ ಬರುವ ರಾಸಾಯನಿಕಯುಕ್ತ ನೀರು ಜನರ ಆರೋಗ್ಯವನ್ನು ಹಾಳು ಮಾಡುತ್ತಿರುವ ವ್ಯವಸ್ಥೆ ಕುರಿತು ಯಾವುದೇ ಕ್ರಮಕ್ಕೆ ಗೊಳ್ಳುವುದಿಲ್ಲ.

**1 : ವಿವಿಧ ರೋಗಗಳಿಗೆ ಆಹ್ವಾನ**
**2 : ನರಿಮೊಗರು ಗ್ರಾಮದ ಪುರುಷರಕಟ್ಟೆ**
**3 : ಕಲ್ಮಶ ನೀರಿನಿಂದ ಪರಿಸರ**

ದೂರು ಕೊಟ್ಟರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಶ್ರೀಮಂತವರ್ಗದ ಲಾಭಿಗೆ ಮಣಿದು ಸುಮ್ಮನಾಗುತ್ತಾರೆ.

ಇದಕ್ಕೆ ಪುತ್ತೂರಿನ ಗ್ರಾಮಾಂತರ ಪ್ರದೇಶದ ಕಾರ್ಖಾನೆ ಯೊಂದರಿಂದ ಆಗುತ್ತಿರುವ ತೊಂದರೆಗಳ ಕುರಿತು ಕಳೆದ 12 ವರ್ಷಗಳಿಂದ ದೂರು ನೀಡಲಾಗುತ್ತಿದ್ದರೂ ಅಧಿಕಾರಿ ವರ್ಗ ಮೌನ ಮುರಿಯುತ್ತಿಲ್ಲ ಎಂಬುವುದು ದೊಡ್ಡ ಉದಾಹರಣೆಯಾಗಿದೆ. ನರಿಮೊಗರು ಗ್ರಾಮದ ಪುರುಷರಕಟ್ಟೆ ಎಂಬಲ್ಲಿರುವ ಈ ಕಾರ್ಖಾನೆಯಿಂದ ಉಂಟಾಗುವ ತ್ಯಾಜ್ಯವಸ್ತುಗಳನ್ನು ಹಾಗೂ ರಾಸಾಯನಿಕಯುಕ್ತ ನೀರನ್ನು ಸಮೀಪದ ಕಣಿಗೆ ಬಿಡಲಾಗುತ್ತಿದ್ದು, ಇದು ಪುರುಷರಕಟ್ಟೆಯಿಂದ ಬೆದ್ರಾಳ ತೋಡಿನ ಮೂಲಕ ಕುಮಾರಧಾರಾ ನದಿಗೆ ಸೇರುತ್ತಿದೆ.



ಉದಯವಾಹಿನಿ ಚಿತ್ರ

ಇದೇ ನೀರನ್ನು ಪುತ್ತೂರು ನಗರದ ಜನತೆ ಕುಡಿಯಲು ಬಳಕೆ ಮಾಡುತ್ತಿದ್ದಾರೆ. ಈ ಕಾರ್ಖಾನೆಯವರು ಒಂದು ವರ್ಷದ ತ್ಯಾಜ್ಯಗಳನ್ನು ಶೇಖರಿಸಿಟ್ಟುಕೊಂಡು ಮಳೆಗಾಲ ಆರಂಭವಾದ ತಕ್ಷಣ ಅದನ್ನು ಪರಿಸರಕ್ಕೆ ಬಿಡುತ್ತಾರೆ.

ಪ್ರತೀ ವರ್ಷವೂ ಇದೇ ಸಮಸ್ಯೆ . ಈ ಬಾರಿ ಮಳೆಗಾಲ ಆರಂಭಗೊಂಡರೂ ಸಮರ್ಪಕವಾಗಿ ಮಳೆ ಸುರಿಯದ ಕಾರಣ ತೋಡಿನಲ್ಲಿ ಈ ರಾಸಾಯನಿಕ ನೀರು ಅಲ್ಲಲ್ಲಿ ಶೇಖರಣೆಗೊಂಡಿದೆ. ಇದರಿಂದ ಪರಿಸರದ ತುಂಬಾ ಅಸಾಧ್ಯವಾದ ವಾಸನೆ ಉಂಟಾಗುತ್ತಿದೆ. ಪುರುಷಕರಕಟ್ಟೆ, ಬೆದ್ರಾಳ, ಮುಕ್ವೆ ಭಾಗದ ಸುಮಾರು 500 ಕುಟುಂಬಗಳ ಪಾಲಿಗೆ ನರಕದರ್ಶನವಾಗುವಂತೆ ಮಾಡುತ್ತಿದೆ. ಈ ಕಾರ್ಖಾನೆಯಿಂದ ಉತ್ಪತ್ತಿಯಾಗುವ ತ್ಯಾಜ್ಯ-ರಾಸಾಯನಿಕಯುಕ್ತ ನೀರಿನಿಂದ ಈ ಭಾಗದಲ್ಲಿ ಜನರ ಆರೋಗ್ಯ ಕೆಡುತ್ತಿದೆ.

ತೋಡುಗಳಲ್ಲಿ ಶೇಖರಣೆಯಾಗಿರುವ ಕಲ್ಮಶ ನೀರಿನಿಂದ ಪರಿಸರದಲ್ಲಿ ದುರ್ವಾಸನೆ ಜತೆಗೆ ಸೊಳ್ಳೆ ಉತ್ಪಾದನಾ ತಾಣವಾಗುತ್ತಿದೆ.

**"ಪುರುಷಕರಕಟ್ಟೆಯಲ್ಲಿ ಇರುವ ಫ್ಯಾಕ್ಟರಿಯಿಂದ ಕಲುಷಿತ ನೀರನ್ನು ಸಾರ್ವಜನಿಕ ಚರಂಡಿಯಲ್ಲಿ ಹರಿಯಬಿಡುವುದು ಕಾನೂನುಪ್ರಕಾರ ತಪ್ಪು. ಜನತೆಯ ದೂರಿನ ಹಿನ್ನಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಚರಂಡಿ–ತೋಡಿಗೆ ಕಲುಷಿತ ನೀರು ಬಿಡದಂತೆ ಸಂಬಂಧಪಟ್ಟವರಿಗೆ ನೋಟೀಸು ನೀಡಲಾಗಿದೆ. ಮುಂದುವರಿದಲ್ಲಿ ಅವರ ವಿರುದ್ಧ ಕಾನೂನುಕ್ರಮ ಕೈಗೊಳ್ಳಲಾಗುವುದು. – ಆಶಾ ಪಿಡಿಒ ನರಿಮೊಗರು ಗ್ರಾಪಂ**

ದೂರು ಕೊಟ್ಟಾಗ ಒಮ್ಮೆ ಪರಿಶೀಲನೆ ನಾಟಕವಾಡಿ ಮತ್ತೆ ಮೌನವಾಗಿ ಬಿಡುತ್ತಾರೆ. ಜನರ ವಾಸಕ್ಕೂ ಕಷ್ಟವಾಗಿರುವ ಸ್ಥಿತಿ ಒಂದು ಕಡೆಯಾದರೆ, ಪರಿಸರ ಮಾಲಿನ್ಯ ಉಂಟಾಗುತ್ತಿದ್ದರೂ ಈ ಬಗ್ಗೆ ಸರಿಯಾದ ಕ್ರಮ ಕೈಗೊಳ್ಳಲು ಅಧಿಕಾರಿಗಳು ಮುಂದಾಗುತ್ತಿಲ್ಲ ಎಂಬ ಆರೋಪ ಸ್ಥಳೀಯರಿಂದ ವ್ಯಕ್ತವಾಗುತ್ತಿದೆ. 12 ವರ್ಷಗಳಿಂದ ದೂರು ಈ ಕಾರ್ಖಾನೆ ಆರಂಭಗೊಂಡ ಬಳಿಕ ಇಲ್ಲಿ ಆಗುತ್ತಿರುವ ಜನಾರೋಗ್ಯದ ಸಮಸ್ಯೆ ಬಗ್ಗೆ ಕಳೆದ 12 ವರ್ಷಗಳಿಂದ ಸ್ಥಳೀಯ ಗ್ರಾಪಂನಿಂದ ಹಿಡಿದು ಪರಿಸರಮಾಲಿನ್ಯ ಇಲಾಖೆಯ ಉನ್ನತಾಧಿಕಾರಿಗಳ ತನಕ ದೂರನ್ನು ಸ್ಥಳೀಯರು ನೀಡುತ್ತಿದ್ದಾರೆ. ಜನಪ್ರತಿನಿಧಿಗಳಲ್ಲಿಯೂ ತಮ್ಮ ಬದುಕಿನ ಸಂಕಷ್ಟವನ್ನು ಹೇಳಿಕೊಂಡಿದ್ದಾರೆ. ಆದರೆ ಈ ತನಕ ಯಾವುದೇ ಪ್ರಯೋಜನವಾಗಿಲ್ಲ. ಮಳೆಗಾಲ ಆರಂಭಗೊಳ್ಳುತ್ತಿರುವಂತೆ ಈ ಪುರುಷಕರಕಟ್ಟೆ ಮುಕ್ವೆ ಮತ್ತು ಬೆದ್ರಾಳ ಭಾಗದ ಜನತೆಗೆ ಆತಂಕ ಪ್ರಾರಂಭವಾಗುತ್ತದೆ.

ಕಾರ್ಖಾನೆಯ ತ್ಯಾಜ್ಯದಿಂದ ಮಕ್ಕಳ ಆರೋಗ್ಯ ಎಲ್ಲಿ ಕೆಡುತ್ತದೆಯೋ.. ನಮ್ಮ ಆರೋಗ್ಯಕ್ಕೆ ಯಾವ ಕುತ್ತು ಉಂಟಾಗುತ್ತಿದೆಯೋ ಎಂಬ ಭಯ ಕಾಡುತ್ತದೆ ಎನ್ನುತ್ತಾರೆ ಸ್ಥಳೀಯ ನಿವಾಸಿಗಳು. ಬಡವರ ಬದುಕು ರಕ್ಷಿಸಿ.

### ಜನಾರೋಗ್ಯದ ಮೇಲೆ ಗಂಭೀರ ಪರಿಣಾಮ

**ಕಾರ್ಖಾನೆಯಿಂದ ಉಂಟಾಗುತ್ತಿರುವ ಹಲವಾರು ಸಮಸ್ಯೆಗಳಿಂದ ಈ ಭಾಗದ ಜನತೆಯ ಬದುಕನ್ನು ಅಧಿಕಾರಿಗಳು ರಕ್ಷಿಸಬೇಕಾಗಿದೆ. ಕಾರ್ಖಾನೆಯಲ್ಲಿ ಇಂಗುಗುಂಡಿ ನಿರ್ಮಾಣ ಮಾಡುವ ಹಾಗೂ ಸಕ್ಕಿಂಗ್ ವ್ಯವಸ್ಥೆಯನ್ನು ಕೈಗೊಳ್ಳುವ ವ್ಯವಸ್ಥೆಗಳು ತಕ್ಷಣ ನಡೆಯಬೇಕು. ಇಲ್ಲವಾದರೆ ಈ ಪರಿಸರ ಮಾಲಿನ್ಯದಿಂದ ಜನಾರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ. ಈ ಬಗ್ಗೆ ಅಧಿಕಾರಿಗಳು ಸ್ಥಳಪರಿಶೀಲನೆ ನಡೆಸಿ ಸೂಕ್ತ ಕಾನೂನುಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಸ್ಥಳೀಯ ನಿವಾಸಿಗಳಾದ ಶಶಿ ಮತ್ತು ರಾಜೇಶ್**